ಜನಪದ ವಿಚಾರ


ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೨ ಮಾರ್ಚ್-೨೦೧೨ ಸಂಚಿಕೆ-೮



ಹಳ್ಳಿಗಳ ಸಮಾಧಿ ಮೇಲೆ ನಗರಗಳಸೌಧ ಎಂಥಿದೀ ಮೂರ್ಖತನ!

ಜನಪದ ವಿಚಾರದಲ್ಲಿ

ಮಾರ್ಚ್ - ೨೦೧೨

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಮಾರ್ಚ್ - ೨೦೧೨
ಸಂಪುಟ - ೧೨
ಸಂಚಿಕೆ - ೮

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ 08236 316344

✆ 08236 299854

e-mail : janapada@yahoo.com
web: janapada.net

ಜಗವುದಿಸುತಿದೆ ಎಳೆಯರಿಗೆ

ಜಗವುದಿಸುತಿದೆ ಎಳೆಯರಿಗೆ
ಜಗಮುಳುಗುತಿದೆ ಮುದಿಯರಿಗೆ

ಕೆಚ್ಚು ಮೂಡುತಿದೆ ತರುಣರೊಳು
ನಚ್ಚು ಕುಸಿಯುತಿದೆ ಹಳಬರೊಳು
ಇಚ್ಛೆಯಂತೆ ಜಗನಡೆಯದೆಂಬ ಹಸಿ
ಕಿಚ್ಚಿನ ಹೊಗೆ ಹಳಮನದೊಳಗೆ

ತಣ್ ತಣ್ ಗಾಳಿಗೆ ನಡುನಡುಗುತಿದೆ
ಮಣ್ಣೊಳು ಬೆರೆಯಲು ಹಣ್ಣೆಲೆ
ಕಣ್ಣಿಗೆ ಹಬ್ಬವಗೈದು ಕೆಂದಳಿರು
ತಿಣ್ಣ ನೊಡೆವುದಾ ಸನಿಹದೊಳೇ

ಒಳಿತೊಳಿತೆಲ್ಲವು ಎಳೆಯರಿಗೆ
ಹುಳುಕು ಹುಳುಕು ಹಳಹಳಬರಿಗೆ
ಎಳೆಯರ ದುಡುಕು ಹಳಬರ ಮಿಡುಕು
ನಲವಿನಾಟ ನಮ್ಮ ದೇವರಿಗೆ

ಜಗವುದಿಸುತಿದೆ ಎಳೆಯರಿಗೆ
ಜಗಮುಳುಗುತಿದೆ ಮುದಿಯರಿಗೆ

– ಪು.ತಿ.ನ

ಪು.ತಿ.ನ.ರವರ ಜನ್ಮ ಮಾಸದ ನೆನಪಿನಲ್ಲಿ

(ಮುಖಪುಟದ ಚಿತ್ರ
ಸಂಪೂರ್ಣಕ್ರಾಂತಿಗೆ ಕರೆಕೊಟ್ಟ ಜೇಪಿ)

ವಿಚಾರ ದೀಪ್ತಿ

ವಿಶ್ವಂಪುಷ್ಟಂ

ಆದಿವಾಸಿಗಳು ಸಂಸ್ಕಾರವಿಹೀನರೆಂದು ಹೇಳಲಾಗುತ್ತದೆ. ಆದರೆ ವಾಸ್ತವ ಸಂಗತಿಯೇನೆಂದರೆ ಅವರ ಬಳಿ ಹಿಂದೂಸ್ಥಾನದ ಮೂಲ ಸಂಸ್ಕಾರವಿದೆ!

ಇಂದಿನ ಆದಿವಾಸಿಭಾಷೆಗಳಲ್ಲಿ ಗೀತಾ, ಬೈಬಲ್, ಕುರಾನ್ ಇತ್ಯಾದಿಯಂಥ ಯಾವುದೇ ಪುಸ್ತಕವಿಲ್ಲ. ಆದರೆ ಅವರ ಪುಸ್ತಕ ಪ್ರಾಚೀನ ಆದಿವಾಸಿಗಳ ಭಾಷೆಯಲ್ಲಿ ಬರೆಯಲ್ಪಟ್ಟಿದೆ. ಜಗತ್ತಿನಲ್ಲಿ ಬರೆಯಲಾದ ಆದಿಗ್ರಂಥದ ಹೆಸರು 'ಋಗ್ವೇದ'. ಅದು ಆದಿವಾಸಿಗಳ ಗ್ರಂಥ. ಆದಿವಾಸಿಗಳ ಸಂಸ್ಕಾರ, ಭಾವನೆ, ಉಪಾಸನೆ, ಜೀವನಪದ್ಧತಿ ಇತ್ಯಾದಿಯೆಲ್ಲವೂ ಋಗ್ವೇದದಲ್ಲಿ ತುಂಬ ಚೆನ್ನಾಗಿ ನೋಡಲು ಸಿಗುತ್ತದೆ. ಆದಿವಾಸಿಗಳು ಕಾಡನ್ನು ಕಡಿದು ಮಾಡಿಕೊಂಡ ತಮ್ಮ ವಾಸಸ್ಥಾನಕ್ಕೆ 'ಗ್ರಾಮ' ಎಂದು ಕರೆದರು. ಯಾವರೀತಿ ಇಂದು ರಾಷ್ಟ್ರಧರ್ಮ, ವಿಶ್ವಧರ್ಮದ ಮಾತು ನಡೆಯುತ್ತದೊ ಅದೇ ರೀತಿ ಆದಿವಾಸಿಗಳದು ಗ್ರಾಮಧರ್ಮವಾಗಿತ್ತು. ಗ್ರಾಮಧರ್ಮದಲ್ಲಿ ವಿಶ್ವಧರ್ಮವೂ ಸೇರಿಕೊಂಡಿದೆ ಎಂದು ಭಾವಿಸಿ *ವಿಶ್ವಂ ಪುಷ್ಟಂ ಗ್ರಾಮೆ ಅನಾತುರಮ್* ಎಂದು ದೇವರಲ್ಲಿ ಪ್ರಾರ್ಥಿಸುತ್ತಿದ್ದರು. ನಮ್ಮ ಗ್ರಾಮದಲ್ಲಿ ಆರೋಗ್ಯವಂತ, ಪರಿಪುಷ್ಟ ವಿಶ್ವದ ದರ್ಶನವಾಗಲಿ. ಇದು ಲೌಕಿಕ ಸಂಸ್ಕೃತವಾಗಲೀ, ವೈದಿಕ ಸಂಸ್ಕೃತವಾಗಲಿ ಅಲ್ಲ. ಇದು ಪುರಾತನ ಆದಿವಾಸಿಗಳ ಭಾಷೆ. ಗ್ರಾಮ ಆಕಾರದಲ್ಲಿ ಚಿಕ್ಕದಾಗಿರಬಹುದು, ಪ್ರಕಾರದಲ್ಲಿ ಅದು ದೊಡ್ಡದಾಗಿರಬೇಕು. ಅದರಲ್ಲಿ ವಿಶ್ವ ಸೇರಿಕೊಳ್ಳುವಂತಿರಬೇಕು. ವಾಸ್ತವದಲ್ಲಿ ಗ್ರಾಮಧರ್ಮ ಮತ್ತು ವಿಶ್ವಧರ್ಮದಲ್ಲಿ ಯಾವ ವ್ಯತ್ಯಾಸವಿಲ್ಲ. ಗ್ರಾಮಧರ್ಮದ ಅರ್ಥ ಗ್ರಾಮದ ಜನ ಒಂದು ಕುಟುಂಬವಾಗಿರಬೇಕು. ವಿಶ್ವಧರ್ಮದ ಅರ್ಥ ಬೇರೆ-ಬೇರೆ ಸ್ಥಳಗಳಲ್ಲಿರುವ ಮತ್ತು ಬೇರೆ ಬೇರೆ ದೇಶಗಳಲ್ಲಿರುವ ಜನರು ಪರಸ್ಪರರ ಹಿತಬಯಸಬೇಕು ಮತ್ತು ಯಾರ ವಿರುದ್ಧವಾಗಿ ಯಾರೂ ಕೆಲಸಮಾಡಬಾರದು. ಇವರೆಡರ ಧರ್ಮ ಒಂದೆ, ಒಂದು ಪುಟ್ಟ ತಳಹದಿಯ ಮೇಲೆ ನಿಂತಿದ್ದರೆ, ಇನ್ನೊಂದು ವ್ಯಾಪಕ ತಳಹದಿಯ ಮೇಲೆ ನಿಂತಿದೆ. ಭಗವಾನ್ ವಿಷ್ಣುವಿನ ಮೂರ್ತಿ ಚಿಕ್ಕದು ಮತ್ತು ದೊಡ್ಡದು. ಎರಡೂ ವಿಷ್ಣುವೇ. ಇದೇ ರೀತಿ ಗ್ರಾಮಧರ್ಮ ಮತ್ತು ವಿಶ್ವಧರ್ಮಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಋಷಿ ಒಂದು ಕಡೆ ವಿಶ್ವದೊಂದಿಗೆ ಸಂಬಂಧ ಬೆಳೆಸಿದರೆ ಇನ್ನೊಂದು ಕಡೆ ಗ್ರಾಮನಿಷ್ಠೆಯ ಉಪದೇಶ ಕೊಡುತ್ತಾರೆ. ಗ್ರಾಮ ನಿಷ್ಠೆ ಮತ್ತು ವಿಶ್ವಪ್ರೇಮದ ಮಧ್ಯೆ ಬೇರೆ ಯಾರಿಗೂ ಬರಗೊಡುತ್ತಿರಲಿಲ್ಲ.

– *ವಿನೋಬಾ*

ಹಳ್ಳಿಗಳ ಸಮಾಧಿ ಮೇಲೆ ನಗರಗಳಸೌಧ ಎಂಥಿದೀ ಮೂರ್ಖತನ!

– ಸುರೇಂದ್ರ ಕೌಲಗಿ

ದೇಶದಲ್ಲಿ ಸುಮಾರು ಆರು ಲಕ್ಷ ಹಳ್ಳಿಗಳಿವೆಯೆಂದು ಹೇಳುತ್ತಾರೆ. ಈ ಆರು ಲಕ್ಷ ಹಳ್ಳಿಗಳಲ್ಲಿ ದೇಶದ ಇಂದಿನ ಜನಸಂಖ್ಯೆಯ ಶೇಕಡಾ ೭೦ರಷ್ಟು ಜನರು ವಾಸಿಸುತ್ತಾರೆ. ದೇಶದ ಒಟ್ಟು ಭೂ ಭಾಗದ ಶೇಕಡಾ ೯೦ರಷ್ಟು ಭೂ ಭಾಗ ಈ ಹಳ್ಳಿಗಳಿಗೆ ಸೇರಿದ್ದಾಗಿದೆ. ಅಂದರೆ ಭಾರತ ಹಳ್ಳಿಗಳ ಹಾಗೂ ಹಳ್ಳಿಗರ ದೇಶವಾಗಿದೆ. ಹಳ್ಳಿಗರ ಮುಖ್ಯ ಉದ್ಯೋಗ ಕೃಷಿ, ಆಹಾರೋತ್ಪಾದನೆ ಮತ್ತು ಕ್ಷೀರೋತ್ಪಾದನೆ. ಒಂದರ್ಥದಲ್ಲಿ ಹಳ್ಳಿಗಳು ದೇಶದ ಬೆನ್ನೆಲುಬು; ಕೃಷಿ ಅದರ ಉಸಿರಾಟ. ಇದು ವಾಸ್ತವ ಸಂಗತಿ. ಆದರೆ ನಮ್ಮ ದೇಶದ ಅರ್ಥತಜ್ಞ ಪ್ರಧಾನಿ ಡಾ॥ ಮನಮೋಹನ್ ಸಿಂಗ್ ಮತ್ತು ಯೋಜನಾ ತಜ್ಞ ಡಾ॥ಅಹ್ಲುವಾಲಿಯಾ, ಅರ್ಥ ಮಂತ್ರಿ ಪಣಬ್ ಮುಖರ್ಜಿ ಇವರು ಮೂವರು ಸೇರಿ ಮೇಲೆ ತಿಳಿಸಲಾದ ದೇಶದ ಪರಿಸ್ಥಿತಿಯನ್ನು ತಲೆಕೆಳಕು ಮಾಡುತ್ತಿದ್ದಾರೆ. ಹಳ್ಳಿಗಳನ್ನು ನಾಶ ಮಾಡಬೇಕೆಂಬುದು ಅವರ ಸಂಕಲ್ಪವಾಗಿದೆ. ಹಳ್ಳಿಗಳನ್ನು ಅಕ್ಷರಶಃ ನಾಶಮಾಡಿ ಅವುಗಳ ಮೇಲೆ ನಗರಗಳ ಸೌಧ ಕಟ್ಟಬೇಕೆಂಬುದೇ ಅವರ ವೃತ್ತಿಯಾಗಿದೆ. ತಮ್ಮೀ ಸಂಕಲ್ಪ ಮತ್ತು ವೃತ್ತಿಗೆ ದೇಶದ ಜನ ಅಡ್ಡಬಾರದಂತೆ ಅಭಿವೃದ್ಧಿ ಹೆಸರಿನಲ್ಲಿ ದೇಶದ ತುಂಬ ಹಣದ ಹೊಳೆ ಹರಿಸುತ್ತಿದ್ದಾರೆ. ಜನರೂ ಸಹ ಹಣಕ್ಕೆ ಮೋಹಿತರಾಗಿ ತಮ್ಮ ವಿವೇಚನಾ ಶಕ್ತಿ ಕಳೆದುಕೊಂಡಿದ್ದಾರೆ. ಹಣ ಸಿಕ್ಕರೆ ಸಾಕು ಹಳ್ಳಿಗರು ತಮ್ಮ ಭೂಮಿ ಮಾರಲು ಸಿದ್ಧವಿದ್ದಾರೆ; ತಮ್ಮ ಆತ್ಮಗೌರವವನ್ನು ಕಳೆದುಕೊಳ್ಳಲು ಸಿದ್ಧರಿದ್ದಾರೆ. ಹಣಕ್ಕಾಗಿ ಅಶಿಕ್ಷಿತರು, ಸುಶಿಕ್ಷಿತರು ಏನನ್ನೂ ಮಾಡಲು ಸಿದ್ಧರಿದ್ದಾರೆ. ತಮ್ಮ ಸನಿಹದಲ್ಲೇ ಅಣುಸ್ಥಾವರಗಳ ನಿರ್ಮಾಣವಾಗಿ ಅದರಿಂದಾಗಿ ತಮ್ಮ ಪ್ರಾಣವನ್ನು ಅಪಾಯದ ಅಂಚಿನಲ್ಲಿಡಲೂ ಸಿದ್ಧರಿದ್ದಾರೆ. ಅಭಿವೃದ್ಧಿಯ ಹೆಸರಿನಲ್ಲಿ ದೇಶದ ಕೃಷಿಭೂಮಿಯ ವಿಸ್ತಾರ, ಅರಣ್ಯಗಳ ವಿಸ್ತಾರ ದಿನೇದಿನೇ ಕಡಿಮೆಯಾಗುತ್ತಿದೆ. ಮೇಲೆ ತಿಳಿಸಲಾದ ಮೂವರು ಸೂತ್ರಧಾರರು ಎಷ್ಟು ಮೂರ್ಖರಿದ್ದಾರೆಂದರೆ ಇರುವ ಭೂಮಿಯ ವಿಸ್ತಾರ ಶಾಶ್ವತ. ಅದನ್ನು ಒಂದು ಅಂಗುಲದಷ್ಟೂ ಹೆಚ್ಚು ಮಾಡಲು ಯಾರಿಂದಲೂ ಸಾಧ್ಯವಿಲ್ಲವೆಂಬ ಮೂಲ ಸತ್ಯವನ್ನು ತಿಳಿಯದವರಾಗಿದ್ದಾರೆ. ವಿದ್ಯುತ್ ಅಭಾವವಾದಾಗ ಕಡಿಮೆ ವಿದ್ಯುತ್ ಬಳಸಿ; ಆಹಾರಾಭಾವಾದಾಗ ಕಡಿಮೆ ಆಹಾರ ಬಳಸಿ, ಅದನ್ನು ಹಾಳು ಮಾಡಬೇಡಿ; ನೀರಿನ ಅಭಾವವಾದಾಗ ಅದನ್ನು ಮಿತವಾಗಿ ಬಳಸಿ ಎಂದು ಉಪದೇಶ ಮಾಡುವ ಅವರು ಭೂ ವಿಸ್ತಾರ ಕಡಿಮೆಯಾಗುತ್ತಿಯಾದ್ದರಿಂದ ಭೂಮಿಯ ಮೇಲೆ ಯಾವುದೇ ಸ್ಥಾವರಗಳ ನಿರ್ಮಾಣ ಮಾಡಲು ಯೋಚನೆ ಮಾಡಿ ಎಂದೇಕೆ ಹೇಳುವುದಿಲ್ಲ? ಅರಣ್ಯವಿಲ್ಲದಿದ್ದರೆ ಪ್ರಕೃತಿಯ ಋತುಮಾನವೇ ವ್ಯತ್ಯಾಸಗೊಂಡು ಮಾನವ ಜೀವನ ಅಸ್ತವ್ಯಸ್ತಗೊಳ್ಳುತ್ತಾದ್ದರಿಂದ ಅರಣ್ಯನಾಶಮಾಡಬೇಡಿ, ಸಾಮಿಲ್ ಹಾಕಬೇಡಿ ಎಂದೇಕೆ ಹೇಳುವುದಿಲ್ಲ? ಭೂ

ಉತ್ಖನನ ಮಾಡಿಮಾಡಿ ಎಲ್ಲ ಪ್ರಕಾರದ ಭೂ ಸಂಪತ್ತು ಬರಿದಾಗುತ್ತಿದೆಯಾದ್ದರಿಂದ ಗಣಿಗಾರಿಕೆಯನ್ನು ಏಕೆ ನಿಲ್ಲಿಸುವುದಿಲ್ಲ? ಜನ ಈ ಪ್ರಶ್ನೆಯನ್ನು ಕೇಳಿದರೆ ನಿಮಗೆ ರಸ್ತೆ ಬೇಡವೊ, ವಿದ್ಯುತ್‌ಶಕ್ತಿ ಬೇಡವೊ, ಮನೆಗಳು ಬೇಡವೊ, ನಾಜೂಕಾದ ಜೀವನ ಬೇಡವೋ ಎಂಬಂಥ ಬಾಲಿಶ ಪ್ರಶ್ನೆಗಳನ್ನು ಕೇಳಿ ಅವರಷ್ಟೇ ಬಾಲಿಶರಾದ ಜನರ ಬಾಯಿಯನ್ನು ಮುಚ್ಚಿಸುತ್ತಾರೆ. ಪರಿಸರವಾದಿಗಳನ್ನು ದೇಶದ್ರೋಹಿಗಳೆಂಬಂತೆ ಕಾಣುತ್ತಾರೆ. ಪರಿಸರವಾದಿಗಳಿಂದ ವಿರೋಧ ಬಂದರೆ ಅವರಲ್ಲಿಯ ಒಗ್ಗಟ್ಟನ್ನು ಮುರಿದು, ಹಣ ಹೊಳೆ ಹರಿಸಿ ಸಹ್ಯಾದ್ರಿ ಬೆಟ್ಟವನ್ನು ಹಾಳು ಮಾಡುತ್ತಾರೆ, ಹಿಮಾಲಯವನ್ನು ಹಾಳುಮಾಡುತ್ತಾರೆ. ಯಾವ ನದಿಗಳನ್ನೂ ಬಿಡುವುದಿಲ್ಲ, ಯಾವ ಸಾಗರವನ್ನೂ ಬಿಡುವುದಿಲ್ಲ. ನಗರಗಳೆಂಬ ಮಾಯಾಪೆಟ್ಟಿಗೆಗಳನ್ನು ತಯಾರಿಸಿ ಅದರೊಳಗೆ ಹಳ್ಳಿಗರು ನುಸುಳುವಂತೆ ಮಾಡಿ ಸತ್ಯದ ಮುಖಮುಚ್ಚುವಂತೆ ಮಾಡುತ್ತಾರೆ! ನಗರಗಳೆಂಬ ಮಾಯಾ ಪೆಟ್ಟಿಗೆಯೊಳಗೆ ಹೋದರೆ ಸಾಕು, ಅಲ್ಲಿಯ ಅರೆಬೆತ್ತಲೆ ನೃತ್ಯ, ಅಲ್ಲಿಯ ಥಳುಕುಬಳುಕಿನ ಕಾರುಗಳು, ಹೇಮಾಮಾಲಿನಿಯ ಕೆನ್ನೆಗಳಂತೆ ಇರುವ ನುಣುಪಾದ ಹೆದ್ದಾರಿಗಳು, ಮೋರಿ ಬಳಿಯ ಸುಗಂಧ ಲೇಪಿತ ತಿಂಡಿಗಳು, ಇಂಗ್ಲಿಷ್ಗನ್ನಡದ ಮೋಹಕ ಶಬ್ದಗಳು, ಬಟ್ಟೆ ಹಾಕಿಕೊಂಡರೂ ಮೈಯ ವೈಭವವೆಲ್ಲ ಕಾಣುವಂಥ ಪೋಷಾಕುಗಳು, ಅಹರ್ನಿಶಿ ನಡೆಯುವ ಅಶ್ಲೀಲ ಚಿತ್ರ ಪ್ರದರ್ಶನದ ಚಿತ್ರಮಂದಿರಗಳು, ಯಾರ ಅಂಕುಶಕ್ಕೂ ದೊರೆಯಲು ಕಷ್ಟಸಾಧ್ಯವಾಗುವ ಮೊಬೈಲ್‌ಗಳ ಸರಳ ಉಪಯೋಗ ಮುಂತಾದವುಗಳಿಂದ ಮೋಹಿತರಾಗಿ ತಮ್ಮ ಹಳ್ಳಿಯ ಜೀವನದ ಸತ್ಯಗಳನ್ನೇ ಮರೆತುಬಿಡುತ್ತಾರೆ. ಆಗ ಹಳ್ಳಿಗಳನ್ನು ಯೋಜನಾಬದ್ಧವಾಗಿ ನಾಶಮಾಡಿ ಅವುಗಳ ಸಮಾಧಿಯ ಮೇಲೆ ನಗರಗಳ ಸೌಧಗಳನ್ನು ಕಟ್ಟಲು ಕೇಂದ್ರ ಸರ್ಕಾರಕ್ಕೂ, ರಾಜ್ಯ ಸರ್ಕಾರಗಳಿಗೂ ಸುಲಭ ಸಾಧ್ಯವಾಗುತ್ತದೆ. ಮೊದಲು ಬೆಂಗಳೂರಿನಲ್ಲಿ ಮಾತ್ರ ಒಂದು ವಿಧಾನಸೌಧವಿತ್ತು. ಅದರ ಪಕ್ಕ ವಿಕಾಸಸೌಧ ಬಂದಿತು. ಈಗ ಪ್ರತಿಯೊಂದು ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧಗಳು ತಲೆಯೆತ್ತಿವೆ. ಈ ಸೌಧಗಳೇ ಹಳ್ಳಿಗಳಲ್ಲಿಯ ಭೂಮಿ ಹೆಚ್ಚುಹೆಚ್ಚಾಗಿ ಕೃಷಿಯೇತರ ಚಟುವಟಿಕೆಗಳಿಗೆ ಒಳಪಡುವಂತೆ ಮಾಡುತ್ತಿವೆ. ಈ ಮಿನಿವಿಧಾನಸೌಧಗಳಿಗೆ ತಮ್ಮದೇ ಆದ ಯಾವ ಚಿಂತೆಯಿಲ್ಲ, ಚಿಂತನೆಯಿಲ್ಲ. ಇವೆಲ್ಲವೂ ಬೆಂಗಳೂರಿನಲ್ಲಿರುವ ವಿಧಾನಸೌಧದಿಂದ ಹೊರಡುವ ಸಂಗೀತಕ್ಕೆ ತಕ್ಕಂತೆ ಹೆಜ್ಜೆಹಾಕುತ್ತವೆ. ವಿಧಾನಸೌಧದ ಶಾಸಕರು ಸದನ ನಡೆಯುವಾಗ ನಿದ್ರೆ ಮಾಡುತ್ತಿದ್ದರೆ, ಅಶ್ಲೀಲ ಚಿತ್ರ ನೋಡುತ್ತಿದ್ದರೆ, ಕೈ ಕೈ ಮಿಲಾಯಿಸುತ್ತಿದ್ದರೆ ಅವರ ಅನುಕರಣೆ ಜಿಲ್ಲಾ ಪರಿಷತ್‌ಗಳ ಸಭೆಯಲ್ಲಿ, ತಾಲ್ಲೂಕು ಪಂಚಾಯಿತಿಗಳ ಸಭೆಯಲಿ ನಡೆಯುತ್ತದೆ. ಅದು ಗ್ರಾಮ ಪಂಚಾಯತ್ ಸಭೆಗಳವರೆಗೂ ಬಂದು ಮುಟ್ಟುತ್ತದೆ. ಲೋಕಸಭೆಯಲ್ಲಿ ಮತ್ತು ಎಲ್ಲ ರಾಜ್ಯಗಳ ಎಲ್ಲ ಶಾಸನ ಸಭೆಗಳಲ್ಲಿರುವ ಎಲ್ಲ ಸದಸ್ಯರಲ್ಲಿರುವ ಮೂಲಶಕ್ತಿ ವಿಚಾರಶಕ್ತಿಯಲ್ಲ, ನೈತಿಕಶಕ್ತಿಯಲ್ಲ. ಇರುವ ಒಂದೇ ಶಕ್ತಿ ಹಣದಶಕ್ತಿ. ತಮ್ಮ ಇಡಿ ರಾಜಕಾರಣವನ್ನು ಅವರು ಮಾಡುತ್ತಿರುವುದು ಹಣಶಕ್ತಿಯ ಬಲದಿಂದ. ತಾವೂ ಹಣದ ದಾಸರಾಗಿದ್ದಾರೆ ದೇಶದ ಜನರನ್ನೂ ಹಣದ ದಾಸರನ್ನಾಗಿ ಮಾಡಿದ್ದಾರೆ. ಮತ ಪಡೆಯಲು ಹಣಹಂಚುವುದಂತೂ ಇದ್ದೇಇದೆ. ಈಗ ಅದರೊಂದಿಗೆ ಜಾತಿರಾಜಕಾರಣ, ಕೋಮುರಾಜಕಾರಣಗಳೂ ಸೇರಿವೆ. ಜಾತಿರಾಜಕಾರಣದಿಂದ ಸಮಾಜ ಒಡೆದರೂ ಚಿಂತೆಯಿಲ್ಲ ಅವರಿಗೆ. ಧರ್ಮದ ಆಧಾರದ ಮೇಲೆ ದೇಶದ

ವಿಭಜನೆಯಾಗುತ್ತಾ ಹೋಗುತ್ತದೆಂಬ ಪರಿವೆಯೂ ಇಲ್ಲ. ತಮ್ಮ ತಮ್ಮ ಧರ್ಮದ ಜನರಿಗೆ ಮೀಸಲಾತಿ ಬೇಕೆಂದು ವಾದಿಸುತ್ತಾ ಫಾಸಿ ಶಿಕ್ಷೆಗೂ ಒಳಗಾಗಲು ಸಿದ್ಧರೆಂದು ಹೇಳುವ ರಾಜಕಾರಣಿಗಳು ಅಧಿಕಾರದ ಕೇಂದ್ರಸ್ಥಾನಗಳಲ್ಲಿದ್ದಾರೆ. ಚುನಾವಣಾ ಆಯೋಗ ಸಂವಿಧನಾತ್ಮಕವಾಗಿ ಸ್ವತಂತ್ರ-ಸ್ವಾಯತ್ತ ಸಂಸ್ಥೆಯಾಗಿದ್ದರೂ ಕೇಂದ್ರ ಸರ್ಕಾರದ ಕೈಗೊಂಬೆಯಾಗಿದೆ. ಚುನಾವಣಾ ಸಂಹಿತೆ ಮುರಿದದ್ದಕ್ಕಾಗಿ ಇಂದು ಕಾರಣ ಕೇಳಿ ನೋಟೀಸ್ ಕೊಡುತ್ತದೆ, ಮಾರನೇ ದಿನವೇ ಅದನ್ನು ಹಿಂದಕ್ಕೆ ಪಡೆಯುತ್ತದೆ! ಅಲ್ಪ ಸಂಖ್ಯಾತರನ್ನು ಓಲೈಸುವುದೇ ಎಲ್ಲ ರಾಜಕೀಯ ಪಕ್ಷಗಳ ಕಸುಬಾಗಿದೆ.

ಹಳ್ಳಿಗಳ ಸಮಾಧಿಯ ಮೇಲೆ ನಗರಗಳ ಸೌಧ ಕಟ್ಟುವ ನೀತಿಯ ಹಿಂದೆ ದೊಡ್ಡ ರಾಜಕಾರಣವೇ ಇದೆ. ಈ ರಾಜಕಾರಣ ಅತ್ಯಂತ ಸಂಕೀರ್ಣವಾಗಿದೆ. ಈ ರಾಜಕಾರಣದಲ್ಲಿ ಕೋಮುರಾಜಕಾರಣ, ಜಾತಿರಾಜಕಾರಣ, ಬಡವರನ್ನೂ ನಿರುದ್ಯೋಗಿಗಳನ್ನೂ ಓಲೈಸುವ ರಾಜಕಾರಣ, ಭೂ ದಂಧೆಯ ರಾಜಕಾರಣ, ಇಂಗ್ಲಿಷ್ ಭಾಷಾ ಹೆಸರಿನಲ್ಲಿ ಹಣಮಾಡುವ ರಾಜಕಾರಣ, ಸುತ್ತಮುತ್ತಲಿನ ಪ್ರಕೃತಿ ಸಂಪತ್ತನ್ನು ಲೂಟಿಮಾಡುವ ರಾಜಕಾರಣ, ಭೂಕಬಳಿಕೆಯ ರಾಜಕಾರಣ ಇಂಥ ಅನೇಕ ಪೈಶಾಚಿಕ ಶಕ್ತಿಗಳ ಸಂಕೀರ್ಣ ರಾಜಕಾರಣ ಅದಾಗಿದೆ. ಹಳ್ಳಿಗಳ ಸೃಷ್ಟಿ ದೇವರದು, ನಗರಗಳ ಸೃಷ್ಟಿ ಸೈತಾನನದು ಎಂದು ಕವಿ ರವೀಂದ್ರನಾಥ ಟಾಗೋರ್ ಹೇಳಿದ ಮಾತು ನಿಜವಾಗುತ್ತಿದೆ.

ಹಳ್ಳಿಗಳ ಸಮಾಧಿಕರಣಕ್ಕೆ ಹಳ್ಳಿಗರೂ ಕಾರಣರಾಗುತ್ತಿರುವುದು ವಿರೋಧಾಭಾಸದ ಸಂಗತಿ. ಹಳ್ಳಿಗರು ಕಾಮಧೇನುವಂತಿರುವ ಭೂಮಿಯನ್ನು ಕ್ಷಣಕಾಲಮಾತ್ರ ಬಾಳುವ ಹಣಕ್ಕೆ ಮಾರುತ್ತಿದ್ದಾರೆ. ತಮ್ಮ ಜಮೀನಿನ ಮೇಲೆ ಐಶಾರಾಮಿ ಕಟ್ಟಡ ಕಟ್ಟುತ್ತಿದ್ದಾರೆ. ಆಹಾರಧಾನ್ಯದ ತೆನೆಗಳ ಧ್ವಜಗಳು ನಿಲ್ಲುವ ಭೂಮಿಯ ಮೇಲೆ ಪೆಟ್ರೋಲ್ ಬಂಕ್ ಸ್ಥಾಪಿಸುವ ಮೂರ್ಖ ಕೆಲಸ ಮಾಡುತ್ತಿದ್ದಾರೆ. ತಮ್ಮ ಮಕ್ಕಳನ್ನು ಯಾವುದೋ ಕಾರಣಕ್ಕೆ ನಗರಗಳಿಗೆ ಸಾಗಹಾಕಿ ತಮ್ಮ ಕುಲ ಕಸುಬಾದ, ತಮ್ಮ ಸ್ವಧರ್ಮವಾದ ಕೃಷಿ ಮಾಡುವುದಕ್ಕೇ ಜನಶಕ್ತಿ ದೊರೆಯದಂತೆ ಮಾಡಿದ್ದಾರೆ. ಇನ್ನು ಮೂರು ನಾಲ್ಕು ತಲೆಮಾರು ಕಳೆದರೆ ನೇಗಿಲು ಹಿಡಿಯಲು ಹಳ್ಳಿಯಲ್ಲಿ ಒಬ್ಬ ವ್ಯಕ್ತಿಯೂ ದೊರೆಯದಂತಾಗುವ ಸ್ಥಿತಿಯನ್ನು ಹಳ್ಳಿಗರೇ ತಂದುಕೊಂಡಿದ್ದಾರೆ. ವಿಮಾನ ನಿಲ್ದಾಣ ಮುಖ್ಯವೋ ಆಹಾರ ಬೆಳೆಯುವುದು ಮುಖ್ಯವೋ ಎಂಬ ತರತಮಗಳನ್ನು ಹಳ್ಳಿಗರು ತಿಳಿಯದವರಾಗಿದ್ದಾರೆ.

ಹಳ್ಳಿಗಳ ಸಮಾಧಿಯ ಮೇಲೆ ನಗರಗಳ ಸೌಧಗಳು ನಿರ್ಮಾಣವಾಗುವುದಕ್ಕೆ ಇನ್ನೊಂದು ಮುಖ್ಯ ಕಾರಣ ಶಿಕ್ಷಣ. ಇಂದು ಸರ್ಕಾರ ದೇಶದ ಮಕ್ಕಳಿಗೆ ಕೊಡಮಾಡುತ್ತಿರುವ ಶಿಕ್ಷಣದಲ್ಲಿ ಒಂದಲ್ಲ ನೂರಾರು ದೋಷಗಳಿವೆ. ಸರ್ಕಾರಿ ಶಿಕ್ಷಣ ಪಡೆದವರು ಸ್ವಾಭಿಮಾನ ಶೂನ್ಯರಾಗುತ್ತಿದ್ದಾರೆ. ಶರೀರಶ್ರಮದಿಂದ ದೂರವಾಗುತ್ತಿದ್ದಾರೆ. ಕರ್ಮಮಾಡುತ್ತಾ ನೂರು ವರ್ಷ ಬದುಕುವ ಬದಲು ನಿರುದ್ಯೋಗಿಗಳಾಗಿ ಮೂವತ್ತು ವರ್ಷಗಳಲ್ಲೇ ಹೃದಯಾಘಾತದಿಂದ ಸಾಯುತ್ತಿದ್ದಾರೆ. ಆಧ್ಯಾತ್ಮಿಕ ಮೌಲ್ಯಗಳಿಂದ ವಂಚಿತರಾಗುತ್ತಿದ್ದಾರೆ. ಜೀವನದಲ್ಲಿ ಹಣಕ್ಕಿಂತ ದೊಡ್ಡ ವಸ್ತು ಬೇರೊಂದಿಲ್ಲ ಎಂಬ ಭಾವನೆ ಬೆಳೆಸಿಕೊಳ್ಳುತ್ತಿದ್ದಾರೆ. ತಮ್ಮ ಜೀವನವನ್ನು ಪಾಶ್ಚಿಮಾತ್ಯ ಸಂಸ್ಕೃತಿಗೆ ಒಡ್ಡುತ್ತಿದ್ದಾರೆ. ತಮ್ಮ ತಾಯಿಭಾಷೆ, ಪ್ರದೇಶಭಾಷೆಗೆ ಬದಲಾಗಿ ಇಂಗ್ಲಿಷ್ ಭಾಷೆಗೆ

ಎಲ್ಲಿಲ್ಲದಷ್ಟು ಮಹತ್ವಕೊಟ್ಟು ತಮ್ಮ ವ್ಯಕ್ತಿತ್ವ ವಿಕಸನಕ್ಕೆ ತಡೆಮಾಡಿಕೊಂಡಿದ್ದಾರೆ. ಪರಸ್ಪರರಲ್ಲಿಯೇ ಸಹಜ ಸಂವಹನಕ್ಕೆ ಗೋಡೆ ಹಾಕಿಕೊಂಡಿದ್ದಾರೆ. ತಮ್ಮ ಜಮೀನಿನಲ್ಲಿಯೇ ತಮ್ಮ ಸಮಾಧಿಮಾಡಿಕೊಂಡು ಅದರ ಮೇಲೆ ನಿರ್ಜೀವವಾದ ಸುಂದರ ತಾಜ್‌ಮಹಲ್‌ನಂಥ ಸೌಧಗಳನ್ನು ಕಟ್ಟಿಕೊಂಡಿದ್ದಾರೆ. ಹಳ್ಳಿಗರು ಭೂಮಿಗಾಗಿ ಆಸ್ತಿಗಾಗಿ ಜಗಳಮಾಡಿಕೊಂಡು ನಗರಗಳಲ್ಲಿರುವ ನ್ಯಾಯಾಲಯಗಳಿಗೆ ಹೋಗಿ ಸಮಯ-ಹಣ-ಶ್ರಮ-ಗೌರವ ಎಲ್ಲ ಕಳೆದುಕೊಳ್ಳುತ್ತಾರೆ. ನಗರಗಳಲ್ಲಿರುವ ವಕೀಲರು ತಮ್ಮ ಹಣ ಸಂಪಾದನೆಯ ಮೋಹದಿಂದ ಬಡ ಮತ್ತು ಅಶಿಕ್ಷಿತ ಹಳ್ಳಿಗರನ್ನು ನ್ಯಾಯ ದೊರಕಿಸಿಕೊಡುವ ಹೆಸರಿನಲ್ಲಿ ಶೋಷಣೆ ಮಾಡುತ್ತಾ ಹೋಗುತ್ತಾರೆ. ಹಳ್ಳಿಗರು ತಮ್ಮ ಹಳ್ಳಿಗಳಲ್ಲಿದ್ದ ಪಂಚಪರಮೇಶ್ವರ ಪದ್ಧತಿಯನ್ನು ಹಾಳುಗೆಡುಹಿ ಗ್ರಾಮಗಳು ನಶಿಸಲು, ನಗರಗಳು ಕೊಬ್ಬಲು ಕಾರಣರಾಗಿದ್ದಾರೆ.

ಹಳ್ಳಿಗಳ ಸಮಾಧಿಯ ಮೇಲೆ ನಗರಗಳ ಸೌಧ ನಿರ್ಮಾಣವಾಗಲು ಇನ್ನೊಂದು ಪ್ರಬಲ ಕಾರಣ ಸ್ವಾವಲಂಬಿಗಳಾಗಿದ್ದ ಹಳ್ಳಿಗಳನ್ನು ಪರಾವಲಂಬಿಗಳನ್ನಾಗಿ ಮಾಡಿ ನಗರಗಳ ಕೈಗೊಂಬೆಗಳನ್ನಾಗಿಸಿ ನಗರದಲ್ಲಿಯ ಕೈಗಾರಿಕೆಗಳಿಗೆ ಕಚ್ಚಾವಸ್ತು ಪೂರೈಸುವ ಮೂಲವನ್ನಾಗಿ ಮಾಡಿದ್ದು. ಆಹಾರ ಬೆಳೆದು ಕೊಡುವ ರೈತರು ಸ್ವತಃ ಸರ್ಕಾರ ಕೊಡುವ ಆಹಾರ ಪಡಿತರ ಚೀಟಿಯನ್ನು ಹಿಡಿದು ಸೊಸೈಟಿ ಮುಂದೆ ನಿಲ್ಲುತ್ತಿದ್ದಾರೆ. ತಮ್ಮ ಮನೆಯಲ್ಲಿಯ ಬೆಳೆಯುವ ಮಕ್ಕಳಿಗೆ, ಗರ್ಭಿಣಿಯರಿಗೆ, ತಾಯಂದಿರಿಗೆ, ಹಸುಗಳ ಕರುಗಳಿಗೆ ಅಗತ್ಯವಾದ ಹಾಲು ತಪ್ಪಿಸಿ ಹಣಕ್ಕಾಗಿ ಅದನ್ನು ಮಾರುತ್ತಿದ್ದಾರೆ. ಸಾಮಾನ್ಯವಾದ ಮತ್ತು ಪರಂಪರಾಗತ ಮನೆಗಳ ನಿರ್ಮಾಣ ಕೈಬಿಟ್ಟು ಸಿಮೆಂಟ್ ಬ್ಲಾಕ್, ಪಾಲಿಶ್ ಮಾಡಿದ ಕಲ್ಲುಗಳನ್ನು ಉಪಯೋಗಿಸಿ ಮನೆಕಟ್ಟುವುದರ ಮೂಲಕ ನಗರಗಳಿಗೆ ಹಣದ ಹೊಳೆ ಹರಿಸುತ್ತಿದ್ದಾರೆ. ತಮಗೆ ಅಗತ್ಯವಾದ ಬಟ್ಟೆ ಮತ್ತು ಇತರ ಸಾಮಾನುಗಳನ್ನು ನಗರದಿಂದ ಖರೀದಿಸಿ ತಾವು ನಿರುದ್ಯೋಗಿಗಳಾಗಿದ್ದಾರೆ.

ಹಳ್ಳಿಗಳನ್ನು ನಗರಗಳನ್ನು ಕಟ್ಟುವುದರ ಮೂಲಕ ನಮ್ಮ ದೇಶದ ಇಂದಿನ ನಾಯಕರು ಮಹಾ ತಪ್ಪು ಮಾಡುತ್ತಿದ್ದಾರೆ, ಮಹಾ ಅನ್ಯಾಯ ಮಾಡುತ್ತಿದ್ದಾರೆ. ರಾಜ್ಯಾಂತೆ ನರಕ ಪ್ರಾಪ್ತಿಃ ಎಂಬಂಥ ಕೆಲಸವನ್ನು ರಾಜಕಾರಣಿಗಳು ಮಾಡುತ್ತಿದ್ದಾರೆ. ಈಜಿಪ್ತಿನಲ್ಲಿರುವ ಪಿರಮಿಡ್ಡುಗಳ ರಚನೆಯಂತೆ ಭಾರತದ ಸಮಾಜದ ವ್ಯವಸ್ಥೆ ಇರಬೇಕು ಅಂದರೆ ಹಳ್ಳಿಗಳ ಮೂಲ ತಳಹದಿಯ ಮೇಲೆ ಕಟ್ಟಡದ ಕೊನೆಯ ತುದಿಯಲ್ಲಿ ದೇಶದ ರಾಜಧಾನಿಯಿರಬೇಕು. ಆದರೆ ಇಂದು ತಲೆಕೆಳಗಾದ ಪಿರಮಿಡ್ ರಚಿಸುವ ಕೆಲಸವನ್ನು ಸರ್ಕಾರಗಳು ಮಾಡುತ್ತಿವೆ. ದೇಶದ ರಾಜಧಾನಿಯ ತಲೆಯ ಮೇಲೆ ಆರು ಲಕ್ಷ ಹಳ್ಳಿಗಳ ಭಾರವನ್ನು ಹಾಕಲಾಗುತ್ತಿದೆ.

ಭಾರತದ ಸಂವಿಧಾನಾತ್ಮಕ ಗಣರಾಜ್ಯ ಚೌಕಟ್ಟಿನಲ್ಲಿಯೇ ಗ್ರಾಮಸ್ವರಾಜ್ಯಗಳುಳ್ಳ ಗಣರಾಜ್ಯ ರಚನೆಯಾಗಬೇಕು. ಇಂದಿನ ಅಭಿವೃದ್ಧಿನೀತಿ ಎಲ್ಲಿ ತಪ್ಪುತ್ತಿದೆ ಎಂಬ ಬಗ್ಗೆ ಜನತೆ ಆಲೋಚಿಸಬೇಕು ಅದನ್ನು ಸರಿಪಡಿಸುವ ಬಗ್ಗೆ ಜನತೆ ಆಂದೋಲನ ಹೂಡಬೇಕು. ಈ ಆಂದೋಲನದಲ್ಲಿ ಎಲ್ಲ ಪರಿಸರವಾದಿಗಳೂ, ಪ್ರಗತಿಪರ ಚಿಂತಕರೂ, ಗ್ರಾಮೀಣ ಯುವಕರೂ ಪಾಲ್ಗೊಳ್ಳಬೇಕು. ಹಳ್ಳಿಗಳ ಸಮಾಧಿಯ ಮೇಲೆ ನಗರಗಳ ಸೌಧವನ್ನು ಕಟ್ಟುವ ಮೂರ್ಖ ಪ್ರಯತ್ನಕ್ಕೆ ಕಡಿವಾಣ ಹಾಕಬೇಕು.

* * *

ಅಣ್ಣಾ ಹಜಾರೆ ಹೋರಾಟದ ಸವಾಲು ಮತ್ತು ಮಿತಿಗಳು

– ಸುಮಂಗಲಾ ಯು.ಕಿಣಿ

–: ಸವಾಲು :–

೧. ಪ್ರಧಾನಿ ಹುದ್ದೆ ಸಹ ಲೋಕಪಾಲ ವ್ಯಾಪ್ತಿಯಲ್ಲಿ ಇರಲೇಬೇಕಲ್ಲದೆ, ಪ್ರಧಾನಿಗೆ ಯಾವುದೇ ರೀತಿಯ ವಿನಾಯಿತಿ ಇರಕೂಡದು.

೨. ಸಂಸತ್ತಿನಲ್ಲಿ ಮತ ಚಲಾಯಿಸಲು ಅಥವಾ ಮಾತನಾಡಲು ಲಂಚ ಸ್ವೀಕರಿಸಿದ ಆರೋಪಗಳ ಬಗ್ಗೆಯೂ ಲೋಕಪಾಲ ತನಿಖೆ ನಡೆಸುವಂತಿರಬೇಕು.

೩. ನ್ಯಾಯಾಧೀಶರು ಕೂಡ ಲೋಕಪಾಲ ವ್ಯಾಪ್ತಿಯಲ್ಲಿದ್ದು ನ್ಯಾಯಾಂಗಕ್ಕೂ ಕಾಯ್ದೆಯಲ್ಲಿ ವಿನಾಯಿತಿ ಇರಕೂಡದು.

೪. ಸಾರ್ವಜನಿಕರ ವಿರುದ್ಧ ಪಿತೂರಿ ನಡೆಸಿ, ಕೆಲಸ ಮಾಡಿಕೊಡದ (ನಿಯಮಿತ ಅವಧಿಯೊಳಗೆ) ಸರ್ಕಾರಿ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡು ದಂಡ ವಿಧಿಸಬೇಕು.

೫. ಸಂವಿಧನಾತ್ಮಕ ಹುದ್ದೆಗಳನ್ನು ನಿಭಾಯಿಸಿ ನಿವೃತ್ತರಾದವರನ್ನೊಳಗೊಂಡ ಶೋಧನಾ ಸಮಿತಿಯಿಂದ ಮೊದಲ ಪಟ್ಟಿ ಸಿದ್ಧವಾಗಿ, ಲೋಕಪಾಲ ಸದಸ್ಯರ ನೇಮಕಕ್ಕೆ ಇಬ್ಬರು ಪ್ರತಿನಿಧಿಗಳು, ನಾಲ್ವರು ನ್ಯಾಯಾಧೀಶರು ಹಾಗೂ ಎರಡು ಸಂವಿಧನಾತ್ಮಕ ಸ್ವಾಯತ್ತ ಸಂಸ್ಥೆಗಳನ್ನೊಳಗೊಂಡ ಸಮಿತಿ ರಚನೆಯಾಗಬೇಕು.

೬. ಸಿಬಿಐನ ಭ್ರಷ್ಟಾಚಾರ ವಿರೋಧಿ ಘಟಕವನ್ನು ಲೋಕಪಾಲದಲ್ಲಿ ವಿಲೀನಗೊಳಿಸಬೇಕು.

೭. ಲೋಕಪಾಲ ಸಿಬ್ಬಂದಿ ವಿರುದ್ಧ ಬರುವ ದೂರುಗಳ ವಿಚಾರಣೆಯನ್ನು ಸ್ವಾಯತ್ತ ಸಂಸ್ಥೆ ನಡೆಸಬೇಕು.

೮. ಲೋಕಪಾಲ ನೇರವಾಗಿ ಜನರಿಗೆ ಉತ್ತರದಾಯಿಯಾಗಿದ್ದು, ಯಾವುದೇ ನಾಗರೀಕ, ನೇರವಾಗಿ ಸುಪ್ರೀಂಕೋರ್ಟ್‌ಗೆ ದೂರು ಸಲ್ಲಿಸಿ ಲೋಕಪಾಲರನ್ನು ಪದಚ್ಯುತಗೊಳಿಸುವಂತೆ ಕೇಳಿಕೊಳ್ಳುವಂತಿರಬೇಕು.

೯. ಭ್ರಷ್ಟಾಚಾರ ತಡೆ ಕಾಯ್ದೆಯಲ್ಲಿ ಕೆಳ ಹಂತದ ನೌಕರರು ಸೇರಿದಂತೆ, ಸರ್ಕಾರಿ ನೌಕರರೆಂದು ಪರಿಗಣಿಸಲ್ಪಡುವವರೆಲ್ಲ ಲೋಕಪಾಲ ವ್ಯಾಪ್ತಿಗೊಳಪಡಬೇಕು.

೧೦. ಸಿ.ಆರ್.ಪಿ.ಸಿ. ಪ್ರಕಾರ ಯಾವುದೇ ಅಪರಾಧ ಪ್ರಕರಣಗಳ ವಿಚಾರಣೆ ನಡೆಯುವಂತೆಯೇ ಲೋಕಪಾಲ ಸಿಬ್ಬಂದಿಯ ವಿರುದ್ಧದ ದೂರುಗಳ ವಿಚಾರಣೆ ನಡೆದು, ಪ್ರಾಥಮಿಕ ವಿಚಾರಣೆಯ ನಂತರ ಎಫ್.ಐ.ಆರ್. ದಾಖಲಿಸಿ ತನಿಖೆಯ ನಂತರ ಪ್ರಕರಣವನ್ನು ನ್ಯಾಯಾಲಯದ ವ್ಯಾಪ್ತಿಗೆ ಕೊಡುವಂತಿರಬೇಕು.

೧೧. ಸರ್ಕಾರಿ ನೌಕರರ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡುವವರಿಗೆ, ಸಾಕ್ಷಿಗಳಿಗೆ ಮತ್ತು ಭ್ರಷ್ಟಾಚಾರದಿಂದ ಸಂತ್ರಸ್ತರಾದವರಿಗೆ ಸೂಕ್ತ ರಕ್ಷಣೆ ನೀಡಬೇಕು.

೧೨. ಸಿ.ಆರ್.ಪಿ.ಸಿ. ಕಾಯ್ದೆಗೆ ತಿದ್ದುಪಡಿತಂದು, ಭ್ರಷ್ಟಾಚಾರದ ಪ್ರಕರಣಗಳಲ್ಲಿ ಆರೋಪಿಗಳಿಗೆ ಪದೇ ಪದೇ ತಡೆಯಾಜ್ಞೆ ಸಿಗದಂತೆ ಆಗಬೇಕು.

೧೩. ಉಚ್ಚನ್ಯಾಯಾಲಯಗಳು ವಿಶೇಷ ಪೀಠಗಳನ್ನು ರಚಿಸಿ ಭ್ರಷ್ಟಾಚಾರದ ಪ್ರಕರಣಗಳ ತ್ವರಿತ ತನಿಖೆಯಾಗಬೇಕು.

೧೪. ಎಷ್ಟು ಬಜೆಟ್ ಬೇಕೆಂಬುದನ್ನು ಹನ್ನೊಂದು ಜನ ಲೋಕಪಾಲ ಸದಸ್ಯರೇ ತೀರ್ಮಾನಿಸುವಂತಿರಬೇಕು.

೧೫. ಭ್ರಷ್ಟಾಚಾರ ಆರೋಪ ಸಾಬೀತಾದರೆ ಗರಿಷ್ಠ ೧೦ ವರ್ಷ ಶಿಕ್ಷೆ, ಉನ್ನತಮಟ್ಟದ ಅಧಿಕಾರಿಗಳಿಗೆ ಅಧಿಕ ಶಿಕ್ಷೆ, ಆರೋಪಿಗಳು ದೊಡ್ಡ ಉದ್ಯಮದವರಾಗಿದ್ದರೆ ದೊಡ್ಡ ಮೊತ್ತದ ದಂಡ ವಿಧಿಸಿ, ಪದೇ ಪದೇ ಅರೋಪ ಸಾಬೀತಾದ ಸಂಸ್ಥೆಗಳನ್ನು ಕಪ್ಪು ಪಟ್ಟಿಗೆ ಸೇರಿಸಬೇಕು.

೧೬. ಲೋಕಪಾಲರಿಗೆ, ದೂರವಾಣಿಗಳನ್ನು ರಹಸ್ಯವಾಗಿ ಆಲಿಸಲು ಪರವಾನಗಿ ನೀಡುವ ಅಧಿಕಾರ ಇರಬೇಕು.

೧೭. ದುರದ್ದೇಶ ಪೂರ್ವಕ ಅಥವಾ ಸುಳ್ಳು ದೂರು ಹೌದೋ ಅಲ್ಲವೋ ಎಂದು ತೀರ್ಮಾನಿಸುವ ಹಕ್ಕು ಲೋಕಪಾಲರಿಗೆ ಇದ್ದು, ಸುಳ್ಳು ದುರುದ್ದೇಶಪೂರ್ವಕ ದೂರು ದಾಖಲಿಸುವವರಿಗೆ ಜೈಲು ಶಿಕ್ಷೆ ವಿಧಿಸದೆ, ಕೇವಲ ದಂಡ ವಿಧಿಸುವಂತಿರಬೇಕು.

೧೮. ಸರಕಾರದಿಂದ ಅನುದಾನ ಪಡೆಯುವ ಸರಕಾರೇತರ ಸಂಘ-ಸಂಸ್ಥೆಗಳು ಲೋಕಪಾಲ ವ್ಯಾಪ್ತಿಗೊಳಪಡುವಂತಿರಬೇಕು.

-: ಮಿತಿಗಳು :-

೧. ನ್ಯಾಯಾಂಗ ಸಹ ಲೋಕಪಾಲ ವ್ಯಾಪ್ತಿಯಲ್ಲಿರದೆ, ಅದಕ್ಕಾಗಿ ಪ್ರತ್ಯೇಕ ನ್ಯಾಯಾಂಗ ಬದ್ಧತೆ ಕಾಯ್ದೆ ತರುವುದು.

೨. ಪ್ರಧಾನಿ ಹುದ್ದೆ ಲೋಕಪಾಲ ವ್ಯಾಪ್ತಿಯಲ್ಲಿರಬಾರದು. ಆದರೆ, ಅಧಿಕಾರದ ಅವಧಿ ಮುಗಿದ ಬಳಿಕ ಅವರನ್ನು ಲೋಕಪಾಲ ವ್ಯಾಪ್ತಿಗೆ ತರಬಹುದು.

೩. ಸಾರ್ವಜನಿಕರ ಕೆಲಸವನ್ನು ನಿಯಮಿತ ಅವಧಿಯೊಳಗೆ ಮಾಡದೇ ವಿಳಂಬ ಧೋರಣೆ ಅನುಸರಿಸುವ ಸರ್ಕಾರಿ ನೌಕರರ ವಿರುದ್ಧದಂಡ ವಿಧಿಸದೆ, ವಿಳಂಬವನ್ನೇ ಭ್ರಷ್ಟಾಚಾರವೆಂದು ಪರಿಗಣಿಸಲಾಗುವುದಿಲ್ಲ.

೪. ಸಂಸತ್ತಿನಲ್ಲಿ ಮತ ಹಾಕಲು ಅಥವಾ ಮಾತನಾಡಲು ಲಂಚ ಪಡೆಯುವ ಸಂಸದರ ವಿರುದ್ಧ ವಿಚಾರಣೆ ನಡೆಸುವ ಅಧಿಕಾರ ಲೋಕಪಾಲ ವ್ಯಾಪ್ತಿಯಲ್ಲಿರಬಾರದು.

೫. ನೇಮಕ ಪ್ರಕ್ರಿಯೆ ಆಯ್ಕೆ ಸಮಿತಿಯ ವಿವೇಚನೆಗೊಳಪಟ್ಟಿದ್ದು, ಶೋಧನಾ ಸಮಿತಿಯ ಸದಸ್ಯರನ್ನು ಈ ಆಯ್ಕೆ ಸಮಿತಿಯೇ ನೇಮಕ ಮಾಡಿ, ಹಾಲಿ ಸಮಿತಿಯಲ್ಲಿರುವ ೧೦ ಸದಸ್ಯರ ಪೈಕಿ ಆರು ರಾಜಕಾರಣಿಗಳು ಲೋಕಪಾಲ ಸದಸ್ಯರ ಆಯ್ಕೆ ಸಮಿತಿಯಲ್ಲಿರಬೇಕು.

೬. ಸಿಬಿಐ ಲೋಕಪಾಲ ವ್ಯಾಪ್ತಿಗೆ ಇಲ್ಲ.

೭. ಲೋಕಪಾಲರೇ, ಲೋಕಪಾಲ ಸಿಬ್ಬಂದಿಯ ಮೇಲಿನ ದೂರುಗಳ ವಿಚಾರಣೆ ನಡೆಸಬೇಕು.

೮. ಲೋಕಪಾಲ ಸರ್ಕಾರಕ್ಕೆ ಉತ್ತರದಾಯಿಯಾಗಿದ್ದು, ಸರ್ಕಾರ ಮಾತ್ರ ಲೋಕಪಾಲರನ್ನು ಪದಚ್ಯುತಗೊಳಿಸಬಹುದು.

೯. ಕೇಂದ್ರ ಸರ್ಕಾರದ 'ಎ' ಗುಂಪಿನ ನೌಕರರು ಮಾತ್ರ (೬೫ಸಾವಿರದಷ್ಟು) ಲೋಕಪಾಲ ವ್ಯಾಪ್ತಿಗೊಳಪಡುತ್ತಾರೆ.

೧೦. ಸಿ.ಆರ್.ಪಿ.ಸಿ. ಕಾಯ್ದೆಗೆ ತಿದ್ದುಪಡಿ ತರಲಾಗುತ್ತಿದ್ದು, ಪ್ರಾಥಮಿಕ ವಿಚಾರಣೆಯ ನಂತರ ಆರೋಪಿಗಳಿಗೆ ಅವರ ವಿರುದ್ಧದ ಎಲ್ಲ ಸಾಕ್ಷ್ಯಗಳನ್ನು ಆಧರಿಸಿ, ತಮ್ಮ ವಿರುದ್ಧ ಎಫ್.ಐ.ಆರ್. ಏಕೆ ದಾಖಲಿಸಬಾರದು ಎಂಬುದನ್ನು ವಿವರಿಸಲು ಅವಕಾಶ ಕೊಡಬೇಕು. ತನಿಖೆಯ ನಂತರ ಮತ್ತೆ ಎಲ್ಲ ಸಾಕ್ಷ್ಯಗಳನ್ನು ಆರೋಪಿಗೆ ಒದಗಿಸಿ, ತಮ್ಮ ವಿರುದ್ಧದ ಮೊಕದ್ದಮೆ ಏಕೆ ದಾಖಲಿಸಬಾರದೆಂದು ವಿವರಿಸುವ ಅವಕಾಶ ನೀಡಬೇಕು.

೧೧. ಭ್ರಷ್ಟಾಚಾರ ಪ್ರಕರಣಗಳ ತ್ವರಿತ ವಿಚಾರಣೆಗೆ ಉಚ್ಚ ನ್ಯಾಯಾಲಯಗಳಲ್ಲಿ ವಿಶೇಷ ಪೀಠ ಸ್ಥಾಪಿಸುವ ಪ್ರಸ್ತಾಪವಿಲ್ಲ.

೧೨. ಭ್ರಷ್ಟಾಚಾರದಿಂದ ಸಂತ್ರಸ್ತರಾದವರಿಗೆ ಮತ್ತು ದೂರು ಕೊಡುವವರಿಗೆ ಹಾಗೂ ಸಾಕ್ಷಿಗಳಿಗೆ ರಕ್ಷಣೆ ನೀಡುವ ಪ್ರಮೇಯವೇ ಇಲ್ಲ.

೧೩. ಉಳಿದ ಶಿಫಾರಸ್ಸುಗಳ ತಿರಸ್ಕಾರ ಮತ್ತು ಗರಿಷ್ಠ ಶಿಕ್ಷೆ ೧೦ ವರ್ಷ ಎಂಬುದಕ್ಕೆ ಮಾತ್ರ ಸಮ್ಮತಿ.

೧೪. ಪದೇ ಪದೇ ತಡೆಯಾಜ್ಞೆ ನೀಡದಂತೆ ಸಿ.ಆರ್.ಪಿ.ಸಿ. ಕಾಯ್ದೆಗೆ ತಿದ್ದುಪಡಿ ಮಾಡುವ ವಿಚಾರ ಪ್ರಸ್ತಾಪವಿಲ್ಲ.

೧೫. ಲೋಕಪಾಲ ಬಜೆಟ್ ಅನ್ನು ಹಣಕಾಸು ಇಲಾಖೆಯೇ ನಿರ್ಧರಿಸುವುದು.

೧೬. ದೇಶದಲ್ಲಿರುವ ಎಲ್ಲ ಸರಕಾರೇತರ ಸಂಘ–ಸಂಸ್ಥೆಗಳು ಲೋಕಪಾಲ ವ್ಯಾಪ್ತಿಯಲ್ಲಿ ಒಳಪಡಬೇಕು.

೧೭. ದೂರವಾಣಿ ರಹಸ್ಯ ಆಲಿಕೆಗೆ ಗೃಹ ಇಲಾಖೆಯ ಕಾರ್ಯದರ್ಶಿ ಮಾತ್ರ ಪರವಾನಿಗೆ ನೀಡಬಹುದು.

೧೮. ಸುಳ್ಳು ಮತ್ತು ದುರುದ್ದೇಶಪೂರ್ವಕ ದೂರು ನೀಡುವವರಿಗೆ ೨೫ ವರ್ಷ ಜೈಲು ಶಿಕ್ಷೆ ಮತ್ತು ದಂಡ, ಆರೋಪ ಸುಳ್ಳಾದಲ್ಲಿ ಆರೋಪಕ್ಕೊಳಗಾದ ವ್ಯಕ್ತಿಗೆ ದೂರು ನೀಡಿದವನೇ ಪರಿಹಾರ ಕೊಡತಕ್ಕದ್ದು. ಸರಕಾರಿ ನೌಕರನಿಗೆ, ದೂರು ನೀಡಿದ ವ್ಯಕ್ತಿಯ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸುವ ಅಧಿಕಾರವಿದೆ. ಇಂಥ ಸಂದರ್ಭದಲ್ಲಿ ಸರಕಾರಿ ನೌಕರನ ನ್ಯಾಯಾಲಯ ವೆಚ್ಚವನ್ನು ಸರಕಾರವೇ ಭರಿಸುವುದು.

ಕೊನೆಯದಾಗಿ ಹೇಳುವುದಾದರೆ, ಬಲಿಷ್ಠ ಜನಲೋಕಪಾಲ ವಿಧೇಯಕ ರಚನೆಗೆ ಆಗ್ರಹಿಸಿ ಅಣ್ಣಾ ಹಜಾರೆಯವರ ಹೋರಾಟ ಪ್ರಭಾವವನ್ನು ಬೀರಿದೆ. ಕೆಲವು ಮಾಧ್ಯಮಗಳಂತೂ 'ಅಣ್ಣಾ ಭಾರತವನ್ನು ನಡುಗಿಸಿದ ಹೊಸ ಗಾಂಧಿ' ಎಂದು ಬಣ್ಣಿಸಿವೆ. ಅಂತ್ಯವೊಂದು ಚೆನ್ನಾಗಿದ್ದರೆ ಬಾಕಿ ಎಲ್ಲವೂ ಗೌಣ ಎಂಬ ಮಾತೊಂದಿದೆ. ಹಜಾರೆಯವರ ನಿರಶನ ವಿಷಯದಲ್ಲಿ ಇದು ಅಕ್ಷರಶಃ ಅನ್ವಯವಾಗುವಂತಹದು. ಕಾನೂನಿನ ಕತ್ತಿ ನೆತ್ತಿ ಮೇಲೆ ತೂಗಾಡಿದರೇನೇ ವ್ಯಕ್ತಿ ನೆಟ್ಟಗಿರಲು ಸಾಧ್ಯ. ಈ ದೆಸೆಯಲ್ಲಿ 'ಅಣ್ಣಾ' ಅವರು ಮಿತ್ರರೊಂದಿಗೆ ಸರಿಯಾದ ಮಾರ್ಗ ಹುಡುಕಿದ್ದಾರೆ ನಿಜ. ಆದರೆ, ಅವರ ಹಿಂದಿರುವ ಅಪಾರ ಬೆಂಬಲಿಗರನ್ನು ಹೆಜ್ಜೆ ತಪ್ಪದಂತೆ ನೋಡಬೇಕಾಗಿದೆ. ಆದ್ದರಿಂದ ಮೊದಲಿಗೆ ನಮ್ಮ ನಮ್ಮಲ್ಲಿರುವ ಭ್ರಷ್ಟರನ್ನು ಬಹಿಷ್ಕರಿಸಿ ಅಂತರಂಗ ಶುದ್ಧಿಯಾದರೆ ಬಹಿರಂಗ ಶುದ್ಧಿಯಾಗುತ್ತದೆ. ಏನೇ ಇರಲಿ, ಆಡಳಿತದಲ್ಲಿ ಅಣ್ಣಾರಿಂದ, ಒಂದು ಪ್ರಬಲ ಲೋಕಪಾಲ ಮಸೂದೆ ಜಾರಿಗೆ ಬರುವ ಭರವಸೆ ಜನತೆಯಲ್ಲಿ ಮೂಡಿದೆ. ೨೦೧೨ರ ಪ್ರಾರಂಭದಲ್ಲಿ ಇಂಥ ಒಂದು ವ್ಯವಸ್ಥೆ ಜಾರಿಗೆ ಬರಬಹುದೇನೋ?

(ಸಾಭಾರ : ಸಂಚಯ –೯೫)

ಹಿಮಾಲಯದಲ್ಲಿ ಚಿಪ್ಕೋ ಚಳುವಳಿಯ ಅಂಕುರಾರ್ಪಣೆ

– ಮೂಲ : ಜಾರ್ಜ್ ಆಲ್‌ಫ್ರೆಡ್ ಜೇಮ್ಸ್ – ಕನ್ನಡಕ್ಕೆ : ಸುರೇಂದ್ರ ಕೌಲಗಿ

(ಕಳೆದ ಸಂಚಿಕೆಯಿಂದ)

೧೯೭೩ರಲ್ಲಿ ಚಿಪ್ಕೋ ಆಂದೋಲನ ಪ್ರಾರಂಭವಾಯಿತು. ಈ ಆಂದೋಲನದೊಂದಿಗೆ ಸುಂದರಲಾಲ್ ಬಹುಗುಣರ ಹೆಸರು ಹೆಣೆದುಕೊಂಡಿದೆ. ಈ ಆಂದೋಲನ ಅಂತರಾಷ್ಟ್ರೀಯ ಮಟ್ಟದಲ್ಲಿ ಗಮನಸೆಳೆಯಿತು. ಇಂದಿರಾ ಗಾಂಧೀ ಬಹುಗುಣರನ್ನು ಚಿಪ್ಕೋ ಬಹುಗುಣ ಎಂದು ಕರೆಯುತ್ತಿದ್ದರು. ಇದಕ್ಕೆ ಕಾರಣ ಆ ಸಮಯದಲ್ಲಿ ಉತ್ತರಪ್ರದೇಶದ ಮುಖ್ಯಮಂತ್ರಿಯಾಗಿ ಹೆಚ್.ಎನ್.ಬಹುಗುಣ ಇದ್ದರು. ಮುಖ್ಯಮಂತ್ರಿ ಬಹುಗುಣರ ಹೆಸರಿನಿಂದ ಬೇರ್ಪಡಿಸಲು ಸುಂದರಲಾಲ್ ಬಹುಗುಣರನ್ನು ಚಿಪ್ಕೋ ಬಹುಗುಣ ಎಂದು ಕರೆಯುತ್ತಿದ್ದರು. ಚಿಪ್ಕೋ ಆಂದೋಲನದ ಕಾರಣದಿಂದಾಗಿ ಬಹುಗುಣ ಜಾಗತಿಕ ಮಟ್ಟದ ಕ್ರಿಯಾಶೀಲ ಪರಿಸರವಾದಿ ಎಂದು ಎಲ್ಲ ಕಡೆ ಗುರ್ತಿಸಲ್ಪಟ್ಟರು. ಚಿಪ್ಕೋ ಸಂದೇಶದೊಂದಿಗೆ ಯೂರೋಪ್, ಆಫ್ರಿಕಾ ಮತ್ತು ಅಮೇರಿಕಾಕ್ಕೆ ಭೇಟಿಕೊಟ್ಟರು. ಕೆಲವರು ಸುಂದರಲಾಲ್‌ರನ್ನು ಆ ಚಳುವಳಿಯ ಸ್ಥಾಪಕ ಅಥವಾ ನಾಯಕನೆಂದು ಪ್ರಸ್ತಾಪಿಸಿದರು. ಸುಂದರಲಾಲ್ ಇವೆರಡೂ ಗೌರವಗಳನ್ನು ಸಾರಾಸಗಟಾಗಿ ತಳ್ಳಿಹಾಕಿದರು. ಸುಂದರಲಾಲ್‌ರ ಪ್ರಕಾರ ಚಿಪ್ಕೋ ಚಳುವಳಿ ಮುಖ್ಯತಃ ಕಾಡುಗಳಲ್ಲಿ ವಾಸಿಸುವ ಮಹಿಳೆಯರದಾಗಿತ್ತು. ತಮ್ಮ ಪಾತ್ರವೇನಿದ್ದರೂ ಆ ಚಳುವಳಿಗೆ ಬೆಂಬಲ ಕೊಡುವುದು ಮತ್ತು ಆ ಚಳುವಳಿಯ ಸಂದೇಶವನ್ನು ಹಳ್ಳಿಗಳಿಗೂ ಮತ್ತು ವಿಶಾಲವಾದ ಜನಸಮುದಾಯಕ್ಕೂ ತಿಳಿಸುವ ಮಧ್ಯವರ್ತಿಯ ಕೆಲಸ ಎಂದು ಸುಂದರಲಾಲ್ ಹೇಳುತ್ತಾರೆ.

ಬಹುಗುಣರ ಈ ಪಾತ್ರವನ್ನು ಅರ್ಥಮಾಡಿಕೊಳ್ಳಬೇಕಾದರೆ ಈ ಚಳುವಳಿಯ ಹಿನ್ನೆಲೆ ಮತ್ತು ರಾಷ್ಟ್ರೀಯ ಹಾಗೂ ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯಲು ಕಾರಣವಾದ ಮಹತ್ವದ ಘಟನೆಗಳನ್ನು ತಿಳಿಯಬೇಕಾದುದು ಅಗತ್ಯ. ಅದಕ್ಕಾಗಿ ಈ ಕ್ಷೇತ್ರದಲ್ಲಿ ಅನೇಕ ತಜ್ಞರೊಂದಿಗೆ ನಾನು ಚರ್ಚಿಸಿರುವುದನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಈ ಅಧ್ಯಾಯವನ್ನು ಬರೆಯುವಾಗ ರಾಮಚಂದ್ರಗುಹ ಮತ್ತು ಥಾಮಸ್ ವೆಬರ್‌ರವರ ಸಂಶೋಧನಾ ಲೇಖನಗಳನ್ನು ಬಹಳಷ್ಟು ಅವಲಂಬಿಸಿದ್ದೇನೆ. ಅಲ್ಲದೆ, ಚಿಪ್ಕೋ ಆಂದೋಲನದ ಕೆಲ ನಿರ್ದಿಷ್ಟ ಬೆಳವಣಿಗೆಗಳು ಕುರಿತು ಬೇರೆಯವರ ವಿವರಗಳನ್ನು ಕೂಡ ಉಪಯೋಗಿಸಿಕೊಂಡಿದ್ದೇನೆ. ಈ ಎಲ್ಲಾ ಗಂಭೀರವಾದ ಅಧ್ಯಯನಗಳಿಗೆ ಹೆಚ್ಚಿನದನ್ನು ಸೇರಿಸುವ ಉದ್ದೇಶ ನನ್ನದಾಗಿಲ್ಲ. ಚಿಪ್ಕೋ

ಆಂದೋಲನದ ಹಿನ್ನೆಲೆಯಲ್ಲಿ ಬಹುಗುಣರ ಚಟುವಟಿಕೆಗಳನ್ನು, ಸಾರ್ವಜನಿಕ ಜೀವನದ ಪ್ರಾರಂಭದಲ್ಲಿ ಅವರ ಮೇಲೆ ಉಂಟಾದ ಪ್ರಭಾವ ಮತ್ತು ಪ್ರಕೃತಿಯ ಬಗ್ಗೆ ಅವರು ನಡೆಸಿದ ಚಿಂತನೆ ತಿಳಿಸುವುದು ನನ್ನ ಉದ್ದೇಶ. ಇದನ್ನು ತಿಳಿಯಬೇಕಾದರೆ ಚಿಪ್ಕೋ ಆಂದೋಲನ ಪ್ರಾರಂಭವಾದ ಭೌಗೋಳಿಕ ಮತ್ತು ಸಾಂಸ್ಕೃತಿಕ ಸಂದರ್ಭವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಹಿಮಾಲಯ ಪರ್ವತಗಳ ಪ್ರದೇಶದಲ್ಲಿ ಬ್ರಿಟಿಷ್ ಸಾಮ್ರಾಜ್ಯ ವಿಸ್ತರಗೊಳ್ಳುವ ಮೊದಲು ಗರ್‌ವಾಲ್‌ನಲ್ಲಿಯ ಜನರ ಜೀವನ, ಅವರ ಆರ್ಥಿಕ ಸ್ಥಿತಿ ಮತ್ತು ಸಂಸ್ಕೃತಿ ಹೇಗಿತ್ತೆಂಬುದರ ಬಗ್ಗೆ ಅವರು ಆಳವಾಗಿ ಅಧ್ಯಯನ ಮಾಡಿದ್ದಾರೆ.

ಗುಹಾರ ಅನೇಕ ನಿಷ್ಕರ್ಷಗಳಲ್ಲಿ ಚಿಪ್ಕೋ ಆಂದೋಲನದ ಬೀಜಗಳಿವೆ. ಹಿಮಾಲಯದ ನದಿಗಳ ಕಣಿವೆ ಪ್ರದೇಶಗಳಲ್ಲಿ ಕೈಗೊಳ್ಳಲಾಗುತ್ತಿದ್ದ ಗೋಧಿ, ಭತ್ತ ಮತ್ತು ಬೇಳೆಕಾಳುಗಳ ವ್ಯವಸಾಯಕ್ಕೆ ಅಲ್ಲಿಯ ಇಳಿಜಾರಾದ ಭೂ ಸ್ಥಿತಿ ಮತ್ತು ನೀರಾವರಿ ವ್ಯವಸ್ಥೆಗಿದ್ದ ತೊಡಕುಗಳು ಮಿತಿಯನ್ನು ಒಡ್ಡಿದ್ದವು. ಆದಾಗ್ಯೂ ಇಡೀ ೧೯ನೇ ಶತಮಾನದಲ್ಲಿ ಎರಡು, ಕೆಲವೊಂದು ಸಲ ಮೂರು ಬೆಳೆಗಳನ್ನು ಬೆಳೆದು ಉತ್ತರದ ಟಿಬೇಟ್‌ಗೂ ಮತ್ತು ದಕ್ಷಿಣದ ಮೈದಾನದ ಪ್ರದೇಶಕ್ಕೂ ರಫ್ತು ಮಾಡಲಾಗುತ್ತಿತ್ತು. ೧೮೫೬ ರಿಂದ ೧೮೮೪ರ ವರೆಗೆ ಆ ಪ್ರದೇಶದ ಕಮೀಷನರ್ ಆಗಿದ್ದ ಹೆನ್ರಿ ರಾಮ್‌ಸೆ ಹೇಳಿದ್ದ ಮಾತುಗಳನ್ನು ಗುಹಾ ಸಮರ್ಥಿಸುತ್ತಾರೆ. ರಾಮ್‌ಸೆರವರ ಪ್ರಕಾರ ಆ ಪ್ರದೇಶದ ರೈತರು ವಾರ್ಷಿಕ ಎರಡು ಬೆಳೆಗಳ ವ್ಯವಸಾಯದ ಜೊತೆಗೆ ಮೀನು, ಹಣ್ಣು, ತರಕಾರಿ ಮತ್ತು ಮಾಂಸ ಇತ್ಯಾದಿಗಳಿಂದ ಭಾರತದ ಇನ್ನಿತರ ರೈತರಿಗಿಂತ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿದ್ದರು.

ಆ ಪ್ರದೇಶಕ್ಕೆ ಭೇಟಿ ಕೊಡುತ್ತಿದ್ದ ಐರೋಪ್ಯ ಪ್ರವಾಸಿಗರು ಪರ್ವತ ಪ್ರದೇಶದ ಹಳ್ಳಿಗರ ಜೀವನವನ್ನು ಇಂಗ್ಲೆಂಡ್ ಮತ್ತು ಐರ್ಲೆಂಡ್ ಹಳ್ಳಿಗಳ ಜೀವನದೊಂದಿಗೆ ಹೋಲಿಸಿ ಕಾವ್ಯಮಯ ವರ್ಣನೆ ಮಾಡುತ್ತಿದ್ದರು. ಭೂ ಕಂದಾಯ ಪದ್ಧತಿ ಬಯಲು ಪ್ರದೇಶದ ಕಂದಾಯ ಪದ್ಧತಿಗಿಂತ ಭಿನ್ನವಾಗಿತ್ತು. ಅಲ್ಲಿಯ ಹಳ್ಳಿಗಳಲ್ಲಿ ಬಹುಪಾಲು ರೈತರು ವ್ಯವಸಾಯ ಮಾಡುತ್ತಿದ್ದರು. ಅಲ್ಲಿ ದೊಡ್ಡ ಭೂ ಹಿಡುವಳಿದಾರರು ಇದ್ದರು. ವ್ಯವಸಾಯ ಕುಟುಂಬಾಧಾರಿತ ಮತ್ತು ಶ್ರಮಾಧಾರಿತವಾಗಿತ್ತು. ಅಲ್ಲಿಯ ವಸಾಹತುಶಾಹಿಯ ಲಕ್ಷಣಗಳು ಬಯಲು ಪ್ರದೇಶದಲ್ಲಿದ್ದ ವಸಾಹತುಶಾಹಿ ಪದ್ಧತಿಗಿಂತ ಭಿನ್ನವಾಗಿತ್ತು.

ಪರ್ವತ ಪ್ರದೇಶಗಳಲ್ಲಿ ಜಮೀನ್ದಾರಿ ಪದ್ಧತಿ ಇರಲಿಲ್ಲವಾದ್ದರಿಂದ ಪ್ರಾಕೃತಿಕ ಸಂಪನ್ಮೂಲಗಳ ಮೇಲೆ ರೈತಾಪಿ ವರ್ಗದ ಹಿಡಿತವಿತ್ತು. ಪರ್ವತ ಪ್ರದೇಶಗಳಲ್ಲಿರುವ ಹಳ್ಳಿಗಳನ್ನು ಸಿಂಧೂ ಗಂಗಾ ಬಯಲು ಪ್ರದೇಶದಲ್ಲಿರುವ ಬಿಡಿ-ಬಿಡಿಯಾಗಿರುವ ಹಳ್ಳಿಗಳ ಜೊತೆಗೆ ಹೋಲಿಕೆ ಮಾಡಿದಾಗ ಅರಸೊತ್ತಿಗೆ ಮತ್ತು ಕೃಷಿ ಮಹತ್ವದ ಸಾಮಾಜಿಕ ಶಕ್ತಿಗಳಾಗಿವೆ ಎಂದು ತಿಳಿದುಬರುತ್ತದೆ. ಬೆಟ್ಟದ ಪ್ರದೇಶದಲ್ಲಿನ ವಿಶೇಷ ಲಕ್ಷಣ ಹೆಣ್ಣುಮಕ್ಕಳಿಗಿದ್ದ ವಿಶೇಷ ಪಾತ್ರ. ಬೆಟ್ಟದಲ್ಲಿಯ ಕಷ್ಟಮಯ ಭೂಪ್ರದೇಶದಲ್ಲಿ ಗೃಹ ಜೀವನ ನಡೆಸಲು ಒಂದೇ ಪ್ರಕಾರದ ಆರ್ಥಿಕ ಚಟುವಟಿಕೆ ಸಾಕಾಗುವುದಿಲ್ಲ. ಪ್ರತಿಯೊಂದು ಮನೆಯೂ ವಿವಿಧ ಪ್ರಕಾರದ ಆರ್ಥಿಕ ಚಟುವಟಿಕೆಗಳನ್ನು

ಹೊಂದಿರಬೇಕಾಗುತ್ತದೆ. ಅದರಲ್ಲಿ ಹೆಣ್ಣು ಮಕ್ಕಳೂ ಭಾಗವಹಿಸಬೇಕಾಗುತ್ತದೆ. ಸ್ತ್ರೀಯರ ಕೆಲಸ ಪುರುಷರ ಕೆಲಸಕ್ಕಿಂತ ಕಡಿಮೆ ಮೌಲ್ಯದ್ದಲ್ಲ. ಹೊಲಗಳಲ್ಲಿಯ ಕೆಲಸದಲ್ಲಿ ಮತ್ತು ದನಕರುಗಳ ಬಗ್ಗೆ ಗಮನಹರಿಸುವದರಲ್ಲಿ ಸ್ತ್ರೀಯರು ಪುರುಷರಷ್ಟೇ ಸಮಾನವಾಗಿ ಕೆಲಸಮಾಡುತ್ತಾರೆ. ಉಳುವುದರ ಹೊರತಾಗಿ ಮನೆಯ ಹೆಂಗಸು ಮಾಡದೇ ಇರುವ ಕೆಲಸವಿಲ್ಲ. ಹೊಲಗಳಲ್ಲಿಯ ಕೆಲಸದ ಜೊತೆಗೆ ಅಡುಗೆ ಮಾಡುವುದು, ಸ್ವಚ್ಛತೆ ಮಾಡುವುದು, ಹುಲ್ಲು-ಸೌದೆ-ನೀರು ತರುವುದು ಮತ್ತು ಮಕ್ಕಳ ಆರೈಕೆ ಮಾಡುವುದು ಇತ್ಯಾದಿ ಕೆಲಸಗಳನ್ನು ಮಾಡುತ್ತಾರೆ. ಶ್ರಮದ ಕೆಲಸದಲ್ಲಿಯ ಈ ಅಸಮತೋಲನವನ್ನು ಕೆಲ ಸಂಶೋಧಕರು ಲಿಂಗಾಧಾರಿತ ಶೋಷಣೆ ಎಂದು ತಿಳಿಯುತ್ತಾರೆ. ಇಂಥ ಅಸಹಜ ಜವಾಬ್ದಾರಿಗಳ ವಿಭಜನೆಯ ಪರಿಹಾರಕ್ಕೆ ಶಿಕ್ಷಣ ಒಂದು ಉಪಾಯವೆಂದು ಕೆಲವರು ಭಾವಿಸುತ್ತಾರೆ.

ವಸಾಹತುಶಾಹಿಯ ಮೊದಲು ಮತ್ತು ವಸಾಹತು ಕಾಲದಿಂದಲೂ ಪರ್ವತ ಪ್ರದೇಶದ ಜನರು ತುಂಬಾ ಕಷ್ಟ ಜೀವಿಗಳು ಮತ್ತು ಕ್ರಿಯಾಶೀಲರಾಗಿದ್ದಾರೆ. ಕೈಗಾರಿಕಾಕ್ರಾಂತಿ ಮತ್ತು ಆರ್ಥಿಕ ಬೆಳವಣಿಗೆಗೆ ಮೊದಲು ಬೆಟ್ಟ ಪ್ರದೇಶದ ಜನರು ಸಂತೋಷವಾಗಿಯೂ ಆರೋಗ್ಯವಾಗಿಯೂ ಹಾಗು ಸಮೃದ್ಧವಾಗಿಯೂ ಇದ್ದರು. ವಸಾಹತುಶಾಹಿ ಕಾಲದಲ್ಲಿ ಬ್ರಿಟೀಷರು ಭಾರತದಲ್ಲಿನ ಅರಣ್ಯ ಸಂಪನ್ಮೂಲಗಳ ಬಗ್ಗೆ ವಿಶೇಷವಾದ ಆಸಕ್ತಿ ವಹಿಸಿದ್ದರು. ೧೯ನೇ ಶತಮಾನದ ಪ್ರಾರಂಭದಲ್ಲಿ ಬ್ರಿಟಿಷ್ ದ್ವೀಪ ಸಮೂಹಗಳಲ್ಲಿ ನಡೆಯುತ್ತಿದ್ದ ಹಡಗು ನಿರ್ಮಾಣದ ಕೈಗಾರಿಕೆಗೆ ಮಲಬಾರ್ ಪ್ರದೇಶದ ಕಾಡುಗಳು ಬಹಳ ಮುಖ್ಯವಾದ ಸಂಪನ್ಮೂಲಗಳಾಗಿದ್ದವು.

೧೯ನೇ ಶತಮಾನದ ಮಧ್ಯಭಾಗದ ವೇಳೆಗೆ ಹಿಮಾಲಯದಲ್ಲಿಯ ಗಟ್ಟಿಮರಗಳು ಬ್ರಿಟಿಷರ ವಾಣಿಜ್ಯ ಮತ್ತು ಕೈಗಾರಿಕಾ ಬೆಳವಣಿಗೆಗೆ ತುಂಬಾ ಅಗತ್ಯವೆನಿಸಿದ್ದವು. ಅಲ್ಲದೆ ರೈಲಿನ ಜಾಲ ಹಬ್ಬುವುದಕ್ಕೆ ಸಹಕಾರಿಯಾಯಿತು. ರೈಲುಗಳ ನಿರ್ಮಾಣಕ್ಕೆ ಸ್ಲೀಪರುಗಳು ದೊಡ್ಡ ಪ್ರಮಾಣದಲ್ಲಿ ಬೇಕಾಗಿದ್ದವು. ಭಾರತದ ಇತರ ಕಾಡುಗಳಲ್ಲಿ ಗಟ್ಟಿ ಮರದ ಕೊರತೆಯುಂಟಾದಾಗ ತೆಹರಿ ಗರ್‌ವಾಲ್ ಪ್ರದೇಶದ ವಿಪುಲವಾದ ಕಾಡು ಮತ್ತು ಅವುಗಳಲ್ಲಿಯ ತೇಗದ ಮರಗಳು ತುಂಬಾ ಸಕಾಲಿಕವಾಗಿ ಒದಗಿ ಬಂದವು.

ದೇಶೀಯ ಸಂಸ್ಥಾನವಾದ ತೆಹರಿ ಗರ್‌ವಾಲ್ ಪ್ರದೇಶದಲ್ಲಿಯ ಮರದ ಸುಲಿಗೆ ಓರ್ವ ಯುವ ಇಂಗ್ಲಿಷ್ ಸೈನಿಕನಿಂದ ಪ್ರಾರಂಭವಾಯಿತು. ಆತ ವಸಾಹತುಶಾಹಿ ಸೈನ್ಯ ತ್ಯಜಿಸಿ ತನ್ನ ಅದೃಷ್ಟ ಹುಡುಕಿಕೊಂಡು ಬೆಟ್ಟ ಪ್ರದೇಶಕ್ಕೆ ಬಂದಿದ್ದ. ಫ್ರೆಡ್ರಿಕ್ ವಿಲ್ಸನ್ ಎಂಬ ಆ ಸೈನಿಕ ಭಾಗೀರಥಿ ನದಿ ಕಣಿವೆಗೆ ಬಂದು ತನ್ನಲ್ಲಿದ್ದ ಕೋವಿಯಿಂದ ಬೇಟೆಯಾಡಲು ಪ್ರಾರಂಭಿಸಿದ. ಮಾಂಸವನ್ನು ಸ್ಥಳೀಯ ಜನರೊಂದಿಗೆ ಹಂಚಿಕೊಳ್ಳುತ್ತಿದ್ದ. ಚಿತ್ತಾಕರ್ಷಕ ಬಣ್ಣದ ಹಕ್ಕಿಗಳನ್ನು ಕೂಡ ಹೊಡೆದು ಅವುಗಳನ್ನು ಮಸ್ಸೂರಿ ನಗರದಲ್ಲಿಯ ಪೇಟೆಯಲ್ಲಿ ಮಾರುತ್ತಿದ್ದ. ಅಲ್ಲಿಯ ವ್ಯಾಪಾರಸ್ಥರು ಅವುಗಳನ್ನು ಖರೀದಿಸಿ ಇಂಗ್ಲೆಂಡ್‌ಗೆ ಸಾಗಿಸುತ್ತಿದ್ದರು. ಆ ಹಕ್ಕಿಗಳ ಚರ್ಮ ಮತ್ತು ಗರಿಗಳಿಗೆ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬಹಳ ಬೆಲೆಯಿತ್ತು. ಅದೇ ರೀತಿ ಕಸ್ತೂರಿಮೃಗದ ಸುಗಂಧದ್ರವವನ್ನೂ ಮಾರಲಾಗುತ್ತಿತ್ತು. ಇಂತಹ

ಚಟುವಟಿಕೆಗಳಿಂದಾಗಿ ವಿಲ್ಸನ್ ಬಹಳಷ್ಟು ಆದಾಯ ಪಡೆಯುತ್ತಿದ್ದ. ಸ್ಥಳೀಯ ಜನರೊಂದಿಗೆ ಮಾಂಸವನ್ನು ಹಂಚಿಕೊಳ್ಳುತ್ತಿದ್ದುದ್ದರಿಂದಾಗಿ ಅವನು ಅಲ್ಲಿಯ ಜನರಲ್ಲಿ ಜನಪ್ರಿಯನಾದ. ಅವನಿಗೆ ಗಿರಿಜನ ವಾದ್ಯಗಾರರ ಸಮುದಾಯದಲ್ಲಿ ಒಂದು ಮನೆಯನ್ನು ಕೊಟ್ಟರು. ಆ ಜನರೊಂದಿಗೆ ಅವನ ಸಂಬಂಧ ಎಷ್ಟೊಂದು ಬೆಳೆಯಿತೆಂದರೆ ಅವನು ಆ ಸಮುದಾಯದಲ್ಲಿಯ ಓರ್ವ ತರುಣಿಯನ್ನೇ ಮದುವೆಯಾಗಿ ಭಾಗೀರಥಿ ನದಿಯ ಉಗಮಸ್ಥಾನ ಮತ್ತು ಯಾತ್ರಾಸ್ಥಳವಾದ ಗಂಗೋತ್ರಿಯಲ್ಲಿ ನೆಲಸಿದ. ತೆಹರಿ ಗರ್‌ವಾಲ್‌ನ ದೇಶೀಯ ಸಂಸ್ಥಾನದ ರಾಜನನ್ನು ಭೇಟಿಮಾಡಲು ಸ್ಥಳೀಯರು ಅವನಿಗೆ ತಿಳಿಸಿದರು. ಆ ಪ್ರಕಾರ ವಿಲ್ಸನ್ ತೆಹರಿಗೆ ಹೊರಟ. ಎತ್ತರ ಹಾಗೂ ಸುಂದರ ವ್ಯಕ್ತಿತ್ವದ ವಿಲ್ಸನ್ ತೆಹರಿ ರಾಜನನ್ನು ಭೇಟಿಮಾಡಿ ಯೋಗ್ಯವಾದ ರೀತಿಯಲ್ಲಿ ರಾಜನಿಗೆ ನಮಸ್ಕರಿಸಿದ. ಅಲ್ಲದೆ ತಾನು ಬೇಟೆಯಾಡಿ ಸಂಪಾದಿಸಿದ್ದ ಚಿನ್ನದ ನಾಣ್ಯದಲ್ಲಿ ೭ ಚಿನ್ನದ ನಾಣ್ಯಗಳನ್ನು ಆ ರಾಜನಿಗೆ ಕೊಟ್ಟ. ಈ ಅಪರೂಪದ ನಾಣ್ಯಗಳನ್ನು ನೋಡಿ ರಾಜನಿಗೆ ಆಶ್ಚರ್ಯವಾಯಿತು.

ಆಗಿನ ಕಾಲದಲ್ಲಿ ಆ ಪ್ರದೇಶದಲ್ಲಿ ಚಿನ್ನದ ನಾಣ್ಯಗಳ ಚಲಾವಣೆ ಇರಲಿಲ್ಲ. ಇಂತಹ ನಾಣ್ಯಗಳನ್ನು ಹೇಗೆ ಪಡೆದನೆಂದು ರಾಜ ವಿಲ್ಸನ್‌ನನ್ನು ಕೇಳಿದ. ತಾನು ಹಕ್ಕಿಗಳನ್ನು ಬೇಟೆಯಾಡಿ ಅವುಗಳ ಚರ್ಮ ಮತ್ತು ಗರಿಗಳನ್ನು ಹಾಗೂ ಕಸ್ತೂರಿಮೃಗದ ಸುಗಂಧದ್ರವವನ್ನು ಮಸ್ಸೂರಿಯಲ್ಲಿ ಮಾರಿ ಜೀವನ ನಡೆಸುತ್ತಿರುವುದಾಗಿ ಆತ ಹೇಳಿದ. ವಿಲ್ಸನ್‌ನ ಈ ಮಾತುಗಳನ್ನು ಅವನ ಸಾಹಸ ಪ್ರವೃತ್ತಿಯನ್ನು ಕೇಳಿ ರಾಜ ಪ್ರಭಾವಿತನಾದನು. ಅಷ್ಟೇ ಅಲ್ಲ, ಆ ರಾಜ ವಿಲ್ಸನ್‌ನ ತಲೆಯ ಮೇಲೆ ತನ್ನ ಹಸ್ತವನ್ನು ಇಟ್ಟು "ನೀನು ಚಿನ್ನದ ಹಕ್ಕಿ" ಎಂದು ಉದ್ಗಾರ ತೆಗೆದ. ವಿಲ್ಸನ್ ಸರಳ ಸ್ವಭಾವದ ಕ್ರಿಯಾಶೀಲ ವ್ಯಕ್ತಿಯಾಗಿದ್ದ. ಭಾಗೀರಥಿ ಕಣಿವೆಯಿಂದ ಬಹಳಷ್ಟು ಚಿನ್ನ ಪಡೆಯಬಹುದಾಗಿದೆ ಎಂದು ರಾಜನಿಗೆ ಹೇಳುತ್ತಾ ಅದನ್ನು ಹೇಗೆ ಪಡೆಯಬಹುದೆಂದು ವಿವರಿಸಿದ.

"ನನಗೆ ಕಣಿವೆಯಲ್ಲಿನ ಮರಗಳನ್ನು ಕಡಿಯುವುದಕ್ಕೆ ಮತ್ತು ಅವುಗಳನ್ನು ಹರಿದ್ವಾರದವರೆಗೆ ನದಿಯಲ್ಲಿ ತೇಲಿಬಿಡಲು ಅನುಮತಿ ಕೊಡಿ. ಹರಿದ್ವಾರದಲ್ಲಿ ಮರಕ್ಕೆ ತುಂಬಾ ಬೇಡಿಕೆ ಇದೆ. ತನ್ಮೂಲಕ ನಿಮ್ಮ ಖಜಾನೆಗೆ ಬಹಳಷ್ಟು ಹಣ ಹರಿದು ಬರುವುದು" ಎಂದು ವಿಲ್ಸನ್ ರಾಜನಿಗೆ ಹೇಳಿದ. ೧೮೪೦ರಲ್ಲಿ ಅತ್ಯಂತ ಕಡಿಮೆ ಶುಲ್ಕ ಕೊಟ್ಟು ಫೆಡ್ರಿಕ್ ವಿಲ್ಸನ್ ತೆಹರಿ ದೇಶಿ ಸಂಸ್ಥಾನದ ಕಾಡುಗಳನ್ನು ಲೀಜ್ ಮೇಲೆ ಪಡೆದುಕೊಂಡ. ಆ ಕಾಡಿನಲ್ಲಿ ಯಮುನಾ ಮತ್ತು ಭಾಗೀರಥಿ ಕಣಿವೆಯ ಕಾಡುಗಳು ಸೇರಿದ್ದವು. ಪ್ರಾಣಿಗಳನ್ನು ಬೇಟೆಯಾಡಿ ಅವುಗಳ ಉತ್ಪನ್ನಗಳನ್ನು ಮಾರಲು ಸಹ ವಿಲ್ಸನ್‌ಗೆ ಅನುಮತಿ ಸಿಕ್ಕಿತು.

೧೮೬೪ರ ಅವಧಿಗೆ ದೇಶೀ ಸರ್ಕಾರವು ಲೀಜ್ ಕರಾರನ್ನು ನವೀಕರಿಸಿ ಕಾಡಿನಲ್ಲಿಯ ಅಮೂಲ್ಯ ಮರಗಳನ್ನು ಸಹ ವರ್ಷಕ್ಕೆ ಕೇವಲ ೪೦೦ ರುಪಾಯಿಗಳ ಶುಲ್ಕದ ಆಧಾರದ ಮೇಲೆ ಲೀಜ್‌ಗೆ ಕೊಟ್ಟಿತು. ಹರಿಯುವ ನೀರಿನಲ್ಲಿ ಮರಗಳನ್ನು ತೇಲಿ ಬಿಡುವ ಮಹತ್ವದ ಹೊಸ ಪದ್ಧತಿಯೊಂದನ್ನು ವಿಲ್ಸನ್ ಜಾರಿಗೆ ತಂದ. ಇದರಿಂದಾಗಿ ಅರಣ್ಯಾಧಾರಿತ ಕೈಗಾರಿಕೆ ಪ್ರವರ್ಧಮಾನಕ್ಕೆ ಬರಲು ಅನುಕೂಲವಾಯಿತು.

೧೮೬೫ರಲ್ಲಿ ವಿಲ್ಸನ್‌ನ ಲೀಜ್ ಅವಧಿ ಮುಗಿದ ಮೇಲೆ ಈಶಾನ್ಯ ಭಾಗದ ರಾಜ್ಯಗಳ ಸರ್ಕಾರಗಳು ಇಂಗ್ಲೀಷರೊಂದಿಗೆ ಒಂದು ಒಪ್ಪಂದದ ಮೂಲಕ ವರ್ಷವೊಂದಕ್ಕೆ ೧೦ಸಾವಿರ ರುಪಾಯಿಗಳಿಗೆ ಆ ಪ್ರದೇಶದ ಎಲ್ಲಾ ಕಾಡನ್ನು ೨೦ವರ್ಷದ ಅವಧಿಗೆ ಲೀಜ್‌ಗೆ ಕೊಟ್ಟವು. ಈ ಒಪ್ಪಂದವನ್ನು ಪುನರ್ ಚರ್ಚೆಯ ನಂತರ ಇನ್ನೂ ೨೦ ವರ್ಷ ಅವಧಿಗೆ ಲೀಜನ್ನು ವಿಸ್ತರಿಸಲಾಯಿತು. ತದನಂತರ ಅದೇ ರೀತಿ ೧೯೦೫ರಲ್ಲಿ ಪುನಃ ೨೦ ವರ್ಷಗಳ ಅವಧಿಗೆ ಲೀಜ್ ವಿಸ್ತರಿಸಲಾಯಿತು. ಈ ಲೀಜ್ ಒಪ್ಪಂದಗಳ ಉದ್ದೇಶ ರೈಲ್ವೆ ಹಳಿಗಳ ಜಾಲವನ್ನು ಹರಡಲು ಅತ್ಯಗತ್ಯವಾಗಿ ಬೇಕಾಗಿದ್ದ ಸ್ಲೀಪರುಗಳನ್ನು ಪಡೆಯುವುದಾಗಿತ್ತು. ಇದುವರೆಗೆ ಸ್ಥಳೀಯ ಜನರು ತಮ್ಮ ಸ್ವಂತ ಅಗತ್ಯಗಳಾದ ಆಹಾರ, ಮೇವು, ಉರುವಲು, ಗೊಬ್ಬರ ಮತ್ತು ನಾರು ಇತ್ಯಾದಿಗಳನ್ನು ಪಡೆಯುತ್ತಿದ್ದ ಪದ್ಧತಿಗೆ ಈ ಒಪ್ಪಂದ ತಡೆಯುಂಟುಮಾಡಿತು. ೧೯೦೨ರಿಂದ ಲೀಜ್ ಹಣದ ಬದಲಾಗಿ ಅರಣ್ಯೋತ್ಪತ್ತಿಯ ಆದಾಯದ ಶೇ.೮೦ರಷ್ಟು ಹಣವನ್ನು ರಾಜ ಪಡೆಯಲಾರಂಭಿಸಿದ. ೧೮೬೯ ಮತ್ತು ೧೮೮೫ರ ಅವಧಿಯಲ್ಲಿ ಅರಣ್ಯಾಧಾರಿತ ಈ ಹೊಸ ಕೈಗಾರಿಕೆ ತೆಹರಿ ಗರ್‌ವಾಲ್ ಅರಣ್ಯಗಳಿಂದ ೬,೫೦೦,೦೦೦ ರೈಲ್ವೆ ಸ್ಲೀಪರುಗಳಿಗಾಗಿ ತೇಗದ ಮರಗಳನ್ನು ಕಡಿಯಲಾಯಿತು. ಹೀಗೆ ತೆಹರಿ ಗರ್‌ವಾಲ್ ಪ್ರದೇಶದ ಕಾಡು ಬ್ರಿಟಿಷರ ವಸಾಹತುಶಾಹಿಗೆ ತುಂಬಾ ಮಹತ್ವದ ಸಂಪನ್ಮೂಲವಾಗಿ ಒದಗಿ ಬಂದಿತು.

ಮೊದಲನೆ ಮತ್ತು ಎರಡನೇ ಮಹಾಯುದ್ಧದ ಕಾಲದಲ್ಲಿ ಈ ಪ್ರದೇಶದ ಕಾಡುಗಳಿಂದ ಮರದ ದೋಚುವಿಕೆ ಅವ್ಯಾಹತವಾಗಿ ಸಾಗಿತು. ಮರಗಳನ್ನು ಕಡಿಯುವ ಮತ್ತು ಜಲಸಾಗಾಣಿಕೆ ಅಭಿವೃದ್ಧಿಯಾದ ಮೇಲೆ ಈ ಸಂಪನ್ಮೂಲ ಸರಕಾರಿ ವ್ಯವಸ್ಥೆಯಿಂದ ಅಭಿವೃದ್ಧಿಗೊಂಡಿತು. ಇದರಿಂದಾಗಿ ಹೊಸದಾಗಿ ರಚಿತವಾಗಿದ್ದ ಅರಣ್ಯ ಇಲಾಖೆಗೂ ಗ್ರಾಮೀಣ ಜನರಿಗೂ ಮಧ್ಯೆ ಹಿತಾಸಕ್ತಿಗಳ ಘರ್ಷಣೆ ಪ್ರಾರಂಭವಾಯಿತು. ಅರಣ್ಯ ಇಲಾಖೆ ಕಾಡನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿದ್ದರೆ ಕಾಡಿನಲ್ಲಿದ್ದ ಹಳ್ಳಿಯ ಜನರು ಅದನ್ನು ತಮ್ಮ ಜೀವನದ ಮೂಲ ಆಧಾರವನ್ನಾಗಿ ಉಪಯೋಗಿಸುತ್ತಿದ್ದರು. ಈ ಎರಡು ಹಿತಾಸಕ್ತಿಯ ಮಧ್ಯದ ಘರ್ಷಣೆಯೇ ಸುಂದರಲಾಲ್‌ರ ಅರಣ್ಯಮುಖಿ ಕ್ರಿಯಾಶೀಲತೆಗೆ ಕಾರಣವಾಯಿತು.

೧೮೧೫ರಲ್ಲಿ ನೇಪಾಳದೊಂದಿಗೆ ನಡೆದ ಇಂಗ್ಲಿಷ್ ಯುದ್ಧದ ನಂತರ ಇಂಗ್ಲೀಷರು ಕುಮಾಂಗ್ ಮತ್ತು ಗರ್‌ವಾಲ್ ಪ್ರದೇಶದ ಹೆಚ್ಚಿನ ಭಾಗವನ್ನು ಆಕ್ರಮಿಸಿಕೊಂಡರು. ಈ ಸಮಯದಲ್ಲಿಯೇ ಗರ್‌ವಾಲ್ ವಿಭಜಿಸಲ್ಪಟ್ಟಿತು. ಅಲಕ್‌ನಂದಾ ನದಿಯ ಪೂರ್ವದ ಭೂ ಪ್ರದೇಶ ಬ್ರಿಟಿಷರ ನೇರ ಆಡಳಿತಕ್ಕೆ ಒಳಪಟ್ಟರೆ, ಪಶ್ಚಿಮದ ಭಾಗ ತೆಹರಿ ಗರ್‌ವಾಲ್ ಎಂಬ ದೇಶೀ ಸಂಸ್ಥಾನವಾಯಿತು. ಆ ಸಂಸ್ಥಾನದ ರಾಜ ಈ ಪ್ರದೇಶದ ಮೇಲೆ ತನ್ನ ಅಧಿಕಾರ ಸಾವಿರ ವರ್ಷಗಳಿಂದ ನಡೆಯುತ್ತಿರುವುದನ್ನು ಗುರ್ತಿಸಬಹುದೆಂದು ಹೇಳುತ್ತಿದ್ದ. ಗರ್‌ವಾಲ್‌ದ ಈ ಆಳ್ವಿಕೆ ಉತ್ತರ ಭಾರತದಲ್ಲಿಯೇ ಅತ್ಯಂತ ಹಳೆಯದು. ರಾಜನು ಅಲಕ್‌ನಂದಾ ನದಿ ಉಗಮಿಸುವ ಸ್ಥಳದ ಹತ್ತಿರವಿರುವ ಬದರೀನಾಥ ದೇವಸ್ಥಾನದ ಧರ್ಮಾಧಿಕಾರಿ ಎಂದು ತನ್ನನ್ನು ಭಾವಿಸುತ್ತಿದ್ದ. ರಾಜ ಅರ್ಧ ದೈವೀಸಂಭೂತತೆಯ ಸ್ಥಾನ

ಹೊಂದಿದ್ದರಿಂದ ಅವನ ಆಡಳಿತದ ಬಗ್ಗೆ ಉಂಟಾಗುತ್ತಿದ್ದ ಅಸಂತೋಷದ ವಿರುದ್ಧ ಜನರು ಕ್ವಚಿತ್ತಾಗಿ ವಿರೋಧ ವ್ಯಕ್ತಪಡಿಸುತ್ತಿದ್ದರು. ಅದರೆ ಕೆಳಮಟ್ಟದ ಅಧಿಕಾರಿಗಳ ಪೀಡೆಯ ಕಾರಣದಿಂದ ಜನರು ದೊಂಬಿ ಏಳುತ್ತಿದ್ದರು.

ಬ್ರಿಟಿಷರ ಪ್ರಭಾವ ಉಂಟಾಗುವ ಮೊದಲು ಆ ಪ್ರದೇಶದಲ್ಲಿ ರೈತರ ಪ್ರತಿಭಟನೆ 'ದಂಡಕ್' ಎಂಬುದಾಗಿತ್ತು. ಈ ಪ್ರತಿಭಟನೆಯ ರೀತಿಯ ಮೂಲಕ ಅಧಿಕಾರಿಗಳ ತಪ್ಪುಗಳನ್ನು ರಾಜನ ಗಮನಕ್ಕೆ ತರುತ್ತಿದ್ದರು. ಅಧಿಕಾರಿಗಳು ಜಾರಿಗೆ ತರುತ್ತಿದ್ದ ಹೊಸ ನಿಯಮಗಳೊಂದಿಗೆ ಅಸಹಕಾರ ಮಾಡುವುದು ಈ ಪ್ರತಿಭಟನೆಯ ಕ್ರಮ. ಕೆಲವೊಂದು ಸಲ ಮೀಸಲು ಕಾಡುಗಳಿಗೆ ಬೆಂಕಿಯನ್ನು ಹಚ್ಚಲಾಗುತ್ತಿದ್ದರೂ ಸಾಮಾನ್ಯವಾಗಿ ಪ್ರತಿಭಟನೆಗಳು ಅಹಿಂಸಾತ್ಮಕವಾಗಿರುತ್ತಿದ್ದವು. ಕೆಲವು ಸಲ ಅಧಿಕಾರಿಯನ್ನು ಖೈದುಮಾಡಿ ಅವನಿಗೆ ಅವಮಾನ ಮಾಡುತ್ತಿದ್ದರಾದರೂ ದೈಹಿಕವಾಗಿ ಹಿಂಸಿಸುತ್ತಿರಲಿಲ್ಲ. ನಗಾರಿಗಳನ್ನು ಬಾರಿಸುವುದರ ಮೂಲಕ ಜನರು ಸೇರಬೇಕೆಂದು ಸೂಚಿಸಲಾಗುತ್ತಿತ್ತು. ಅಕ್ಕ-ಪಕ್ಕದ ಹಳ್ಳಿಯವರೆಲ್ಲಾ ಬರುತ್ತಿದ್ದರು. ಸಾಮಾನ್ಯವಾಗಿ ದೇವಸ್ಥಾನ ಸಭಾಸ್ಥಳವಾಗಿರುತ್ತಿತ್ತು.

ಹೊಸ ನಿಯಮಗಳನ್ನು ಪಾಲಿಸಕೂಡದೆಂದೂ ಮತ್ತು ಹೊಸತೆರಿಗೆಗಳನ್ನು ಕೊಡಕೂಡದೆಂದೂ ಆ ಸಭೆಯಲ್ಲಿ ತೀರ್ಮಾನಿಸಲಾಗುತ್ತಿತ್ತು. ಸಭಾಸ್ಥಳದಿಂದ ಜನರೆಲ್ಲರೂ ರಾಜಧಾನಿಗೆ ಪಾದಯಾತ್ರೆ ಬೆಳೆಸುತ್ತಿದ್ದರು. ಅಲ್ಲಿ ತಮಗೆ ದರ್ಶನ ಕೊಡಬೇಕಂದು ರಾಜನನ್ನು ಒತ್ತಾಯಿಸುತ್ತಿದ್ದರು. ರಾಜ ದರ್ಶನ ಕೊಟ್ಟು ಜನರ ತೊಂದರೆಯನ್ನು ನಿವಾರಿಸುವುದಾಗಿ ಭಗವಸೆ ಕೊಟ್ಟಮೇಲೆ ಜನರ ಗುಂಪು ಚದುರುತ್ತಿತ್ತು. 'ದಂಡಕ್' ಎಂದರೆ ಪರಂಪರೆಯಿಂದ ಬಂದ ಪ್ರತಿಭಟನಾ ಕ್ರಮ. ಕಿರುಕುಳ ಕೊಡುತ್ತಿದ್ದ ಅಧಿಕಾರಿ ಗುರುತಿಸಲ್ಪಟ್ಟು ಅವನಿಗೆ ಸೂಕ್ತ ಶಿಕ್ಷೆ ಕೊಟ್ಟ ಮೇಲೆ ಪ್ರತಿಭಟನೆ ನಿಂತು ಹೋಗುತ್ತಿತ್ತು. ಅರಣ್ಯದೊಂದಿಗಿನ ತಮ್ಮ ಸಂಬಂಧದ ಮೇಲೆ ನಿರ್ಬಂಧ ಹೆಚ್ಚಾಗುತ್ತಿದ್ದಂತೆ ಗಿರಿಜನರು ಮತ್ತು ಅರಣ್ಯವಾಸಿಗಳು ತಮ್ಮ ಅಸಂತೋಷವನ್ನು ದಂಡಕ ರೂಪದಲ್ಲಿ ವ್ಯಕ್ತಪಡಿಸುತ್ತಿದ್ದರು. ೧೯೩೦ರ ನಂತರ ಈ ಪ್ರತಿಭಟನಾ ಕ್ರಮ ಹೊಸ ತಿರುವು ಪಡೆಯಿತು. ಆ ಪ್ರತಿಭಟನೆ ಸರ್ಕಾರ ಮತ್ತು ಹಳ್ಳಿಗಳ ಮಧ್ಯದ ಘರ್ಷಣೆಯ ಸಂಕೇತವಾಗಿತ್ತು. ಇಂಗ್ಲೀಷರ ನೇರ ಆಡಳಿತ ಭಾಗದಿಂದ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿದಾಗಲೆಲ್ಲಾ ಇಂತಹ ಪ್ರತಿಭಟನೆಗಳು ಉಂಟಾಗುತ್ತಿದ್ದದ್ದು ಸಹಜವಾಗಿತ್ತು. ಆ ಅಧಿಕಾರಿಗಳು 'ದಂಡಕ್' ಪರಂಪರೆಯ ಪ್ರತಿಭಟನೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಅಂತಹ ಪ್ರತಿಭಟನೆಗಳನ್ನು 'ದಂಗೆ' ಎಂದು ತಿಳಿಯುತ್ತಿದ್ದರು.

ಜರ್ಮನ್ ದೇಶದ ಅರಣ್ಯ ವಿಷಯದ ತಜ್ಞ 'ಫ್ರಾನ್ಸ್ ಏಸ್‌ಕೆ'ಯ ಹೊಸ ನಿರ್ಬಂಧಗಳ ಕಾರಣದಿಂದ ತೆಹರಿ ಗರ್‌ವಾಲ್‌ನ ಪಶ್ಚಿಮ ಭಾಗದ 'ರಾವೈನ್' ಪ್ರದೇಶದ ಜನರು ತಮ್ಮ ಪರಂಪರಾಗತ ದಂಡಕ್ ಮೂಲಕ ಅಸಂತೋಷವನ್ನು ವ್ಯಕ್ತಪಡಿಸಿದರು. ಆ ಪ್ರದೇಶದಲ್ಲಿನ ಜನರ ಆರ್ಥಿಕ ಚಟುವಟಿಕೆ ಕುರಿಸಾಕಾಣಿಕೆ ಮತ್ತು ಪಶುಸಾಕಾಣಿಕೆಯನ್ನು ಅವಲಂಬಿಸಿತ್ತು. ಅಲ್ಲಿಯ ಪ್ರತಿಯೊಂದು ಕುಟುಂಬ ೧೦ ಕುರಿ, ೧ ಹಸು, ೧ ಎಮ್ಮೆಯನ್ನು ಸಾಧಾರಣವಾಗಿ ಹೊಂದಿರುತ್ತಿತ್ತು. ಈ

ಮಿತಿಯನ್ನು ಮೀರಿ ಯಾರಾದರೂ ಹೆಚ್ಚು ಪ್ರಾಣಿಗಳನ್ನು ಸಾಕಿದರೆ ಅವರ ಮೇಲೆ ತೆರಿಗೆ ಹಾಕಲಾಗುತ್ತಿತ್ತು. ಅಲ್ಲದೆ, ಮರದ ಕೆಳಭಾಗದ ರೆಂಬೆಗಳನ್ನು ಅನುಮತಿ ಇಲ್ಲದೆ ಕಡಿಯುವಂತಿರಲಿಲ್ಲ. ರಕ್ಷಿತ ಕಾಡುಗಳ ಹೊರಗಿರುವ ಜಮೀನು ಸಾಕಾಗುವುದಿಲ್ಲವೆಂಬ ಅನಿಸಿಕೆಯು ರಾವೈನ್ ಪ್ರದೇಶದಲ್ಲಿ ಮೂಡಿತ್ತು. ಆದ್ದರಿಂದ ಪರಂಪರಾಗತ 'ದಂಡಕ್' ಪ್ರತಿಭಟನೆ ಪಕ್ಕದ ಪ್ರದೇಶವಾದ ಜಾನ್‌ಪುರದವರೆಗೂ ಹಬ್ಬಿತು.

ಮುಖ್ಯಮಂತ್ರಿ 'ಚಕ್ರಧರ್ ಜ್ಯೂಯಲ್' ಪ್ರತಿಭಟನಾಕಾರರನ್ನು ಬಂಧಿಸುವಂತೆ ಆ ಪ್ರದೇಶದ ಜಿಲ್ಲಾಧಿಕಾರಿಗೆ ಆದೇಶ ನೀಡಿದನು. ಪ್ರತಿಭಟನಾಕಾರರ ಇಬ್ಬರು ನಾಯಕರು ಯಮುನಾ ನದಿಯ ತೀರದಲ್ಲಿರುವ 'ಬರ್ಕತ್' ಎಂಬ ಸ್ಥಳಕ್ಕೆ ಬರಬೇಕೆಂದು ಆ ಜಿಲ್ಲಾಧಿಕಾರಿ ವಿನಂತಿಸಿಕೊಂಡ. ಅಲ್ಲಿ ಅವರ ತೊಂದರೆಗಳನ್ನು ಕೇಳಲಾಗುವುದೆಂದು ತಿಳಿಸಿದ. ಆದರೆ ಅಧಿಕಾರಿಗಳು ಅವರಿಗೆ ಕೈಕೋಳ ಹಾಕಿ ತೆಹರಿಗೆ ಕರೆದುಕೊಂಡು ಹೋದರು ಮತ್ತು ಸ್ಥಳೀಯ ಪೋಲೀಸರ ವಶಕ್ಕೆ ಕೊಟ್ಟರು.

ಅಧಿಕಾರಿಗಳು ಬರ್ಕತ್‌ನಿಂದ ಹಿಂತಿರುಗುತ್ತಿದ್ದಾಗ ಬಂಧಿತರಾದ ನಾಯಕರಿಗೆ ಊಟ ತೆಗೆದುಕೊಂಡು ಹೋಗುತ್ತಿದ್ದ ರೈತರ ಭೇಟಿಯಾಯಿತು. ಆಗ ಅಧಿಕಾರಿಗಳು ಮತ್ತು ರೈತರ ಮಧ್ಯೆ ಬಿರುಸಾದ ಚರ್ಚೆ ಪ್ರಾರಂಭವಾಯಿತು, ಮತ್ತು ಜಗಳವುಂಟಾಯಿತು. ಓರ್ವ ಅಧಿಕಾರಿಯು ಗುಂಪಿನ ಮೇಲೆ ಗುಂಡು ಹಾರಿಸಿದ. ಸ್ಥಳದಲ್ಲಿಯೇ ಇಬ್ಬರು ಸತ್ತರು ಮತ್ತಿಬ್ಬರಿಗೆ ಗಾಯಗಳಾದವು. ಈ ಘಟನೆಯಿಂದಾಗಿ ಪ್ರತಿಭಟನೆ ಇನ್ನೂ ಬಿರುಸಾಯಿತು. ಜನರೆಲ್ಲರೂ 'ತಿಲರಿ' ಎಂಬಲ್ಲಿ ಯಮುನಾ ನದಿಗೆ ಹತ್ತಿರದ ಮೈದಾನದಲ್ಲಿ ಜಮಾಯಿಸಿದರು.

ಮೇ ೨೬ರಂದು ಮುಖ್ಯಮಂತ್ರಿ 'ಜ್ಯೂಯಲ್' ಪ್ರತಿಭಟನಾಕಾರರ ಬಳಿಗೆ ಪೋಲೀಸ್ ಪಡೆಯನ್ನು ಕಳುಹಿಸಿದ. ತನ್ನ ಜನರ ವಿರುದ್ಧವೇ ಹೋರಾಟಕ್ಕಿಳಿಯಲು ಪೋಲೀಸ್ ಅಧಿಕಾರಿ ಸುಂದರ್‌ಸಿಂಗ್ ನಿರಾಕರಿಸಿದ. ಆಗ ಜ್ಯೂಯಲ್ ಸ್ವತಃ ಸೇನಾಪಡೆಯ ಮುಖ್ಯಸ್ಥನಾಗಿ 'ರೀವೈನ್' ಕಡೆಗೆ ನಡೆದ. ಅವನು ಇಬ್ಬರು ಗ್ರಾಮಸ್ಥರನ್ನು ಪ್ರತಿಭಟನಾಕಾರರ ಬಳಿ ಕಳುಹಿಸಿ ಎಲ್ಲರೂ ಶರಣಾಗುವಂತೆ ತಿಳಿಸಿದ. ತಮ್ಮ ಅಧ್ಯಕ್ಷ ಹಿಂದಿರುಗಿದರೆ ಮಾತ್ರ ತಾವು ಪ್ರತಿಕ್ರಿಯಿಸುವುದಾಗಿ ಪ್ರತಿಭಟನಾಕಾರರು ಹೇಳಿದರು. ಸೇನಾಪಡೆ ಪ್ರತಿಭಟನಾಕಾರರನ್ನು ಮೂರೂ ಕಡೆಯಿಂದ ಸುತ್ತುವರೆದು ಗೋಲೀಬಾರ್ ಮಾಡಿತು. ೧೭ ಜನ ಸತ್ತರು. ಅನೇಕರು ಗಾಯಗೊಂಡರು. ಈ ಘಟನೆಯಿಂದಾಗಿ ಪರಂಪರಾಗತ ಪ್ರತಿಭಟನಾ ಪದ್ಧತಿ ತಪ್ಪಿಹೋಯಿತು. ದೇಶಕ್ಕೆ ಸ್ವಾತಂತ್ರ ಬಂದ ಮೇಲೆ ಮೇ ೩೦ನ್ನು 'ವನದಿವಸ'ವೆಂದು ಆಚರಿಸುವ ಮೂಲಕ ಹುತಾತ್ಮರಾದವನ್ನು ನೆನೆಯಲಾಗುತ್ತಿದೆ. (ಮುಂದುವರಿಯುವುದು...)

* * *

ಡಿ.ವಿ.ಜಿ. ಜೀವನ ಕುರಿತ ಎರಡು ದೃಷ್ಟಾಂತಗಳು

– *ಆರ್.ಗಣೇಶ್*

(ಮಾರ್ಚ್-ಡಿ.ವಿ.ಜಿ.ಯವರ ಜನ್ಮ ಮಾಹೆಯ ನೆನಪಿನಲ್ಲಿ.- ಸಂ)

ಸ್ವಾಭಿಮಾನಿ ಡಿ.ವಿ.ಜಿ.

ಶ್ರೀ ದೇವರಾಜ ಅರಸರು ಮುಖ್ಯಮಂತ್ರಿಗಳಾಗಿದ್ದ ದಿನಗಳವು. ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ಜಿ.ವಿ.ಕೆ.ರಾಯರು ಅಧಿಕಾರದಲ್ಲಿದ್ದರು. ಇಬ್ಬರಿಗೂ ಡಿ.ವಿ.ಜಿ.ಯವರ ಬಗ್ಗೆ ನಿರತಿಶವಾದ ಗೌರವ. ಆದುದರಿಂದ ಅವರಿಬ್ಬರೂ ಸಮಾಲೋಚಿಸಿ ಗುಂಡಪ್ಪನವರಿಗೆ ರಾಜ್ಯ ಸರ್ಕಾರದ ಮೂಲಕ ಗೌರವ ಮಾಸಾಶನವನ್ನು ಕೊಡಿಸಬೇಕೆಂದು ತೀರ್ಮಾನಿಸಿದರು. ಈ ವಿಷಯವನ್ನು ಪತ್ರಿಕೆ–ಆಕಾಶವಾಣಿಗಳ ಮೂಲಕ ಪ್ರಚುರಪಡಿಸಿದ್ದೂ ಆಯಿತು. ಆದರೆ ಡಿ.ವಿ.ಜಿ.ಯವರು ತಮ್ಮ ಎಂದಿನ ನಿಲುಮೆಯಂತೆ ಈ ಸವಲತ್ತು ಸಮ್ಮಾನವನ್ನು ನಿರಾಕರಿಸಿದುದಲ್ಲದೆ ಸಾರ್ವಜನಿಕರ ಹಣವನ್ನು ತೆರಿಗೆದಾರ ಕಷ್ಟಾರ್ಜಿತವನ್ನು ಸರ್ಕಾರವು ಇಂಥ ಮುದುಕರ ಮಾಸಾಶನಗಳಿಗಾಗಿ ದುರುಪಯೋಗಿಸಿ ದುಂದು ಮಾಡಬಾರದು ಎಂಬ ಒಕ್ಕಣೆಯ ಪತ್ರವನ್ನು ಬರೆದು ಕಳುಹಿಸಿದರು! ಈ ಸಂಗತಿಯನ್ನು ಪ್ರಸ್ತುತ ಲೇಖಕನಿಗೆ ಶ್ರೀ ಜಿ.ವಿ.ಕೆ.ರಾಯರೇ ತಿಳಿಸಿದ್ದಲ್ಲದೆ ಶ್ರೀ ದೇವರಾಜ ಅರಸರು ಡಿ.ವಿ.ಜಿ.ಯವರ ನಿರಾಕರಣ ಪತ್ರವನ್ನು ಕಂಡು ನೊಂದು ಬೇಸತ್ತು "ರಾಯರೇ, ಗುಂಡಪ್ಪನವರು ನಮ್ಮ ಗೌರವವನ್ನು ಇಷ್ಟಾದರೂ ಒಪ್ಪಿಕೊಳ್ಳಲಿಲ್ಲವಲ್ಲ. ಅವರ ಅಪರಿಗ್ರಹವೇ ದೊಡ್ಡದಾಯಿತು. ನಮಗೆ ನಯವಾಗಿಯೇ ಎಕ್ಕಡದೇಟು ಹಾಕಿದ್ದಾರೆ" ಎಂದು ಆಡಿದ್ದ ಮಾತನ್ನು ಅರುಹಿದ್ದರು.

ದಿನಾಂಕ ೧೮–೧–೧೯೭೦ ರಂದು ಡಿ.ವಿ.ಜಿ.ಯವರಿಗೆ ಬೆಂಗಳೂರಿನ ಪುರಭವನದಲ್ಲಿ ಅದ್ದೂರಿಯ ಸನ್ಮಾನವು ನಡೆದು ಲಕ್ಷ ರುಪಾಯಿಗಳಿಗೂ ಮಿಕ್ಕ ನಿಧಿಯನ್ನು ಸಮರ್ಪಿಸಲಾಯಿತು. ದೇಶ ವಿದೇಶಗಳಿಂದ ಡಿ.ವಿ.ಜಿ.ಯವರ ಅಭಿಮಾನಿಗಳೂ, ಸಾಹಿತ್ಯ–ಪತ್ರಿಕೋದ್ಯಮ–ಸಾಂಸ್ಕೃತಿಕ ಲೋಕಗಳ ಅಸಂಖ್ಯ ಮಹನೀಯರೂ ಆಗಮಿಸಿ ತಮ್ಮ ತಮ್ಮ ಗೌರವವನ್ನು ಸಲ್ಲಿಸಿದರು. ಆದರೆ ಡಿ.ವಿ.ಜಿ. ಆ ಎಲ್ಲಾ ಹಣವನ್ನು ಗೋಖಲೆ ಸಂಸ್ಥೆಗೆ ದೇಣಿಗೆಯಾಗಿ ನೀಡಿದರು. ವಸ್ತುತಃ ಈ ಕಟ್ಟಲೆಯ ಮೇಲೆಯೇ ಪ್ರಸ್ತುತ ಸಮ್ಮಾನಕ್ಕಾದರೂ ಅವರು ಒಪ್ಪಿದ್ದು. ಆತ್ಮೀಯರು ಹಲವರು ಈ ಸಂದರ್ಭದಲ್ಲಿಯಾದರೋ ಡಿ.ವಿ.ಜಿ.ಯವರು ತಮ್ಮ ಓಡಾಟಕ್ಕೆ ಕಾರನ್ನು ಕೊಳ್ಳುವಂತಾಗಲೆಂದು ಒತ್ತಾಯಿಸಿದರು. ಎಂಭತ್ಮೂರು ವರ್ಷಗಳ ಗುಂಡಪ್ಪನವರು ಆಗಲೂ ಓಡಾಟಕ್ಕೆ ಕಷ್ಟಪಡುವಂತಾಗುವುದು ಬೇಡವೆಂಬ ಕಾಳಜಿ ಎಲ್ಲರದ್ದಾಗಿತ್ತು. ಆದರೆ ಇವೆಲ್ಲಕ್ಕೂ ಸ್ವಲ್ಪ ಕೂಡ ಸೊಪ್ಪು ಹಾಕದೆ 'ಆಟೋ, ಜಟಕಾ, ಇತ್ಯಾದಿಗಳೆಲ್ಲಾ ನಮಗಿರುವಾಗ ಕಾರೇಕೆ?' ಎಂದು ನುಡಿದು ತಮ್ಮ ತೀರ್ಮಾನದಂತೆಯೇ ನಡೆದರು.

ಇಂಥ ಸಮ್ಮಾನದ ಮರುದಿನ ಅಂದಿನ ನಾಗಸಂದ್ರ ರಸ್ತೆಯ (ಇದೀಗ ಡಿ.ವಿ.ಜಿ. ರಸ್ತೆ) ಡಿ.ವಿ.ಜಿ.ಯವರ ಮನೆಗೆ (ಇದೀಗ ನಾಮಾವಶೇಷವಾಗಿದೆ) ಹತ್ತಿರದಲ್ಲಿದ್ದ ಚಿಲ್ಲರೆ ಅಂಗಡಿಯ ಕಟ್ಟೆಯ ಮೇಲೆ ಸುಧಾ ವಾರಪತ್ರಿಕೆಯ ಇ.ಆರ್.ಸೇತೂರಾಮ್ ಅವರು ಗೆಳೆಯರೊಡನೆ ಹರಟುತ್ತಾ ಹೊಗೆಬತ್ತಿ ಹಚ್ಚಿದ್ದರು. ಆಗ ಡಿ.ವಿ.ಜಿ.ಯವರ ಮನೆಯಿಂದ ಅವರ ಮನೆವಾಳ್ತೆಯ ಆಳು ಕರುಪಯ್ಯ ಬಂದು ಅಂಗಡಿಯವರಿಗೆ ಏನೋ ಚೀಟಿಯನ್ನು ನೀಡಿದ. ಅದೇನೆಂಬ ಕುತೂಹಲದಿಂದ ಬಗ್ಗಿ ನೋಡಿದರು ಸೇತೂರಾಮ್. ಅಲ್ಲಿದ್ದದ್ದಾದರೂ ಏನು? "ಮನೆಗೆ ಅನಿರೀಕ್ಷಿತ ಆತ್ಮೀಯರು ಬಂದಿದ್ದಾರೆ. ಕಾಫಿ ಪುಡಿ, ಸಕ್ಕರೆ ಉದ್ದರಿ ಕೊಟ್ಟಲ್ಲಿ ನಾಳೆ ತಪ್ಪದೆ ಹಣ ಚುಕ್ತಾ ಮಾಡುತ್ತೇನೆ" ಎಂಬ ಡಿ.ವಿ.ಜಿ.ಯವರ ವಿನಮ್ರ ಸಂಕ್ಷಿಪ್ತ ಅಭ್ಯರ್ಥನೆ!

ಈ ಬಗೆಗೆ ಇ.ಆರ್.ಸೇತೂರಾಮ್ ಬರೆಯುತ್ತಾ ಪ್ರತಿಕ್ರಿಯಿಸುತ್ತಾರೆ: "ನಿನ್ನೆ ಸಂಜೆ ನನ್ನದಲ್ಲ ಎಂದು ಒಂದು ಲಕ್ಷ ರುಪಾಯಿಗಳನ್ನು ದಾನ ಮಾಡಿದವರ ಪರಿಸ್ಥಿತಿ ಹೊತ್ತುಹೊತ್ತಿನ ಕಾಫಿಪುಡಿ, ಸಕ್ಕರೆಗೂ ಕಷ್ಟವೆನಿಸುವಂಥದ್ದು ಇಂತಿದ್ದರೂ ಈ ಬಗೆಗೆ ಬೇಸರವಿಲ್ಲದ, ಕೀಳರಿಮೆ–ಮೇಲರಿಮೆಗಳಿಲ್ಲದ ಮಹನೀಯರು ಡಿ.ವಿ.ಜಿ."

ಡಿ.ವಿ.ಜಿ. ಜೀವನೋತ್ಸಾಹ

ಡಿ.ವಿ.ಜಿ.ಯವರದು ಅದಮ್ಯ ಜೀವನೋತ್ಸಾಹ. ಎಂಥ ಕಷ್ಟ–ನಿಷ್ಠುರಗಳಲ್ಲಾಗಲಿ ರೋಗ–ರುಜಿನಗಳಲ್ಲಾಗಲಿ ಅವರದು ಸೋಲರಿಯದ ಮನೋಧರ್ಮ, ಲವಲವಿಕೆಯನ್ನು ಬಿಡದ ಜೀವನಧರ್ಮ. ಆದರೆ ಸ್ನೇಹವಿಲ್ಲದಿದ್ದರೆ ಬದುಕೇ ಬೇಡವೆಂಬಂಥ ಸ್ನೇಹಜೀವಿ ಅವರು.

ಅವರ ಜೀವನ ಸಂಧ್ಯೆಯ ದಿನಗಳಲ್ಲೊಮ್ಮೆ ಅಂತರಂಗಿಕರಾದ ಶ್ರೀ ಎಸ್.ಆರ್.ರಾಮಸ್ವಾಮಿಯವರೊಡನೆ ಹೀಗೆ ಹೇಳಿದರು.

"ನನಗೆ ಮುಪ್ಪು ಬಂದಿರುವುದು ನಿಜ. ಇದರಿಂದ ದೇಹಕ್ಕೂ ಮನಸ್ಸಿಗೂ ಎಷ್ಟೋ ಕಿರಿಕಿರಿಯಾಗುವುದೂ ನಿಜ. ಆದರೆ ಎಲ್ಲಿಯವರೆಗೆ ನಾಲ್ಕು ಜನರ ಸ್ನೇಹ–ವಿಶ್ವಾಸಗಳು ಸಿಗುವವೋ ಅಲ್ಲಿಯವರೆಗೆ ಬದುಕಬೇಕೆಂಬ ಬಯಕೆ ಕುಗ್ಗುವುದಿಲ್ಲ. ನನ್ನ ಜೀವನದಲ್ಲಿ ಆಗಾಗ ಬೇಸರ–ಬಳಲಿಕೆ ಕಾಣುವುದುಂಟು. ಅದಕ್ಕೆ ಮುಖ್ಯ ಕಾರಣ ನನ್ನ ಕಷ್ಟ–ಸುಖಗಳಲ್ಲಿ ಭಾಗಿಗಳಾಗಿದ್ದ ಒಳ್ಳೊಳ್ಳೆಯ ಗೆಳೆಯರು ಈಗ ಬದುಕಿಲ್ಲವೆನ್ನುವುದೇ. ಈ ಬಗೆಯ ಬಡತನವೇ ನನಗೆ ತುಂಬ ಕಷ್ಟ. ಒಂದು ಒಳ್ಳೆಯ ಗ್ರಂಥವನ್ನೋ, ಕಾವ್ಯವನ್ನೋ ಓದಿದರೆ ನನಗಾಗುವ ಸಂತಸವನ್ನು ಯಾರೊಡನೆ ಹೇಳಿಕೊಳ್ಳಲಿ? ಯಾವುದೋ ಒಂದು ಭಾಷಾ ಪ್ರಯೋಗದ ಔಚಿತ್ಯವನ್ನು ಕುರಿತೋ ವ್ಯಾಕರಣವನ್ನು ಕುರಿತೋ ಏನಾದರೂ ಸಂದೇಹ ಬಂದರೆ ಯಾರಲ್ಲಿ ಕೇಳಲಿ? ಬಿ.ಎಂ.ಶ್ರೀಕಂಠಯ್ಯನೇ, ಟಿ.ಎಸ್.ವೆಂಕಣ್ಣಯ್ಯನೇ, ಎಂ.ಆರ್.ಶ್ರೀನಿವಾಸಮೂರ್ತಿಯೇ, ಎ.ಆರ್.ಕೃಷ್ಣಶಾಸ್ತ್ರಿಯೇ? ಯಾರಿದ್ದಾರೆ ಈಗ ???......"

ಈ ಸ್ನೇಹಗುಣವೇ ಗುಂಡಪ್ಪನವರ ಗುಣಗೋಪುರದ ಹೊಳೆಹೊಳೆಯುವ ಕೀರ್ತಿಕಲಶವೆಂದರೆ ತಪ್ಪಾಗದು. (ಸಾಭಾರ : ಬ್ರಹ್ಮಪುರಿಯ ಭಿಕ್ಷುಕ)

'ಮುನ್ನುಡಿ ಕುರಿತು ಒಂದು ಚಿಂತನೆ'

– *ಶ್ರೀನಿವಾಸ*

(ಪು.ತಿ.ನ.ರವರ ಹಣತೆ ಕವನ ಸಂಕಲನಕ್ಕೆ ಕನ್ನಡದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಬರೆದ ಮುನ್ನುಡಿಯನ್ನು ಪು.ತಿ.ನ.ರ ಗೌರವಾರ್ಥವಾಗಿ ಇಲ್ಲಿ ಪ್ರಸ್ತುತ ಪಡಿಸಲಾಗಿದೆ. -ಸಂ)

ಶ್ರೀಮಾನ್ ಪುರೋಹಿತ ತಿ. ನರಸಿಂಹಾಚಾರ್ಯರು ತಮ್ಮ ಕವನಗಳ ಈ ಸಂಗ್ರಹಕ್ಕೆ ಒಂದು ಮುನ್ನುಡಿಯನ್ನು ಬರೆಯಬೇಕೆಂದು ನನ್ನನ್ನು ಕೇಳಿದ್ದಾರೆ. ಇಂಥ ಕವನಗಳಿಗೆ ಮುನ್ನುಡಿ ಬರೆಯುವುದಕ್ಕೆ ಯಾರಾದರೂ ಹೆಮ್ಮೆ ಪಡಬೇಕು. ನಾನು ಈ ಕೆಲಸವನ್ನು ಸಂತೋಷದಿಂದ ಮಾಡುತ್ತಿದ್ದೇನೆ.

ಇಷ್ಟರಾದವರಿಂದ ಮುನ್ನುಡಿಯೊಂದನ್ನು ಬರೆಯಿಸಿ ಪುಸ್ತಕಗಳ ಆರಂಭದಲ್ಲಿಡುವುದು ಈಗ ನಮ್ಮಲ್ಲಿ ಒಂದು ವಾಡಿಕೆಯಾಗಿದೆ. ಇದು ಈಚೆಗೆ ಒಂದು ಶಿಷ್ಟಾಚಾರವೇ ಆಗಿದೆ ಎನ್ನಬಹುದು. ಮುನ್ನುಡಿಗಳನ್ನು ಬರೆಯುವುದು, ಬರೆಯಿಸುವುದರಲ್ಲಿ ಇಷ್ಟವುಳ್ಳವರು ಹಾಗಿರಲಿ; ಮುನ್ನುಡಿಯನ್ನು ಬರೆಯುವುದು ಏಕೆ ಎಂದು ತಿಳಿಯಲಿಲ್ಲವಲ್ಲ ಎನ್ನುವವರೂ, ಮುನ್ನುಡಿಯಲ್ಲಿ ಏನನ್ನು ಹೇಳಬೇಕೆಂದು ತೋರಲಿಲ್ಲಾ ಎನ್ನುವವರೂ, ಮುನ್ನುಡಿಗಳನ್ನು ಬರೆದಿರುವುದುಂಟು. ಮುನ್ನುಡಿ ಎಂದರೆ ಬೇಸರಗೊಂಡು ಅದನ್ನು ಮುಳ್ಳುಡಿ ಎಂದು ಬೈದಿರುವವರೊಬ್ಬರು ತಮ್ಮ ಗ್ರಂಥವೊಂದಕ್ಕೆ ಹಿರಿಯರಾದ ಒಬ್ಬ 'ಗೃಧ್ರ'ರಿಂದ–ಇದು ಅವರೇ ಉಪಯೋಗಿಸಿರುವ ಮಾತು ಮುಳ್ಳುಡಿಯನ್ನು ಬರೆಯಿಸುತ್ತೇನೆಂದು ಪತ್ರಿಕೆಯಲ್ಲಿ ಪ್ರಕಟಿಸಿದರು. ಅಂತೂ ನಾವೆಲ್ಲ ಈಗ ಮುನ್ನುಡಿಗಳನ್ನು ಬರೆಯುವುದರಿಂದ ಏನೋ ಪ್ರಯೋಜನ ಇದೆಯೆಂದು ತಿಳಿದಿದ್ದೇವೆ.

ಈ ಭಾವನೆ ಸರಿಯೆಂದೇ ನನ್ನ ಅಭಿಪ್ರಾಯ. ನಮ್ಮ ಸಾಹಿತ್ಯ ಈಗೀಗ ಹೊಸದಾರಿಗಳಲ್ಲಿ ಏನಿದೆಯೆಂದು ನೋಡುವುದಕ್ಕೆ ಹೊರಟಿದೆ. ನಮ್ಮ ಕೆಲಸಗಾರರಿಗೆ ನಮ್ಮ ಭಾಷೆಯಲ್ಲಿ ಮೇಲ್ಪಂಕ್ತಿಗಳು ಸಾಕಾದಷ್ಟು ಇಲ್ಲ. ಆದ್ದರಿಂದ ಒಂದು ತುಂಡು ಒಂದು ತುಣುಕು ಹೊಸದಾದ ಯಾವ ಕೃತಿಯನ್ನು ಬರೆದವನಾದರೂ ಇದರಿಂದ ಜನಸುಖ ಪಡುವರೋ ಇಲ್ಲವೋ ಎಂದು ಸಂದೇಹದಲ್ಲಿರುತ್ತಾನೆ. ಇದರ ಮೇಲೆ ಓದುವವರಿಗೆ ಇಂಥ ಕೃತಿಗಳ ವಿಷಯದಲ್ಲಿ ರುಚಿ ಹದಕ್ಕೆ ಬಂದಿಲ್ಲ. "ಕೇಳು ಜನಮೇಜಯ ಧರಿತ್ರೀ" ಎಂಬ ಮಾತನ್ನು ಕೇಳಿದೊಡನೆ ಒಂದು ರೀತಿಯ ಕಾವ್ಯ ರಸಕ್ಕೆ ಅನುವಾಗುವ ಮನಸ್ಸು "ಬಾನ್ ತಿಳಿದಿತ್ತು ಬಿಳಿಮುಗಿಲೋಳಿ" ಎಂದು ಓದಿದದರೆ ಇದೇನು ವಿಷಯವೋ ಈತನೇನು ಕಲ್ಲನ್ನು ಕಡೆದು ವಿಗ್ರಹವನ್ನು ಮಾಡುತ್ತಾನೋ ಗಾಳಿಯನ್ನು ಹಿಡಿದು ಜೀವವನ್ನೂ ಅಲ್ಲುತ್ತಾನೋ ಎನ್ನುವುದನ್ನು ತಿಳಿಯದೇ ಇರುತ್ತದೆ. ಎಲ್ಲ ಸಾಹಿತ್ಯದಲ್ಲಿಯೂ ಈ ತೊಂದರೆ ಇದ್ದೇ ಇದೆ. ಇದರಿಂದಲೇ

ಪೂರ್ವಗ್ರಂಥಗಳಿಗೆ ಕೂಡ ಒಂದು ವ್ಯಾಖ್ಯಾನ ಬೇಕಾಗಿರುವುದು. ಅನೇಕ ವೇಳೆ ಇಂಗ್ಲೀಷಿನಲ್ಲಿ ಹಿರಿಯ ಕವಿಗಳ ಕವನ ಸಂಗ್ರಹಗಳಿಗೆ ಅಭಿಮಾನಿ ವಿಮರ್ಶಕರು ಕವಿವಿಷಯವಾದ ವಿಮರ್ಶೆಯನ್ನು ಸೇರಿಸುತ್ತಾರೆ. ನಮ್ಮವರು ಬಹುಸಮಯ ಪದ್ಯ ಓದುವ ಮೊದಲು ನಾಲ್ಕು ಮಾತನ್ನು ಪೀಠಿಕೆಯಾಗಿ ಹೇಳುತ್ತಾರೆ. ಕವಿಯಾದವನು ತನ್ನ ಕಾವ್ಯವನ್ನು ತಾನೇ ವಿವರಿಸುವುದು ತಪ್ಪಲ್ಲವೆಂದು ನಾವು ತಿಳಿದಿದ್ದರೆ ಕವಿಯೇ ಇಂಥ ಮುನ್ನುಡಿಯನ್ನು ಬರೆದು ಸೇರಿಸಬಹುದು. ಆದರೆ ಅನೇಕ ವೇಳೆ ಕವಿಗೆ ಜನದ ಮುಂದೆ ಬಂದು ನಿಲ್ಲುವಾಗ ತನಗೆ ಬೇಕಾದವರ ಕೈಯನ್ನು ಹಿಡಿದು ಬರುವುದು ಸುಖವೆಂದು ಕಾಣುತ್ತದೆ. ಕೃಷ್ಣನನ್ನು ನೋಡ ಹೋದ ರಾಧೆ ಜೊತೆಗೆ ಸಖಿಯನ್ನು ಕರೆದೊಯ್ದಳು. ಆ ಸಖಿ ವಯಸ್ಸಿನಲ್ಲಿ ರಾಧೆಗಿಂತ ಸ್ವಲ್ಪ ಹಿರಿಯಳೆಂದು ನನ್ನ ಊಹೆ. ನಮ್ಮ ಹೊಸ ಕವಿತೆಯ ಸಂಕೋಚವನ್ನು ನಿವಾರಿಸುವುದಕ್ಕೆ ನನ್ನಂಥವನ ಮುನ್ನುಡಿ ಎಂಬ ಇಂಥ ನೆಪ ಒಂದು ಸದ್ಯದಲ್ಲಿ ಅವಶ್ಯಕವಾಗಿದೆ.

ಇದರ ಮೇಲೆ ನಮ್ಮದೊಂದು ದೊಡ್ಡ ಆಸೆ. ಸಾಹಿತ್ಯ ಸೇವಕರಲ್ಲಿ ಪರಸ್ಪರ ಮತ್ಸರವಿರುತ್ತದೆ ಎಂದು ಸಾಮನ್ಯವಾದ ನಂಬಿಕೆ. ಬೆಳೆದ ಸಾಹಿತ್ಯಗಳಲ್ಲಿ ಇದರಿಂದ ತೊಂದರೆ ಕಾಣುವುದಿಲ್ಲ. ಸಾವಿರ ಜನ ಬರೆಯುವಲ್ಲಿ ಹತ್ತು ಗುಂಪಾದರೆ ಒಂದಕ್ಕೆ ನೂರು ಜನ ಇರುತ್ತಾರೆ. ಹೊಸದಾಗಿ ತಲೆಯೆತ್ತುತ್ತಿರುವ ಸಾಹಿತ್ಯದಲ್ಲಿ ಉಪಾಸಕರು ಒಬ್ಬರಿಗೆ ಒಬ್ಬರು ನೆರವಾಗಿರಬೇಕು. ಹೀಗಿಲ್ಲದಿದ್ದರೆ ಸಂಪ್ರದಾಯ ಬೆಳೆಯದೆಯೇ ಹೋಗಬಹುದು. ನಮ್ಮ ಈ ಗಣಸ್ಥಿತಿಯಲ್ಲಿ ಕನ್ನಡದ ಸೇವಕರೆಲ್ಲಾ ಒಂದು ಮನೆಯವರಂತಿರಬೇಕು; ನಾವೆಲ್ಲ ಒಂದು ಎಂಬ ಭಾವನೆಯಿಂದ ಬೆಳೆಯಬೇಕು. ಈ ಭಾವನೆ ಮೂಡುವುದಕ್ಕೆ ಮುನ್ನುಡಿಯನ್ನು ಬರೆಯುವುದೂ ಬರೆಯಿಸುವುದೂ ಒಂದು ದಾರಿ. ಇದರಿಂದ ಲೇಖಕರಲ್ಲಿ ನಾವು ಗೆಳೆಯರು ಎಂಬ ಭಾವನೆ ಮುಂದುವರೆಯುವುದು. ಇದೊಂದು ಸ್ನೇಹದ ಕಟ್ಟು, ಪ್ರೇಮದ ಅನುಬಂಧನ. ಉಳಿದ ಕಡೆ ಹೇಗಾದರೂ ಇರಲಿ, ನಮ್ಮಲ್ಲಿ ಮತ್ಸರವಿಲ್ಲ; ಅಥವಾ ಇಲ್ಲಿ ಅಲ್ಲಿ ಇರುವುದಾದರೂ ಸಾಧ್ಯವಾದಷ್ಟು ಅದನ್ನು ತುಳಿದಿದ್ದೇವೆ. ನಮ್ಮ ತಾಯ ಮುಂದೆ ನಾವು ಜಗಳವಾಡುವುದಿಲ್ಲ ಎಂಬುದನ್ನು ಕನ್ನಡ ಸೇವಕರು ಬಾಯಲ್ಲಿ ಹೇಳಬೇಕು. ಮನಸ್ಸಿನಲ್ಲಿ ನೆನೆಯಬೇಕು. ಕಾರ್ಯದಲ್ಲಿ ತೋರಿಸಬೇಕು. ಮುನ್ನುಡಿಕಾರನು ಸ್ನೇಹವನ್ನು ಸೂಚಿಸುವಲ್ಲಿ ಹೊಗಳಿ ಹೇಳುವ ಮಾತು ಒಂದು ಹೆಚ್ಚಾದರೇನು ಅವನು ವಿಶ್ವವಿಮರ್ಶಕನಲ್ಲ. ಅವನು ಹೊಗಳಿದ ಮಾತ್ರಕ್ಕೆ ಯಾರಿಗೂ ಧ್ರುವಪಟ್ಟ ಬರುವುದಿಲ್ಲ. ಆದರೆ ಜೊತೆಯವರಿಗೆ ನೆರವಾಗುವ ಮತ್ತು ಒಳ್ಳೆಯ ಮಾತನಾಡುವ ಸಂಪ್ರದಾಯ ಒಳ್ಳೆಯದು. ಅದನ್ನು ನಾವು ಬಳಸಬೇಕು. ನಮ್ಮ ಕವಿತೆ ಮುಂದಣಕಾಲಕ್ಕೆ ಬೇಕಾಗುವುದೋ ಇಲ್ಲವೋ ಅದು ಹೇಗಾದರೂ ಆಗ್ಗೆ ಕಾವ್ಯ ಚರಿತ್ರೆಯನ್ನು ಬರೆಯುವವನು ಈ ಕವಿಗಳಲ್ಲಿ ಪರಸ್ಪರ ವೈಷಮ್ಯವಿರಲಿಲ್ಲ, ಬಹಳ ಪ್ರೇಮವೇ ಇತ್ತೆಂದು ತೋರುತ್ತದೆ ಎಂದು ಹೇಳುವಂತೆ ನಾವು ಈಗ ನಡೆದುಕೊಳ್ಳಬೇಕು.

ಈ ಎಲ್ಲ ದೃಷ್ಟಿಯಿಂದಲೂ ಗ್ರಂಥಕರ್ತರಿಗೆ ಸೌಹಾರ್ದ ಅವಶ್ಯಕ. ತನ್ನಲ್ಲಿ ತನಗೆ ಖಂಡಿತವಾದ ನಂಬಿಕೆಯಿಲ್ಲವೆಂದೆ ಹಿರಿಯ ಕವಿ ಬರಿಯ ವಿನಯದ ನುಡಿಯನ್ನು ನುಡಿಯಲಿಲ್ಲ. ಕವಿಯಾದವನ ಮನಸ್ಸಿನಲ್ಲಿ ತಾನು ಕವಿ ಎಂಬ ತಿಳಿವಿನೊಂದಿಗೆ

ಈ ಅಪ್ರತ್ಯಯವೂ ಅವಳಿಜವಳಿಯಾಗಿ ಬೆಳೆಯುತ್ತದೆ. ಅವನ ಕವಿತೆಯನ್ನು ಮೆಚ್ಚದವರು ಆ ಅವಳಿಯನ್ನು ನೋಡುತ್ತಾರೆ. ಮೆಚ್ಚುವವರಿಗೆ ಕಾಣುವುದು ಈ ಜವಳಿ. ಇಪ್ಪತ್ತು ವರ್ಷದ ಹಿಂದೆ ಕನ್ನಡದ ಕೆಲಸಗಾರರು ಹೊರಗೆ ಬರುವುದಕ್ಕೆ ಹಿಂತೆಗೆಯುತ್ತಿದ್ದರು. ಧೈರ್ಯ ಹೇಳುವ ಅಣ್ಣತಮ್ಮಂದಿರನ್ನು ಅವರು ಆಗ ಕಾಣಲಿಲ್ಲ. ಅಣ್ಣತಮ್ಮಂದಿರಲಿಲ್ಲವೆಂದಲ್ಲ; ಒಬ್ಬರನ್ನೊಬ್ಬರು ಅವರು ಕಾಣಲಿಲ್ಲ. ಇದರಿಂದ ನಮ್ಮ ಸಾಹಿತ್ಯದ ಮುನ್ನಡೆಯಲ್ಲಿ ಹತ್ತಾರು ವರ್ಷವನ್ನು ವೃಥಾ ಕಳೆದುಕೊಂಡೆವು. ಇನ್ನೂ, ತನಗೆ ಮೊದಲು ಸಾಹಿತ್ಯದಲ್ಲಿ ಕೆಲಸಮಾಡಿರುವವರ ಮೆಚ್ಚಿಕೆಯ ಮಾತು ಗ್ರಂಥಕರ್ತನಿಗೆ ಎಷ್ಟು ಸಂತೋಷವನ್ನು ಕೊಡುತ್ತದೆನ್ನುವುದು ಬಹುಜನರ ಅನುಭವದಲ್ಲಿರುವ ವಿಷಯ. ಈ ಮುನ್ನುಡಿಯನ್ನು ಬರೆಯುವ ನಾನು ಬಹಳ ಸಂಕೋಷಪಡುವವನಲ್ಲ. ಆದರೂ ನಾನು ನನ್ನ ಕೆಲಸದಲ್ಲಿ ಮುಂದೆ ನಡೆಯಬೇಕಾದರೆ ನನಗೆ ಹಿರಿಯರ ಧೈರ್ಯದ ಮಾತು, ಕಿರಿಯರ ಪ್ರೇಮದ ಮಾತು ಬೇಕಾದವು. ಸಂಕೋಚಪಡದೇ ಇರುವವರಿಗೂ ಇಂಥ ನೆರವು ಬೇಕಾಗುತ್ತದೆ, ಇನ್ನು ಸಂಕೋಚ ಪಡುವ ಲೇಖಕರ ಮಾತೇನು?

ಶ್ರೀಮಾನ್ ನರಸಿಂಹಾಚಾರ್ಯರು ಬಹಳ ಸಂಕೋಚ ಸ್ವಭಾವದ ಕವಿಗಳು ಜನ ಇವರನ್ನು ಹೊರಕ್ಕೆ ಕರೆಯದೆ ಇದ್ದರೆ ಇವರ ಲೇಖನ ಇವರ ಸ್ನೇಹಿತರಲ್ಲಿ ಸುತ್ತುತ್ತಾ ಇದ್ದು ಬಿಡುವುದು. ಆ ಸ್ನೇಹಿತರು ಅದನ್ನು ಸ್ವಲ್ಪ ಅವಜ್ಞತೆಯಿಂದ ನೋಡಿದರೆ ಅದು ಇವರ ಹಸ್ತ ಪ್ರತಿಯಲ್ಲೇ ನಿಂತುಹೋಗುವುದು. ಇವರ ಸ್ವಭಾವ ಹೀಗಿರುವಲ್ಲಿ ಇವರ ಕಾವ್ಯವೋ ಹೊಸ ಸಾಹಿತ್ಯದ ಅತ್ಯುತ್ತಮ ಕೃತಿಯಲ್ಲಿ ಸೇರತಕ್ಕದ್ದಾಗಿದೆ. ಕನ್ನಡದ ಆಧುನಿಕ ಕವಿತೆಯ ಕುಲಪತಿಗಳಾದ ಶ್ರೀಮಾನ್ ಬೆಳ್ಳೂರ ಮೈ ಶ್ರೀಕಂಠಯ್ಯನವರ ಶಿಷ್ಯರು ಅವರಿಗೆ ಅರ್ಪಿಸಿದ 'ಕಿರಿಯ ಕಾಣಿಕೆ'ಯಲ್ಲಿ ಇವರ ಕವಿತೆ ಮೊದಲು ನನ್ನ ಕಣ್ಣಿಗೆ ಕಂಡಿತು. ಆಮೇಲೆ ಒಂದೆರಡು ಪದ್ಯ 'ತಳಿರು'ನಲ್ಲಿ ಬಂದವು. ಆ ಕವಿತೆಗಳನ್ನು ನೋಡಿದವರಿಗೆ ಇವರ ಕೃತಿಯಲ್ಲಿ ಹಿರಿದಾದ ಒಂದು ಕಾವ್ಯ ಶಕ್ತಿ ಇದೆ ಎಂಬ ಸೂಚನೆ ಸ್ಪಷ್ಟವಾಗಿ ಕಂಡಿತು. ಮುದುಕಿಯೊಬ್ಬಳು ಮಲೆಯ ಮೇಲಿನ ದೇಗುಲದಲ್ಲಿ ಪೂಜಾ ಮೂರ್ತಿಯ ಮುಂದೆ ರಂಗವಲ್ಲಿಯನ್ನು ಹಾಕುತ್ತಿರುವುದನ್ನು ನೋಡಿದ್ದನ್ನು ಹೇಳಿ ಇವರು ದೇವರು ಇದ್ದನೋ ಇಲ್ಲವೋ ಭಕ್ತಿ ಇರುವುದು ನಿಜ ಎನ್ನುತ್ತಾರೆ. ಒಂದು ನಾಯಿಮರಿಯನ್ನು ಸಾಯಬಿಡಲಾರದೆ ಸಾಕಿದವರು ಅದು ಅಶುಚಿ ಎಂಬ ಕಾರಣದಿಂದ ಅದನ್ನು ಮುಟ್ಟದೇ ಇರುತ್ತಾರೆ. ಮಡಿ ಎಂಬ ಭಾವದಿಂದ ಕೆಡದ ಒಬ್ಬನು ಅದನ್ನು ಹತ್ತಿರಕ್ಕೆ ಕರೆದುಕೊಳ್ಳುತ್ತಾನೆ. ನಾಯಿ ಅವರನ್ನು ಬಿಡುತ್ತದೆ, ಇವನಿಗೆ ದತ್ತಾಗುತ್ತದೆ. ಕವಿ ಇದನ್ನು ಹೇಳಿ ಕರುಣೆ ದೊಡ್ಡದೇ ಸರಿ ಆದರೆ ಒಲುಮೆಗೆ ಸಮನಲ್ಲ ಎನ್ನುತ್ತಾರೆ. ತೀರಿ ಹೋದ ಒಬ್ಬ ಸೋದರಿಯನ್ನು ಕುರಿತು ಮನದ ನೋವನ್ನು ಹೊಳೆಹರಿಸುವುದು ಇನ್ನೊಂದು ಕವಿತೆ. ಇಲ್ಲೆಲ್ಲ ಒಂದೊಂದು ಭಾವ ನಯವಾಗಿ ಹೊರಬಿದ್ದು ಒಂದು ನಕ್ಷತ್ರದಂತೆ ನಿಂತು ಮಿಣಗುತ್ತದೆ. ಇವರು ಪ್ರಕೃತಿಯ ಸೊಬಗನ್ನು ವಿವರವಾಗಿ ನೋಡಿ ವಿವರವಾಗಿ ನೆನೆಯುತ್ತಾರೆ. ಜೀವನದಲ್ಲಿ ಬಹುವಿಧದ ಜನವನ್ನು ಬಹುರೀತಿಯ ಸನ್ನಿವೇಶವನ್ನು ನೋಡಿದ್ದಾರೆ. ನಯವಾದ ಭಾವಕ್ಕೆ ತಕ್ಕಂತೆ ಇವರ ಯುಕ್ತಿ ನಯವಾಗಿದೆ. ತೀರಿಹೋದ ಸೋದರಿ ಹೊಳೆಯಲ್ಲಿ ಜತೆಯವರೊಂದಿಗೆ

ಸ್ನಾನಮಾಡಹೋಗಿ ಮುಳುಗಿ ಹೋದಳು. ಆಕೆಯ ಮತ್ತು ಅವಳ ಗೆಳತಿಯರ ಆ ದಿನದ ಸರಸವನ್ನು ಕವಿ "ಹೊನಲೊಳಡಗಿದ ಜವನ ಮೊಗದಲಿ ನಗೆಯ ಹರಡುವ ಸರಸ" ಎಂದಿದ್ದಾರೆ. ಅಲ್ಲಲ್ಲಿ ಬರುವ ಉಪಮೆಗಳ ಸೊಗಸೂ ಹೀಗೆಯೇ. ಇದು ಕೆಲವು ವೇಳೆ ಕಾಣದೆಯೇ ಹೋಗಬಹುದು. ಈ ಸಂಗ್ರಹದಲ್ಲಿರುವ ಒಂದು ಕವಿತೆಯಲ್ಲಿ ದೇಗುಲದ ಮೌನವನ್ನು ಕುರಿತ ಮಾತಿನಲ್ಲಿ ಜೀವ ಈ ಜನ್ಮದಲ್ಲಿ ಬಸಿದು ತಿಳಿಯಿತೇ ಎಂದು ಒಂದು ಪ್ರಶ್ನೆಯಿದೆ. ನಮ್ಮ ಆತ್ಮದ ರಸ ನಿರ್ಮಲವಾಗಿ ದೇವರಿಗೆ ಅನುಭವಯೋಗ್ಯವಾಗಬೇಕು. ಅದರಲ್ಲಿ ಸೇರಿರುವ ಕಶ್ಮಲ ಹೋಗುವುದಕ್ಕಾಗಿ ಅದು ಜನ್ಮದಲ್ಲಿ ಹೊಕ್ಕು ಇಳಿಯುತ್ತಿದೆ. ಈ ಬಾಳು ಒಂದು ಶೋಧಿಸುವ ವಸ್ತ್ರದಂತೆ ಎಷ್ಟೋ ಭಾವ ಇಲ್ಲಿ ಒಂದು ಮಾತಿನಲ್ಲಿ ಅಡಗಿದೆ. ಇಂಥ ಭಾವ ಇಂಥ ಮಾತು ಇವರ ಕೃತಿಗಳನ್ನು ಕಾಣುತ್ತಲೇ ಇರುತ್ತವೆ. ಶ್ರೀಮಾನ್ ನರಸಿಂಹಾಚಾರ್ಯರ ಕಾವ್ಯ ದೃಷ್ಟಿ ಮನೆಯಾದದ್ದು ನೆಲೆಯರಿತದ್ದು. ಇವರ ಜೀವನಾನುಭವ ಕೂರಾದದ್ದು ತೀವ್ರವಾದದ್ದು. ಇವರ ಮಾತು ಮುದ್ದಾದದ್ದು ಬಲವುಳ್ಳದ್ದು. ಈ ಕಾರಣದಿಂದೆಲ್ಲಾ ಇವರ ಕವಿತೆ ಅತ್ಯುತ್ತಮ ರೀತಿಯದು. ಇವರ ಮನೆತನ ಸಂಸ್ಕೃತ ಅಭ್ಯಾಸದಲ್ಲಿ ಪಳಗಿದ್ದು ಎಂದು ಕೇಳಿದ್ದೇನೆ. ಇವರು ಇಂಗ್ಲೀಷಿನಲ್ಲಿ ಸಾಕಾದಷ್ಟು ಪಾಠಮಾಡಿದ್ದಾರೆ, ಕಾವ್ಯ ಓದಿದ್ದಾರೆ. ಇಲ್ಲಿ ಸೇರಿರುವ ಕವಿತೆ ಈ ಎರಡು ಸಂಸ್ಕಾರಗಳೂ ಸಮನ್ವಯವಾಗಿ ಬಂದ ಫಲ. ಇಲ್ಲಿ ಕಾಣುವುದು ಕಾಳಿದಾಸ ವರ್ಡ್ಸ್‌ವರ್ತ್ ಕವಿಗಳು ಜೊತೆಯಾಗಿ ತಿದ್ದಿದ ಕವಿ ಮನೋಧರ್ಮ. ಕನ್ನಡದ ಕವಿತೆ ಈ ಹತ್ತು ವರ್ಷದಲ್ಲಿ ಹಲವು ಮುಖದಲ್ಲಿ ಹಲವು ರೀತಿಯ ಸೊಗಸನ್ನು ತೋರಿದೆ. ಆ ಸೊಗಸುಗಳಲ್ಲಿ ಈ ಕವಿತೆಗಳ ಸೊಗಸೂ ಒಂದು. ಇಲ್ಲಿ ನಮ್ಮ ನಾಡು ನುಡಿಯುತ್ತಿದೆ. ನಮ್ಮ ಸಂಸ್ಕೃತಿ ರೂಪವನ್ನು ಪಡೆಯುತ್ತಿದೆ. ನಮಗೆ ಇಂಥ ಕವಿತೆ ಬಹಳ ಬೇಕಾಗಿದೆ.

ಈ ಕವಿತೆಯನ್ನು ರಚಿಸಿರುವುದಕ್ಕಾಗಿ ನಾನು ಶ್ರೀಮಾನ್ ನರಸಿಂಹಾಚಾರ್ಯರನ್ನು ಅಭಿನಂದಿಸುತ್ತೇನೆ. ಇವರು ಇಂಥ ಕೆಲಸವನ್ನು ಇನ್ನೂ ಹೆಚ್ಚಾಗಿ ಮಾಡುವಂತೆ ನಮ್ಮಲ್ಲಿ ಹಿರಿಯರಾದರವರು ಇವರಿಗೆ ಪ್ರೋತ್ಸಾಹ ಕೊಡುವರೆಂದು ನನಗೆ ನಂಬಿಕೆ ಇದೆ. ನಮ್ಮ ಸಾಹಿತ್ಯದ ಅತ್ಯುತ್ತಮ ಕೃತಿ ಇನ್ನೂ ಕೆಲವನ್ನು ಪ್ರಕಟಿಸುವುದಕ್ಕೆ ನೆರವಾದ ಪೂಜ್ಯ ಮಿತ್ರರ ನೆರವಿನಿಂದಲೇ ಈ ಕೃತಿಯು ಹೊರಕ್ಕೆ ಬರುತ್ತಿದೆ. ನಮ್ಮ ಜನರೂ ಕೂಡ ಹೊಸ ರೀತಿಯ ಕವಿತೆಯನ್ನು ಈಗಾಗಲೇ ತಕ್ಕಮಟ್ಟಿಗೆ ಒಪ್ಪಿಕೊಂಡಿದ್ದಾರೆ. ಅವರು ಈ ಕವಿತೆಯನ್ನೂ ಒಪ್ಪಕೊಳ್ಳುವುದರಲ್ಲಿ ಸಂದೇಹವಿಲ್ಲ. ಶ್ರೀಮಾನ್ ನರಸಿಂಹಾಚಾರ್ಯರ ಕೃತಿಗಳು ಜನರ ಮೆಚ್ಚುಗೆಯನ್ನು ಪಡೆದು ದೇಶದಲ್ಲಿ ಕಾವ್ಯಾಭಿರುಚಿಯನ್ನು ಬೆಳೆಸಲೆಂದೂ, ಈ ಕವಿಯು ಇನ್ನೂ ಅನೇಕ ಕೃತಿಗಳನ್ನು ರಚಿಸಿ ತಾಯಿನುಡಿಯ ಸೇವೆಯಿಂದ ತಾವು ಕೀರ್ತಿ ಪಡೆದು ನಮಗೆ ಆನಂದವನ್ನು ಕೊಡಲೆಂದೂ ನಾನು ಹಾರೈಸುತ್ತೇನೆ.

* * *

'ಪರಮಾತ್ಮ' – ಸರ್ವಧರ್ಮಸಾರ

– *ವಿನೋಬಾ*

ಒಂದು ಧರ್ಮ ಬೇಕೆಂದು ಹೇಳುತ್ತೇವೆ. ಅದರ ಅರ್ಥ ಎಲ್ಲಾ ಧರ್ಮಗಳ ಸಾರ ರೂಪ ಸಿದ್ಧಾಂತ ಒಂದೇ ಇದೆ. ನಾವು ಪರಮೇಶ್ವರನಿಗೆ ನಮ್ಮ ಜೀವನವನ್ನು ಸಮರ್ಪಣೆ ಮಾಡಬೇಕು. ಇದೇ ಎಲ್ಲಾ ಧರ್ಮಗಳ ಸಾರ. ಇದಲ್ಲದೆ ಚಿಕ್ಕ-ಚಿಕ್ಕ ವಿಷಯಗಳು ಧರ್ಮಗಳಲ್ಲಿ ಬರುತ್ತದೆ. ಅವುಗಳನ್ನೇನು ಮಾಡಬೇಕು? ಭಗವಂತ ಗೀತೆಯಲ್ಲಿ ಹೇಳಿದ್ದಾನೆ *ಸರ್ವಧರ್ಮಾನ್ ಪರಿತಜ್ಯ ಮಾಮೇಕಂ ಶರಣಂ ವ್ರಜ.* ಈ ಎಲ್ಲಾ ಚಿಕ್ಕ-ಚಿಕ್ಕ ವಿಷಯಗಳನ್ನು ಬಿಟ್ಟು ನನಗೆ ಶರಣು ಬಾ. ಈ ಚಿಕ್ಕ-ಚಿಕ್ಕ ಧರ್ಮ ಆಯಾ ಸ್ಥಾನಕ್ಕಾಗಿರುತ್ತವೆ, ವ್ಯಾಪಕ ಬುದ್ಧಿಗಾಗಿ ಅವುಗಳನ್ನು ಬಿಡಬೇಕಾಗುತ್ತದೆ. ಎಲ್ಲಾ ಧರ್ಮಗಳಲ್ಲಿ ಇರುವಂಥ ಆಂತರಿಕ ಏಕತೆಯನ್ನು ನಾವು ಹಿಡಿಯಬೇಕು ಮತ್ತು ನಾವು ಎಲ್ಲಾ ಧರ್ಮಗಳನ್ನು ಸೇರಿಸಿ ಅಸತ್ಯ, ಹಿಂಸೆ, ನಾಸ್ತಿಕತೆ ಮತ್ತು ಅಧರ್ಮದ ವಿರುದ್ಧ ಪಡೆಯನ್ನು ನಿಲ್ಲಿಸಬೇಕಿದೆ. ಎಲ್ಲಿಯವರೆಗೆ ಒಬ್ಬನೇ ಪರಮೇಶ್ವರನ ಅನೇಕ ವಿಧಗಳಿರುತ್ತವೆ ಎಂಬುದು ಅನುಭವಕ್ಕೆ ಬರುವುದಿಲ್ಲವೊ ಅಲ್ಲಿಯವರೆಗೆ ಇದು ಸಾಧ್ಯವಿಲ್ಲ. ಇಂದಂತೂ ಒಂದೇ ಪ್ರಾರ್ಥನೆಯಲ್ಲಿ ಹಿಂದೂ, ಮುಸಲ್ಮಾನ, ಇಸಾಯಿ ಇತ್ಯಾದಿಯಾಗಿ ಎಲ್ಲರೂ ಒಂದಾಗಿ ಕುಳಿತುಕೊಳ್ಳಲಾರರು. ಇನ್ಯಾವುದೋ ಸೆಕ್ಯುಲರ್ ಕಾರ್ಯಕ್ರಮದಲ್ಲಿ ಅವರು ಒಂದಾಗಿರಬಲ್ಲರು. ಆದರೆ ಧಾರ್ಮಿಕ ಕಾರ್ಯದಲ್ಲಿ ಒಂದಾಗಲಾರರೆಂಬ ಪರಿಸ್ಥಿತಿ ಇದೆ. ಧರ್ಮದ ವಿಚಾರ ಮಾಡುವವರ ಮೇಲೆ ಇದೊಂದು ದೊಡ್ಡ ಕಲಂಕ. ಇದರ ಅರ್ಥ ನಾವೆಲ್ಲರೂ ನಾಮಮಾತ್ರ ಧಾರ್ಮಿಕರು. ಇದುವರೆಗೆ ನಿಜವಾದ ಧರ್ಮ ಸಂಸ್ಥಾಪನೆ ಆಗಲೂ ಸಾಧ್ಯವಾಗಿಲ್ಲ. ಕೇವಲ ಕೊಂಚ ಮಟ್ಟಿಗೆ ಶ್ರದ್ಧೆ ಉಂಟಾಗಿದೆ.

ನಾನು ಪಾದಯಾತ್ರೆಯ ಸಂದರ್ಭದಲ್ಲಿ ಮೌನ ಪ್ರಾರ್ಥನೆ ಆರಂಭಿಸಿದೆ. ಮೌನ ಪ್ರಾರ್ಥನೆಯಲ್ಲಿ ಎಲ್ಲರೂ ಒಂದಾಗಲು ಸಾಧ್ಯ. ಅಲ್ಲಿ ಯಾವುದೇ ಭೇದವಿರುವುದಿಲ್ಲ. ಮೌನದಲ್ಲಿ ಎಲ್ಲರ ಸಮಹಾರ, ಎಲ್ಲರ ಸಮಾವೇಶ, ಎಲ್ಲರ ಸಮನ್ವಯ ಸಾಧಿತವಾಗುತ್ತದೆ. ಉಳಿದೆಲ್ಲದರ ಬಗ್ಗೆ ಈ ಎಲ್ಲಾ ಮೂರ್ಖಜನರು ಏನೆಲ್ಲಾ ಮಾತನಾಡುತ್ತಾರೆ, ನನ್ನ ಸ್ತುತಿಮಾಡುತ್ತಾರೋ ಅದು ನಿಜವಾದ ಸ್ತುತಿಯಾಗಲಾರದು. ಪರಮೇಶ್ವರ ಅದನ್ನು ಸಹಿಸುತ್ತಾನೆ. ವಿಷ್ಣು ಸಹಸ್ರನಾಮದಲ್ಲಿ ಭಗವಂತನ ಬಗ್ಗೆ ಎರಡು ವಿಲಕ್ಷಣ ಹೆಸರುಗಳಿವೆ. ಶಬ್ದತಿಗಃ – ಶಬ್ದಸಹಃ. ಪರಮಾತ್ಮ ಶಬ್ದದ ಆಚೆಯಿದ್ದಾನೆ. ಆದರೆ ಶಬ್ದವನ್ನು ಸಹಿಸುತ್ತಾನೆ. ಇದರ ಅರ್ಥ ಪರಮಾತ್ಮನ ಅನಂತ ಹೆಸರುಗಳಿರಲು ಸಾಧ್ಯ. ಧರ್ಮದ ಹೆಸರಿನಲ್ಲಿ ಅಭಿಮಾನದ ವಶವಾಗುವುದು; ನಮ್ಮ ಹೆಸರು ಸರಿ ಬೇರೆಯವರದು ತಪ್ಪು ಹೀಗೆ ತಿಳಿಯುವುದು ಧರ್ಮಕ್ಕೆ ವಿರುದ್ಧವಾದ ಮಾತು. ಯಾವರೀತಿ ಎಲ್ಲಾ ನೀರಿನ ಒಂದೇ ಸ್ಥಾನ ಸಮುದ್ರವೋ ಅದೇ ರೀತಿ ಎಲ್ಲಾ ಧರ್ಮಗಳ ಒಂದೇ ಸ್ಥಾನ ಪರಮಾತ್ಮ.

ಹಿಂದೂಸ್ಥಾನದ ಇಡೀ ಜೀವನ ವಿಕಾಸವೇ ಸಮನ್ವಯದ ಪದ್ಧತಿಯಿಂದಾಗಿದೆ. ಈ ದೇಶದ ಮುಖ್ಯಶಕ್ತಿ ಅದೇ. ಇಲ್ಲಿಗೆ ಬಂದಂತಹ ಜನರು ಆಶ್ರಮ ಸ್ಥಾಪಿಸುವುದಕ್ಕೆ ಬಂದಿರಬಹುದು ಅಥವಾ ಆಕ್ರಮಣಕ್ಕಾಗಿ ಬಂದಿರಬಹುದು ಅವುಗಳ ಒಳ್ಳೆಯ ಇಚ್ಛೆಗಳ

ಸಮನ್ವಯ ಮಾಡುವ ಪ್ರಯತ್ನವನ್ನು ಹಿಂದೂಸ್ಥಾನ ಮಾಡಿದೆ. ಅದರ ಪರಿಣಾಮ ಸ್ವರೂಪವಾಗಿ ಹಿಂದೂಸ್ಥಾನ ಉತ್ತೋರೋತ್ತರ ವಿಕಸಿತ ಮತ್ತು ಸಂಪನ್ನವಾಗುತ್ತಾ ಹೋಯಿತು. ಭಾರತದ ಸಂಸ್ಕೃತಿಯ ಯಾವ ದರ್ಶನ ವೇದಗಳಲ್ಲಿ ಆಗುತ್ತದೆಯೋ ಅದರ ವಿಕಸಿತ ದರ್ಶನ ಆಧುನಿಕ ಕಾಲದಲ್ಲಿ ಆಗುತ್ತದೆ. ವೇದದಲ್ಲಿ ಬೀಜರೂಪದಲ್ಲಿ ಇದ್ದದ್ದು ಇಂದು ಅದರ ಫಲವೇ ಭಾರತ ಧರ್ಮ. ವೈದಿಕ ಧರ್ಮದೊಂದಿಗೆ ಹೋಲಿಕೆ ಮಾಡಿದಾಗ ಭಾರತ ಧರ್ಮ ತುಂಬಾ ಪರಿಪುಷ್ಟವಾಗಿದೆ. ಉಪನಿಷತ್ತುಗಳ ಹೋಲಿಕೆಯೊಂದಿಗೂ ಪರಿಪುಷ್ಟವಿದೆ. ಉತ್ತರೋತ್ತರ ಧರ್ಮದ ವಿಕಾಸವಾಗಿದೆ. ಪ್ರಾಚೀನ ಗ್ರಂಥಗಳಲ್ಲಿ ಇಂದೂ ಕೂಡ ಆಶ್ವಾಸನೆ ಸಿಗುತ್ತದೆ. ಏಕೆಂದರೆ ಅವುಗಳಲ್ಲಿ ಮೂಲತತ್ವ ಅಡಗಿವೆ. ಹಳೆಯ ವಿಚಾರದೊಂದಿಗೆ ಹೋಲಿಸಿದಾಗ ಇಂದಿನ ಭಾರತೀಯ ವಿಚಾರ ಹೆಚ್ಚು ವಿಕಸಿತ ಮತ್ತು ಸಮೃದ್ಧವಿದೆ. ಇದೆಲ್ಲವು ಸಮನ್ವಯದ ಕಾರಣದಿಂದಾಗಿದೆ. ಪ್ರತಿಯೊಂದರ ಒಳ್ಳೆಯ ವಿಷಯವನ್ನು ಗ್ರಹಿಸುತ್ತಾ ಕೆಟ್ಟದ್ದನ್ನು ಬಿಡುತ್ತಾ ನಡೆದೆವು. ಈ ಪ್ರಕ್ರಿಯೆ ಇಂದು ಕೂಡ ಜಾರಿಯಲ್ಲಿರಬೇಕು.

ಮುಸಲ್ಮಾನ, ಇಸಾಯಿ, ಪಾರ್ಸಿ, ಯಹೂದಿ, ಬೌದ್ಧ, ಜೈನ ಈ ಎಲ್ಲಾ ಸಂಸ್ಕೃತಿಗಳ ಒಳ್ಳೆಯದನ್ನು ತನ್ನದಾಗಿ ಮಾಡಿಕೊಂಡು ಭಾರತದ ಸಂಸ್ಕೃತಿ ಸಂಪನ್ನವಾಯಿತು ಮತ್ತು ಅದರ ಒಂದು ವಿಕಸಿತ ರೂಪ ಪಡೆಯಿತು. ಭಾರತೀಯ ಇಸ್ಲಾಂನ ರೂಪ ಜಗತ್ತಿನ ಇಸ್ಲಾಂಗಿಂತ ಸ್ವಲ್ಪ ಭಿನ್ನವಾಗಿದೆ. ಭಾರತದ ಇಸಾಯಿ ಧರ್ಮ ಕೂಡ ಜಗತ್ತಿನ ಇಸಾಯಿ ಧರ್ಮದಿಂದ ಎಷ್ಟೋ ಅಂಶಗಳಲ್ಲಿ ಭಿನ್ನವಾಗಿದೆ. ಬ್ರಹ್ಮವಿದ್ಯೆಯ ಆಧಾರ ಮತ್ತು ಜೀವಮಾತ್ರಕ್ಕಾಗಿ ಅಹಿಂಸೆಯ ವಿಚಾರ ಈ ಎರಡೂ ಅವುಗಳಲ್ಲಿ ದಾಖಲಾಗಿವೆ. ಹೀಗೆ ಸಮನ್ವಯದ ಪ್ರಕ್ರಿಯೆ ಹಿಂದೂಸ್ಥಾನದಲ್ಲಿ ಏಕಪ್ರಕಾರವಾಗಿ ಜಾರಿಯಲ್ಲಿತ್ತು. ಪ್ರತಿಯೊಬ್ಬರೂ ತಮ್ಮ-ತಮ್ಮ ಧರ್ಮದಂತೆ ನಡೆಯಬೇಕು ಮತ್ತು ನಡೆಯುವುದಕ್ಕೆ ಅವಕಾಶಕೊಬೇಕೆಂದು ಗೀತೆ ಸ್ಪಷ್ಟವಾಗಿ ಹೇಳಿದೆ. ಈ ಮಾತು ಕುರಾನ್‌ದಲ್ಲಿಯೂ ದೊರೆಯುತ್ತದೆ. ಪ್ರತಿಯೊಂದು ಧರ್ಮಕ್ಕಾಗಿ ದೇವರು ದೇವದೂತನನ್ನು ಕಳುಹಿಸಿದ್ದಾನೆ ಎಂದು ಕುರಾನ್ ಹೇಳುತ್ತದೆ. ಇದುವರೆಗೆ ಎಷ್ಟೊಂದು ದೇವದೂತರು ಬಂದಿದ್ದಾರೋ ಅವರೆಲ್ಲರ ಜಾತಿ ಒಂದು. ಪ್ರತಿಯೊಂದು ಧರ್ಮದಲ್ಲಿ ಎಷ್ಟೊಂದು ಸಂತರು ಬಂದರೋ ಅವರೆಲ್ಲರ ಹೃದಯ ಒಂದು. ಪರಸ್ಪರರಲ್ಲಿ ಕಂಡು ಬರುವ ಭೇದ ಬೇರೆ ಜನರಿಂದ ಹುಟ್ಟುಹಾಕಲಾಗಿದೆಯೇ ಹೊರತು ಸಂತರಿಂದಲ್ಲ. ಜೈನರ ಪ್ರಕಾರ ಪರಿಪೂರ್ಣ ವಿಚಾರ ನಾವು ಮಾತನಾಡುವ ಶಬ್ದಗಳಲ್ಲಿ ಬರುವುದಿಲ್ಲ. ಒಂದೊಂದು ಪಂಥದಲ್ಲಿ ಸತ್ಯದ ಒಂದು ದಿಕ್ಕು ಕಂಡುಬರುತ್ತದೆ. ಒಂದೇ ದಿಕ್ಕನ್ನು ನೋಡುವುದರಿಂದ ಪೂರ್ಣಸತ್ಯ ಕೈಗೆಟುಕುವುದಿಲ್ಲ. ಎಲ್ಲಾ ದಿಕ್ಕುಗಳಿಂದ ನೋಡಬೇಕು. ಒಂದು ಇನ್ನೊಂದನ್ನು ವಿರೋಧ ಮಾಡಲಾರದು.

ಆರ್ಯಸಮಾಜಿಗಳು ವೇದಗಳಲ್ಲಿ ಶ್ರದ್ಧೆ ಇಡುತ್ತಾರೆ. *ಏಕಂ ಸತ್ ವಿಪ್ರ ಬಹುದಾ ವದಂತಿ* ಎಂಬುದಾಗಿ ವೇದ ಹೇಳಿದೆ. ಸತ್ಯ ಒಂದು, ಅದರ ಉಪಾಸನೆ ಮಾಡುವವರು ಬೇರೆ-ಬೇರೆ ಹೆಸರುಗಳಿಂದ ಕರೆಯುತ್ತಾರೆ. ಇರುವ ಭಿನ್ನ-ಭಿನ್ನ ಧರ್ಮಗಳು ಬೇರೆ-ಬೇರೆ ಉಪಾಸನೆಗಳಲ್ಲವೇ? ಇಸ್ಲಾಂ ಒಂದು ತರಹದ ಉಪಾಸನೆ, ಕ್ರಿಸ್ತಧರ್ಮ ಎರಡನೇ ತರಹದ ಉಪಾಸನೆ, ಹಿಂದೂಧರ್ಮದಲ್ಲಂತೂ ಉಪಾಸನೆಯ ಅನೇಕ ಭೇದಗಳಿವೆ. ಆದರೂ ಕೂಡ ಸತ್ಯ ಒಂದೇ. ಆದ್ದರಿಂದ ಆ ಉಪಾಸನೆಗಳಲ್ಲಿ

ವಿರೋಧವಿರಕೂಡದೆಂಬ ಆಜ್ಞೆ ವೇದ ಭಗವಾನನದು. ಇಸಾಯಿಗಳ ಧರ್ಮಗ್ರಂಥದಲ್ಲಿ ಈ ಮಾತೇ ಇದೆ. ಏಸು ತನ್ನ ಶಿಷ್ಯರಿಗೆ ಹೀಗೆ ಹೇಳುತ್ತಾರೆ, "ನೀವೇ ನನ್ನ ಶಿಷ್ಯರೆಂದು ತಿಳಿಯಬೇಡಿ ಮತ್ತು ನಿಮ್ಮ ಮನೆಯಲ್ಲಿಯೇ ನಾನು ಇರುತ್ತೇನೆ. ಬೇರೆ ಮನೆಗಳೂ ಇವೆ." ಏಸು ಈ ಪ್ರಕಾರ ತನ್ನ ಶಿಷ್ಯರಿಗೆ ಸರ್ವಧರ್ಮ ಸಮಭಾವ ತಿಳಿಸಿದ್ದಾನೆ.

ಈ ರೀತಿ ಯಾವುದೇ ಒಂದು ಧರ್ಮ ಬೇರೊಂದು ಧರ್ಮಕ್ಕೆ ವಿರೋಧವಿಲ್ಲ. ಎಲ್ಲ ಧರ್ಮಗಳದ್ದು ಯಾವುದಾದರೊಂದಕ್ಕೆ ವಿರೋಧವಿದ್ದರೆ ಅಧರ್ಮವನ್ನು ವಿರೋಧಿಸುವುದಕ್ಕೆ ಎಲ್ಲರೂ ಒಂದಾಗಬೇಕು. ಜಗತ್ತಿನಲ್ಲಿ ನಾಸ್ತಿಕತೆ ಹರಡುತ್ತಿದೆ. ಅದರ ಪ್ರತಿಕಾರವನ್ನು ಯಾರು ಮಾಡುವರು? ಎಲ್ಲ ಧರ್ಮಗಳೂ ಆಸ್ತಿಕ. ಅವು ನಾಸ್ತಿಕತೆಯ ವಿರುದ್ಧ ಹೋರಡಬೇಕಿದೆ. ಅವು ತಮ್ಮ ತಮ್ಮಲ್ಲಿಯೇ ಜಗಳಾಡುತ್ತಿದ್ದರೆ ಅವು ಸ್ವತಃ ಇಲ್ಲದಂತಾಗುವವು ಮತ್ತು ಜಗತ್ತಿಲ್ಲಿ ನಾಸ್ತಿಕವಾದ ಹರಡುವುದು. ಹಿಂದುವೇನು, ಮುಸಲ್ಮಾನನೇನು ಬೇರೊಂದು ಧರ್ಮದವರಾದರೇನು, ಯಾರ ದೃಷ್ಟಿ ಅಂಧಶ್ರದ್ಧೆಯಿಂದ ಸೀಮಿತವಾಗಿದೆಯೋ ಅವರು ತಮ್ಮ ತಮ್ಮ ಗ್ರಂಥಗಳಲ್ಲಿನ ಅಕ್ಷರಗಳ ಉಪಾಸಕರಾಗಿದ್ದಾರೆ.

ಹಿಂದೂ ಧರ್ಮ ಹಳೆಯದಾಗಿದೆ. ಆದ್ದರಿಂದ ಹಿಂದೂಗಳು ಹಳೆಯ ವಿಷಯಕ್ಕೆ ಮಹತ್ವ ಕೊಡುತ್ತಾರೆ ಮತ್ತು ತಮ್ಮ ಉಗಮಸ್ಥಾನವಾದ ವೇದಗ್ರಂಥಗಳಿಗಿಂತಲೂ ಮೊದಲು ಯಾವುದೇ ವಿಷಯ ಹೊರಡಕೂಡದೆಂಬ ಚಿಂತೆಯೇ ಅವರದಾಗಿರುತ್ತದೆ. ಆದ್ದರಿಂದ ವೇದವನ್ನು ಕೇವಲ ಜ್ಞಾನದ ಅರ್ಥದಿಂದಲ್ಲ, ಪುಸ್ತಕದ ಆಕಾರವನ್ನು ಅವರು ಅನಾದಿ ಎಂದು ತಿಳಿಯುತ್ತಾರೆ. ವೇದಗ್ರಂಥ ಸುಮಾರು ಹತ್ತು-ಇಪ್ಪತ್ತು ಸಾವಿರ ವರ್ಷಗಳ ಹಿಂದಿನವುಗಳಾಗಿರಬಹುದು. ಕೆಲವರು ಸೃಷ್ಟಿಯ ಆರಂಭದಿಂದಲೇ ವೇದವಿದೆ ಎಂದು ಹೇಳುತ್ತಾರೆ. ವೇದವೆಂದರೆ ಅವ್ಯಕ್ತ ಶಬ್ದ ಎಂಬರ್ಥದಲ್ಲಿ ಈ ಮಾತನ್ನು ಒಪ್ಪಬಹುದು. ಆದರೆ ಪುಸ್ತಕದ ಬಗ್ಗೆ ಇದನ್ನು ಹೇಗೆ ಒಪ್ಪಲು ಸಾಧ್ಯ.

ಇದೇ ರೀತಿ ಇಸ್ಲಾಂ ಅರ್ವಾಚೀನವಾಗಿರುವುದರಿಂದ ಮುಸಲ್ಮಾನರು ಮಹಮದ್‌ನ ವಚನವನ್ನು 'ಅಂತಿಮ ಮತ್ತು ಸಂಶೋಧಿತ' ಎಂದು ಪ್ರಮಾಣವೆಂದು ತಿಳಿಯಲು ಅಪೇಕ್ಷಿಸುತ್ತಾರೆ. ಆದ್ದರಿಂದ ಅಕ್ಕಿಂತ ಮುಂಚೆ ಬೇರೆ ಯಾವುದೇ ಪೈಗಂಬರ ಬರಕೂಡದೆಂಬ ಚಿಂತೆಯೇ ಮುಖ್ಯವಾಗಿರುತ್ತದೆ. ಆದರೆ ಒಂದು ವೇಳೆ ಮುಂದೆ ಯಾರಾದರೂ ಸುಧಾರಕರು ಬಂದರೆ ಅವರನ್ನೂ ಕೂಡ ಮುಸಲಿ ಅಥವಾ ಸುಧಾರಕರೆಂದು ಏಕೆ ಒಪ್ಪಬಾರದು. ಒಂದು ವೇಳೆ ಅವರು ಪೈಗಂಬರರಾಗಿದ್ದರೆ ಮುಂದೆಯೂ ಕೂಡ ಪೈಗಂಬರರು ಬರುವ ಅಸಂಭವವಿದೆ ಎಂದು ಏಕೆ ತಿಳಿಯಬೇಕು? ಈಶ್ವರನ ಕರ್ತುಂ-ಅಕರ್ತುಂ ಶಕ್ತಿಯ ಮೇಲೆ ನಾವು ನಮ್ಮ ಇಚ್ಛೆಯ ಅಂಕುಶ ಏಕಿಡಬೇಕು?

ಸಾರಾಂಶ ವೇದದ ಮೊದಲು ಈಶ್ವರೀ ವಚನವಿರಲು ಸಾಧ್ಯವಿಲ್ಲ ಮತ್ತು ಮಹಮದ್ ಪೈಗಂಬರನ ನಂತರ ಈಶ್ವರೀ ವಚನ ಯಾವುದೂ ಬರಲಾರದು ಈ ಎರಡರ ಫಲಿತಾರ್ಥ ಒಂದೇ. ಅಂಧಶ್ರದ್ಧೆ ಅಥವಾ ಮೂಢ ಆಗ್ರಹ. ಸರ್ವಧರ್ಮ ಸಮನ್ವಯವನ್ನು ಒಪ್ಪುವಂಥವರು ಈ ದೋಷದಿಂದ ರಕ್ಷಿತರಾಗಬೇಕು. ತತ್ವದ ಯತಾರ್ಥ ದರ್ಶನ ಮಾಡುವವರು ಹಿಂದೂ ಧರ್ಮದ ಸತ್ಯತೆಯ ಆಧಾರ ಪ್ರಾಥಮಿಕತೆಯಾಗಲೀ, ಪ್ರಾಚೀನವಾಗಲೀ ಅಲ್ಲವೆಂಬುದನ್ನು ತಿಳಿದುಕೊಳ್ಳಬೇಕು. ಇದೇ ರೀತಿ ಅಂತಿಮತ್ವ ಇಸ್ಲಾಂ ಧರ್ಮದ ಸತ್ಯತೆಯ ಆಧಾರವಲ್ಲ. ಯಾವುದೇ ಗ್ರಂಥದಿಂದ ಚಿತ್ತಶುದ್ಧಿಗೆ

ಸಹಾಯವಾಗುತ್ತದೆಯೋ, ಚಿತ್ತಕ್ಕೆ ಸಮಾಧಾನವಾಗುತ್ತದೋ ಅಂತಹ ವೇದ ನಮಗೆ ಸಾಕು, ಅಥವಾ ಕುರಾನ್ ಸಾಕು ಎಂದು ಅವಶ್ಯಕವಾಗಿ ಹೇಳಬಹುದು. ಏಸು ಭಾರತಕ್ಕೆ ಬರುವ ಮೊದಲು ಹಿಂದೂಸ್ಥಾನದಲ್ಲಿ ಅನೇಕ ವಿಧ ದರ್ಶನಗಳು ವಿಕಸಿತವಾಗಿಬಿಟ್ಟಿದ್ದವು. ವೇದ, ಉಪನಿಷತ್ತು, ಭಾಗವತಧರ್ಮ, ಬೌದ್ಧ, ಜೈನವಿಚಾರ ಮತ್ತು ಸಾಂಖ್ಯ-ಸಂಖ್ಯ ಇತ್ಯಾದಿ ಷಡ್ದರ್ಶನ ವಿಶಾಲ ಮತ್ತು ವ್ಯಾಪಕ ದರ್ಶನದ ದೃಷ್ಟಿ ಇಲ್ಲಿ ಇತ್ತು.

ಇಸಾಯಿ ಧರ್ಮ ಇಲ್ಲಿಗೆ ಬಂದ ನಂತರ 'ಸೇಂಟ್ ಥಾಮಸ್'ರಂತಹ ವ್ಯಕ್ತಿಗಳು ಭಾರತದ ಗತಕಾಲದ ದರ್ಶನಗಳ ತತ್ವಜ್ಞಾನದ ಒಳ್ಳೆಯ ಅಂಶಗಳನ್ನು ಹೀರಿದರು. ಮತ್ತು ಇಲ್ಲಿಯ ಹಿಂದೂಧರ್ಮ ಇಸಾಯಿಧರ್ಮದ ರಸವನ್ನು ಹೀರಿತು. ಆದ್ದರಿಂದ ಹಿಂದೂಧರ್ಮದ ರೂಪ ಬದಲಾವಣೆಗೊಂಡಿತು. ಅದೇ ರೀತಿ ಇಸಾಯಿಧರ್ಮದ ರೂಪ ಬದಲಾಯಿತು. ಇದು ಹಿಂದೂಸ್ಥಾನದ ವಿಶೇಷತೆ. ಅದು ಒಳ್ಳೆಯದನ್ನು ಹೀರಿಕೊಳ್ಳುತ್ತದೆ ಮತ್ತು ಅದಕ್ಕೆ ತನ್ನ ರೂಪ ಕೊಡುತ್ತದೆ. ಅನೇಕ ಭಾರತೀಯ ಕ್ರಿಶ್ಚಿಯನ್ನರನ್ನು ನಾನು ನೋಡಿದ್ದೇನೆ. ಅವರು ಮಾಂಸಾಹಾರ ಮಾಡುವುದಿಲ್ಲ. ಅವರ ಮೇಲೆ ಇಲ್ಲಿಯ ದರ್ಶನದ ಪ್ರಭಾವ ಬಿದ್ದಿದೆ. ಆದ್ದರಿಂದ ನಾನು ವೇದ, ಉಪನಿಷತ್ತು, ಇಲ್ಲಿಯ ಇಸಾಯಿಗಳ ಓಲ್ಡ್ ಟೆಸ್ಟಮೆಂಟ್ ಎಂದು ಹೇಳುತ್ತೇನೆ.

ನಿಜವಾದ ದಾರಿ, ಅದು ಏಸುವಿನಿಂದ ರಚಿತವಾಗಿದ್ದಿರಬಹುದು ಅಥವಾ ಋಷಿಗಳಿಂದ ಅದು ಒಂದೇ. ಸತ್ಪುರುಷರ ಮೂಲಕ ರಚಿತವಾದ ದಾರಿ ಒಂದೇ ಎಂಬುದಾಗಿ ವೇದ ಹೇಳುತ್ತದೆ. ಭೇದ ಸಂಕುಚಿತ ವೃತ್ತಿಯ ಕಾರಣದಿಂದ ಹುಟ್ಟುತ್ತದೆ. ಜಗತ್ತಿನ ಸತ್ಪುರುಷರು ಒಂದೇ ಧರ್ಮದ ದಾರಿ ರಚಿಸಿದ್ದಾರೆ. ಭೇದಗಳು ಪರಿಸ್ಥಿತಿಯ ಕಾರಣದಿಂದ ಕಾಣುತ್ತವೆ. ಅವೆಲ್ಲವೂ ಧರ್ಮದ ಭೇದವಲ್ಲ. ಆಚರಣೆಯ ಭೇದಗಳು. ಕೆಲವರು ಏಸುವನ್ನು ಒಪ್ಪುತ್ತಾರಾದರೆ ಇನ್ನು ಕೆಲವರು ವೇದವನ್ನು. ದಾರಿ ಒಂದೇ ಆಗಿದೆ. ಆರಂಭದಲ್ಲಿ ಶಬ್ದವಿತ್ತು ಎಂಬುದಾಗಿ ಬೈಬಲ್‌ನಲ್ಲಿ ಹೇಳಲಾಗಿದೆ. ಸೃಷ್ಟಿ ಶಬ್ದ-ಪ್ರಸವ ಇದೆ. ಸನಾತನಿಗಳು ಕೂಡ ವೇದ ಸೃಷ್ಟಿಯ ಆರಂಭದ್ದು. ಅವುಗಳ ನಂತರ ಸೃಷ್ಟಿ ಆಯಿತು ಎಂದು ತಿಳಿಯುತ್ತಾರೆ. ವೇದವೆಂದರೆ ಜ್ಞಾನ ಅಥವಾ ಅವ್ಯಕ್ತ ಶಬ್ದ. ಈ ಅರ್ಥದಲ್ಲಿ ನಾವು ಈ ಮಾತನ್ನು ಒಪ್ಪಬಹುದಾಗಿದೆ. ಓಂ ಸಮ್ಮತಿ ದರ್ಶಕ. ಸಮ್ಮತಿ ಕೊಡುವುದರಿಂದ ಸಮೃದ್ಧಿಯಾಗುತ್ತದೆ. ಆದ್ದರಿಂದ ಸಮೃದ್ಧಿ ಬಯಸುವವರು ಸಮ್ಮತಿ ಕೊಡಲಿ. ಸಮ್ಮತಿ ಕೊಡುವುದರಿಂದ ಕೆಲಸ ಶುರುವಾಗುತ್ತದೆ. ಇಲ್ಲವಾದರೆ ಮುಗಿಯುವುದೇ ಇಲ್ಲ.

ಏಸು ಕೂಡ ಅನುಜ್ಞ (ಸಮ್ಮತಿ) ಬಗ್ಗೆ ಹೀಗೆಯೇ ಹೇಳಿದ್ದಾನೆ. ಯಾರು ನಿಮ್ಮ ವಿರೋಧಿಯೋ ಅವನೊಂದಿಗೆ ತಕ್ಷಣವೇ ಸಮ್ಮತಿಯಾಗಿ. (ಅಗ್ರೀವಿತ್ ದೈ ಅಡ್ವರ್ಸರಿ ಕ್ವಿಕ್‌ಲಿ) 'ಇಂದಿನ ರೊಟ್ಟಿಯನ್ನು ದೇವರು ಇಂದು ನಮಗೆ ಕೊಡಲಿ. ನಾಳೆಯ ರೊಟ್ಟಿಯ ಚಿಂತೆ ನಾವು ಮಾಡದಿರೋಣ' ಎಂದು ಏಸು ಹೇಳಿದ್ದ. ಊಟವನ್ನು ಅವನು ಪಾಪವೆಂದು ತಿಳಿದ ಮತ್ತು ಇಂದಿನ ಪಾಪ ಇಂದಿಗೆ ಸಾಕು ಎಂದು ಅಂದ. ವೇದ ಕೂಡ ಈ ಮಾತನ್ನೇ ಹೇಳಿದೆ- ***ಅಧ್ಯಂಧ್ಯ ಶ್ವಃ ಶ್ವಃ***- ಅಂದರೆ ಇಂದಿನದು ಇಂದು ನಾಳೆಯದು ನಾಳೆಗೆ. ಆದ್ದರಿಂದ ನಾಳೆಯ ಚಿಂತೆಯನ್ನು ಬಿಟ್ಟು ಇಂದಿನ ಚಿಂತೆಯನ್ನೇ ಮಾಡಬೇಕು.

* * *

ಜನಪದ ವ್ಯಕ್ತಿ

ಆಗಸ್ ಇಂದ್ರ ಉದಯಾನ

ಭಾರತದ ನೆರೆ ದೇಶಗಳಲ್ಲಿ ಒಂದಾದ ಇಂಡೋನೇಷಿಯಾ ವಿವಿಧ ಧರ್ಮಗಳ ದೇಶ. ಈ ದೇಶದಲ್ಲಿ ಕಳೆದ ಹತ್ತು ವರ್ಷಗಳಿಂದ ಗಾಂಧೀ ಮೌಲ್ಯಗಳ ಪ್ರಚಾರಕ್ಕಾಗಿ ಕೆಲಸಮಾಡುತ್ತಿದ್ದಾರೆ ಆಗಸ್ ಇಂದ್ರ ಉದಯಾನ. ತಮ್ಮ ಈ ಕೆಲಸಕ್ಕಾಗಿ ಅವರು ಆಯ್ಕೆ ಮಾಡಿಕೊಂಡಿರುವ ಮಾಧ್ಯಮ ಗಾಂಧೀ ಪ್ರತಿಪಾದಿಸಿದ್ದ ಆಶ್ರಮ ಜೀವನ ಪದ್ಧತಿ. ಈ ಕೆಲಸಕ್ಕಾಗಿ ಅವರು ಒಂದಲ್ಲ ನಾಲ್ಕು ಆಶ್ರಮಗಳನ್ನು ಸ್ಥಾಪಿಸಿದ್ದಾರೆ. ಈ ಆಶ್ರಮಗಳು ಅಹಿಂಸೆ, ಸತ್ಯ, ಮಾನವಧರ್ಮಗಳ ತತ್ವಗಳ ಮೇಲೆ ನಿಂತಿದೆ. ಇಂದ್ರ ಉದಯಾನ ಗಾಂಧೀ ವಿಚಾರದಿಂದ ಎಷ್ಟೊಂದು ಪ್ರಭಾವಿತರಾಗಿದ್ದಾರೆಂದರೆ ಅವರು ಗಾಂಧೀ ಸಾಹಿತ್ಯವನ್ನು ಇಂಡೋನೇಷಿಯನ್ ಭಾಷೆಗೆ ಅನುವಾದಿಸಿದ್ದಾರೆ. ಬಾಲಿಯಲ್ಲಿರುವ ಅವರ ಆಶ್ರಮದ ಮುಖ್ಯ ಉದ್ದೇಶ ವಿವಿಧ ದರ್ಮಗಳಲ್ಲಿ ತಾಳಿ ಬಾಳುವಂತಹ ಸದ್ಭಾವನೆಯನ್ನು ಮೂಡಿಸುವುದು ಮತ್ತು ಶಾಂತಿ ಹಾಗು ನೆಮ್ಮದಿಯನ್ನು ತಂದುಕೊಡುವುದಾಗಿದೆ. ಆಗಸ್ ಇಂದ್ರರವರ ಕಾರ್ಯವೈಖರಿ ವಿಶಿಷ್ಟ ರೀತಿಯದ್ದಾಗಿದೆ. ಗಾಂಧೀ ಸಿದ್ಧಾಂತಗಳನ್ನು ಪ್ರಸ್ತುತ ಸಾಮಾಜಿಕ ಪರಿಸ್ಥಿತಿಗೆ ಹೇಗೆ ಅನ್ವಯಿಸಬೇಕು ಎಂಬುದಾಗಿರುತ್ತದೆ.

ಅದಕ್ಕಾಗಿ ಅವರು ವಿಚಾರಗೋಷ್ಠಿಗಳನ್ನು, ಕಾರ್ಯಾಗಾರಗಳನ್ನು, ಸ್ಪರ್ಧೆಗಳನ್ನು ಮತ್ತು ಶಿಬಿರಗಳನ್ನು ಆಯೋಜಿಸುತ್ತಾರೆ. ಈ ನಾಲ್ಕು ಆಶ್ರಮಗಳಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಸತಿ ಸೌಕರ್ಯ ಮತ್ತು ಅವರ ಸರ್ವಾಂಗೀಣ ಅಭಿವೃದ್ಧಿಗೆ ಅಗತ್ಯವಾದ ಎಲ್ಲ ನೆರವನ್ನೂ ಕೊಡಲಾಗುತ್ತದೆ. ಈ ಎಲ್ಲಾ ಆಶ್ರಮಗಳು ವಿದ್ಯಾರ್ಥಿಗಳ ಮೇಲ್ವಿಚಾರಣೆಯಲ್ಲಿಯೇ ನಡೆಯುತ್ತಿರುವುದು ವಿಶೇಷ ಸಂಗತಿಯಾಗಿದೆ. ತನ್ಮೂಲಕ ಗಾಂಧೀ ವಿಚಾರದ ಹೊಸನಾಯಕತ್ವ ಹೊರಹೊಮ್ಮುವಂತೆ ಮಾಡುವುದು ಆಗಸ್ ಇಂದ್ರಯಾನರವರ ದೂರದೃಷ್ಟಿಯಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಆಶ್ರಮದ ಕಾರ್ಯಕ್ರಮಗಳಲ್ಲಿ ನಿಯಮಿತವಾಗಿ ಭಾಗವಹಿಸಬೇಕಾಗುತ್ತದೆ. ಈ ನಾಲ್ಕೂ ಆಶ್ರಮಗಳಲ್ಲಿಯ ಜೀವನ ಪದ್ಧತಿ ಗಾಂಧೀಯವರ ಆಶ್ರಮದ ಪದ್ಧತಿಯಂತೆ ಇದೆ. ಎರಡು ಹೊತ್ತಿನ ಪ್ರಾರ್ಥನೆ, ಸ್ವಚ್ಛತೆ, ಶ್ರಮದಾನ, ಇತ್ಯಾದಿ. ಸ್ಥಳೀಯ ಜನರು ಈ ಆಶ್ರಮಗಳ ಸೇವೆಯಿಂದ ಮತ್ತು ಅವುಗಳ ಬೋಧನೆಯಿಂದ ಬಹಳಷ್ಟು ಪ್ರಯೋಜನ ಪಡೆದಿದ್ದಾರೆ. ಆ ಜನರಲ್ಲಿ ಭ್ರಾತೃತ್ವದ ಭಾವನೆ ವಿಕಸಿತಗೊಂಡಿದೆ. ಅಲ್ಲದೆ, ಅವರಲ್ಲಿ ಸ್ವಾವಲಂಬನೆ ಮತ್ತು ಪರಿಸರ ಕಾಳಜಿ ಜಾಗೃತಗೊಂಡಿವೆ. ಇಂದ್ರ ಉದಯಾನ ಸ್ವತಃ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿ ಪ್ರಜಾಪ್ರಭುತ್ವ, ಧಾರ್ಮಿಕ ಐಕ್ಯತೆ, ಶಿಕ್ಷಣ ಮತ್ತು ಗಾಂಧೀ ಮೌಲ್ಯಗಳನ್ನು ಉತ್ತೇಜಿಸುವಲ್ಲಿ ಯುವಕರ ಪಾತ್ರ ಇತ್ಯಾದಿ ವಿಷಯಗಳ ಬಗ್ಗೆ ತಮ್ಮ ಕಾರ್ಯಾನುಭವಪೂರ್ಣ ವಿಚಾರಗಳನ್ನು ಮಂಡಿಸುತ್ತಾಬಂದಿದ್ದಾರೆ.

ಅವರು ಭಾರತದಲ್ಲಿಯ ಅನೇಕ ಗಾಂಧೀಪ್ರಣೀತ ಸಂಸ್ಥೆಗಳೊಂದಿಗೆ ಸಂಪರ್ಕವಿರಿಸಿಕೊಂಡಿದ್ದಾರೆ. ದೇಶವಿದೇಶಗಳ ವಿದ್ಯಾರ್ಥಿಗಳು ಉದಯಾನರವರ ಆಶ್ರಮಗಳಿಗೆ ಭೇಟಿಕೊಟ್ಟು ಸರ್ವೋದಯದ ಸಿದ್ಧಾಂತದ ಪರಿಚಯ ಮಾಡಿಕೊಳ್ಳುತ್ತಿದ್ದಾರೆ. ಉದಯಾನರವರು ಬೇರೆ ಬೇರೆ ದೇಶಗಳಲ್ಲಿನ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಶ್ರೀಲಂಕೆಯಲ್ಲಿ ಯಾವ ರೀತಿ ಎ.ಟಿ.ಆರ್ಯರತ್ನೆ ಗಾಂಧೀವಿಚಾರದ ರಚನಾತ್ಮಕ ಕಾರ್ಯಗಳನ್ನು ಮಾಡುತ್ತಿದ್ದಾರೋ ಅದೇ ರೀತಿ ಇಂದ್ರ ಉದಯಾನ ಇಂಡೋನೇಷಿಯಾದಲ್ಲಿ ಮಾಡುತ್ತಿದ್ದಾರೆ. ಭಾರತದ ಯಾವುದೇ ಸಂಸ್ಥೆಯವರು ಅವರನ್ನು ಆಹ್ವಾನಿಸಿದರೆ ಅವರು ಸಂತೋಷವಾಗಿ ಬರುತ್ತಾರೆ. ಅವರ ಕಾರ್ಯಾನುಭವಗಳನ್ನು ಹಂಚಿಕೊಳ್ಳುತ್ತಾರೆ. ಆಸಕ್ತರು ಬಾಲಿಯಲ್ಲಿರುವ ಅವರ ಆಶ್ರಮಗಳಿಗೆ ಭೇಟಿಕೊಡಬಹುದು. ಇವರ ಬಗ್ಗೆ ಮತ್ತು ಇವರ ಕಾರ್ಯಕ್ರಮಗಳ ಬಗ್ಗೆ ಆಸಕ್ತಿ ಇದ್ದು ಹೆಚ್ಚಿನ ಮಾಹಿತಿ ಪಡೆಯಲಿಚ್ಛಿಸುವವರು ಕರ್ನಾಟಕ ಸರ್ವೋದಯ ಮಂಡಲ, ಬೆಂಗಳೂರು ಇವರನ್ನು ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ - ೦೮೨೩೬ ೩೧೬೩೪೪ ಮತ್ತು ೦೮೨೩೬ ೨೯೭೮೫೪ ಮತ್ತು ೯೧೪೧೭೦೦೮೧೨.

* * *

"ಐವತ್ತು ವರ್ಷಗಳ ನಂತರ ಊಟದ ಪದ್ಧತಿ ಬದಲಿಸಬೇಕು. ನೂರು ವರ್ಷಗಳ ನಂತರ ಮನೆ ಕೆಡವಬೇಕು. ಐನೂರು ವರ್ಷಗಳ ನಂತರ ಮಂದಿರ-ಮಸೀದಿ ಬೀಳಿಸಿಬಿಡಬೇಕು. ಇಷ್ಟೇ ಅಲ್ಲ ಸಾವಿರ ವರ್ಷಗಳ ನಂತರ ಧರ್ಮಕ್ಕೆ ಬೆಂಕಿ ಹಚ್ಚಬೇಕು. ಯಾಕೆಂದರೆ ಐವತ್ತು ವರ್ಷಗಳ ನಂತರ ಊಟದ ಏಕತಾನತೆ ರುಚಿಯನ್ನು ಹದಗೆಡಿಸಿರುತ್ತದೆ. ನೂರು ವರ್ಷಗಳ ನಂತರ ಮನೆ ವಾಸ್ತು ಹಳೆಯದಾಗಿ ತೋರುತ್ತದೆ. ಐನೂರು ವರ್ಷಗಳಲ್ಲಿ ಮಂದಿರ-ಮಸೀದಿ ಸಹ ಆಯುಷ್ಯ ತೀರಿದಂತೆ ಕಾಣುತ್ತದೆ. ಮೂಲ ಉದ್ದೇಶ ಮರೆತು ಬಿಡುತ್ತವೆ. ಸಾವಿರ ವರ್ಷಗಳಲ್ಲಿ ಧರ್ಮದಲ್ಲಿಯೂ ರೂಢಿಗತ ಕಂದಾಚಾರಗಳಿಂದ ಕೊಳೆ, ಗಲೀಜು ಸೇರಿಕೊಂಡು ಬಿಡುತ್ತದೆ. ಇಂದು ಪ್ರತಿಯೊಂದು ಧರ್ಮದ ಸ್ಥಿತಿ ಹೀಗೇ ಆಗಿರುವುದರಿಂದ ಅವು ಸಮಸ್ಯೆಗಳಿಗೆ ಸಮಾಧಾನ ನೀಡದಂತಾಗಿವೆ. ಅದರ ಬದಲು ಅವೇ ಸಮಸ್ಯೆಗಳಾಗಿಬಿಟ್ಟಿವೆ."

- ಮುನಿಶ್ರೀ ತರುಣಸಾಗರ

ಅರ್ಧ ವಿಜ್ಞಾನದ ವಿಷಯದಲ್ಲಿ ಜಾಗರೂಕತೆ ಅವಶ್ಯಕ

– *ಡಿ.ವಿ.ಜಿ*

ಪಾಶ್ಚಾತ್ಯ ಲೋಕದ ವಿಜ್ಞಾನಶಾಸ್ತ್ರಗಳು ಅದ್ಭುತವಾದ ಜಯಗಳನ್ನು ಸಂಪಾದಿಸಿಕೊಂಡಿವೆ. ಎಷ್ಟೋ ಪ್ರಕೃತಿ ರಹಸ್ಯಗಳನ್ನು ಕೈವಶಮಾಡಿಕೊಂಡಿವೆ. ಆದರೆ ಜೀವನದ ಮೂಲ ಪ್ರಶ್ನೆಗಳಿಗೆ ಉತ್ತರಕೊಡುವ ಚಿಹ್ನೆ ವಿಜ್ಞಾನ ದಿಗಂತದಲ್ಲಿ ಒಂದಷ್ಟೂ ತೋರಿ ಬರುತ್ತಿಲ್ಲ. ಮನುಷ್ಯನ ಜೀವನದ ಪ್ರಶ್ನೆಗಳು ಅಂತರಂಗದವು. ವಿಜ್ಞಾನದ ಸಾಹಸಗಳು ಬಹಿರಂಗದವು. ಎರಡೂ ಎಂದಿಗಾದರೂ ಒಂದು ಕಡೆ ಕಲೆಯುವುದು ಸಂಭವವೆಂದು ತೋರುತ್ತಿಲ್ಲ.

ಪ್ರತಿಯೊಂದು ವಿಜ್ಞಾನಶಾಸ್ತ್ರವೂ ಅರ್ಧಮರ್ಧದಲ್ಲಿ ನಿಂತಿದೆ. ಆ ಶಾಸ್ತ್ರಗಳಲೆಲ್ಲಾ ಚಕ್ರವರ್ತಿಪ್ರಾಯವಾದ ಭೌತವಿಜ್ಞಾನದಲ್ಲಿ ಪರಮಾಣುವಿನ ರಚನೆ, ಅದರ ಅಂತಃಶಕ್ತಿ ಮೊದಲಾದ ವಿಚಾರಗಳಲ್ಲಿ ಇನ್ನೂ ತಕರಾರುಗಳು ಎಷ್ಟೋ ಉಳಿದಿವೆ. ಜೈವವಿಜ್ಞಾನವಂತೂ ಇನ್ನೂ ವಸ್ತುವಿನ ಹೊರ ಅಂಚಿನಲ್ಲೇ ಸುತ್ತಾಡುತ್ತಿದೆ. ಮನಃಶಾಸ್ತ್ರವು ತೀರಾ ಪರದಾಟದಲ್ಲಿ ಕಟ್ಟಕಡೆಯ ಸಿದ್ಧಾಂತವು ಎಲ್ಲೂ ಹತ್ತಿರವಿರುವಂತೆ ಇಲ್ಲ.

ಜಡವಸ್ತುವಿನಿಂದ ಮಣ್ಣು, ನೀರು, ಗಾಳಿಗಳಿಂದ – ಜೀವತಯಾರಾದದ್ದು ಹೇಗೆ? ಪ್ರಾಣದಿಂದ ಮನಸ್ಸು ಹುಟ್ಟಿದ್ದು ಹೇಗೆ? ಈ ಎರಡೂ ಮೂಲಭೂತ ಪ್ರಶ್ನೆಗಳು. ೧. ಪ್ರಾಣದ ಉತ್ಪತ್ತಿ ೨. ಮನಸ್ಸಿನ ಉತ್ಪತ್ತಿ ಈ ಎರಡೂ ಇನ್ನೂ ರಹಸ್ಯಗಳಾಗಿಯೇ ಉಳಿದುಕೊಂಡಿವೆ.

ಈ ನಾನಾ ವಿಜ್ಞಾನಗಳ ಪಾಡು ಹೇಗಿದೆಯೆಂದರೆ – ಬಾವಿಯಲ್ಲಿ ಮೇಲ್ತಳದಿಂದ ೬೦ ಅಡಿ ಆಳದಲ್ಲಿ ನೀರಿರುವಾಗ ಅರವತ್ತೇ ಅಡಿಯ ಹಗ್ಗವಿದ್ದರೆ ಅದು ಏನನ್ನು ಮಾಡಬಲ್ಲದು? ಮಡಕೆಯ ಕೆಳತಳವು ನೀರಿನ ಮೇಲ್ತಳವನ್ನು ಸೋಕುತ್ತದೆ. ಆದರೆ ನೀರೊಳಕ್ಕೆ ಮುಳುಗಿ ಮೇಲಕ್ಕೆ ನೀರನ್ನೆತ್ತಿ ತರಲಾರದು. ಅಂಥ ಮೊಟಕಾದ ಸೇದುವ ಹಗ್ಗದಂತೆ ಇವೆ ನಾನಾ ವಿಜ್ಞಾನಗಳು. ಅವು ನಮ್ಮ ಜೀವನದ ಹೊರಮೈಯನ್ನು ಮಾತ್ರ ಅಲ್ಲಲ್ಲಿ ಮುಟ್ಟಬಲ್ಲವು. ವಿದ್ಯಚ್ಛಕ್ತಿ, ವಾಯುವಿಮಾನ, ವೈದ್ಯಕ ಧಾತು–ದ್ರಾವಕಗಳು ಇವೆಲ್ಲಾ ನಮ್ಮ ಜೀವನದ ಹೊರಭಾಗವನ್ನು ಅಷ್ಟಿಷ್ಟು ಸೋಕಿ ಬದಲಾಯಿಸುತ್ತವೆ. ಆದರೆ ಜೀವನದ ಒಳಕ್ಕೆ ಹೋಗಲಾರವು.

ವಿಜ್ಞಾನದ ಸ್ಥಿತಿ ಹೀಗೆ ಇನ್ನೂ ಅಪಕ್ವ, ಅರ್ಧಪಕ್ವವಾಗಿ, ಅವುಗಳ ಸಿದ್ಧಾಂತಗಳು ಇನ್ನೂ ಅಪೂರ್ಣವಾಗಿ ಅಸ್ಪಷ್ಟವಾಗಿ ಇರುವ ಈಗಿನ ಸಂದರ್ಭದಲ್ಲಿ ನಮ್ಮ ದೇಶದ ನವನಾಗರೀಕರೂ ರಾಜಕೀಯನಾಕರೂ ಅರ್ಧಜ್ಞಾನವನ್ನೇ ಸಂಪೂರ್ಣಜ್ಞಾನವೆಂದು ನಂಬಿಕೊಂಡು ನಮ್ಮ ಸಮಾಜದ

ಸಂಪ್ರದಾಯಗಳನ್ನೂ ಜೀವನವಿಧಾನಗಳನ್ನೂ ಬದಲಾಯಿಸಹೊರಟಿರುವುದು ನಮ್ಮ ಕಾಲದ ಅನಾಹುತಗಳಲ್ಲಿ ದೊಡ್ಡದು. ವಿವಾಹ ಮೊದಲಾದ ಅನಾದಿ ಸಿದ್ಧವಾದ ಸಂಸ್ಕಾರಗಳು ಯಾವ ವಿಜ್ಞಾನ ಸೂತ್ರಗಳನ್ನು ಆಧಾರ ಮಾಡಿಕೊಂಡು ನಿಂತಿವೆ – ಎಂಬುದನ್ನು ವಿಚಾರಮಾಡದೆಯೇ ಕಾನೂನು ಬಲದಿಂದ ಬದಲಾಯಿಸಹೊರಡುವುದು ವಿಜ್ಞಾನದ ದಾರಿಯಲ್ಲ. ಅದು ತೀರಾ ಅವಿಜ್ಞಾನ. ವಿವಾಹವೆಂಬ ಸಂಸ್ಕಾರವು ಹತ್ತಾರು ದೇಹಾರೋಗ್ಯ ಸೂತ್ರಗಳನ್ನೂ, ಗೃಹಸಂಪತ್ತಿನ ಸೂತ್ರಗಳನ್ನೂ, ವಂಶಾಭ್ಯುದಯದ ಸೂತ್ರಗಳನ್ನೂ ಅವಲಂಬಿಸಿಕೊಂಡು ಬೆಳೆದು ಬಂದಿದೆ. ಪುರಾತನರು ಸಹಸ್ರಾರು ವರ್ಷಗಳಿಂದ ಆ ಸೂತ್ರ ಸಂಪ್ರದಾಯಗಳಲ್ಲಿ ಗುಣಕಂಡಿದ್ದಾರೆ. ಇಂದಿನವರು "ಪೂರ್ವಿಕರಿಗೆ ವಿಜ್ಞಾನ ತಿಳಿದಿರಲಿಲ್ಲ, ನಾವು ವಿಜ್ಞಾನ ಪಾರಂಗತರು; ಆದ್ದರಿಂದ ನಾವು ಪೂರ್ವ ಸಂಪ್ರದಾಯವನ್ನು ಇಷ್ಟತೋರಿದಂತೆ ಬದಲಾಯಿಸಲು ಅಧಿಕಾರಿಗಳಾಗಿದ್ದೇವೆ ಎಂದು ಭಾವಿಸುವುದು ಬರಿಯ ಅಹಂಭಾವವೇ ಹೊರತು ಎಷ್ಟು ಮಾತ್ರವೂ ವಿಜ್ಞಾನ ಬುದ್ಧಿಯಲ್ಲ. ಬದಲಾವಣೆ ಅನಾವಶ್ಯಕವೆಂದಲ್ಲ. ಬದಲಾವಣೆ ಅವಶ್ಯಕವೇ ಇರಬಹುದು. ಆದರೆ ವಿಚಾರ ಪೂರ್ವಕವಾದದ್ದಾಗಿರಬೇಕು; ನಿಜವಾದ ವಿಜ್ಞಾನ ಶೋಧನೆಯ ಆಧಾರದ ಮೇಲೆ ಮಾಡಿದ್ದಾಗಿರಬೇಕು. ಎಂದರೆ, ಅರ್ಧವಿಜ್ಞಾನವನ್ನು ಪೂರ್ಣಜ್ಞಾನವೆಂದು ಭ್ರಾಂತಿಪಡುವುದು ವಿಜ್ಞಾನದ ದಾರಿಯಲ್ಲ. ಅಜ್ಞಾನದ ದಾರಿ.

ಸಮಾಜ ಸಂಪ್ರದಾಯಗಳನ್ನು ಬದಲಾಯಿಸುವೆವೆಂದು ಕೇವಲ ರಾಜಕೀಯಸ್ಥರು ದುಡುಕಿದಾಗ ಅದಕ್ಕೆ ಎದುರುನಿಂತು ಪ್ರತಿಭಟಿಸುವುದು ಸಂಪ್ರದಾಯಸ್ಥರಿಗೆ ಹೇಗೋ ನಿಜವಾದ ವೈಜ್ಞಾನಿಕರಿಗೂ ಹಾಗೆಯೇ ಅವಶ್ಯ ಕರ್ತವ್ಯವಾಗಿರುತ್ತದೆ.

* * *

ಪ್ರಪಂಚದಲ್ಲಿ ಎಷ್ಟೋ ದೊಡ್ಡ-ದೊಡ್ಡ ನಗರಗಳಾದವು. ರೋಮ್ ಬಂತು, ಹೋಯಿತು; ಅಥೆನ್ಸ್ ಬಂತು, ಹೋಯಿತು; ವಿಜಯನಗರ ಬಂತು, ಹೋಯಿತು. ಈ ನಗರಗಳ ಗುರುತೇ ಇಲ್ಲ. ಆದರೆ ಮನುಷ್ಯರ ಸ್ಮೃತಿಯಲ್ಲಿ ಗೋಕುಲ ಶಾಶ್ವತವಾಗಿದೆ. ಏಕೆಂದರೆ ಅದೊಂದು ಆದರ್ಶ ಗ್ರಾಮವಾಗಿತ್ತು. ಮಕ್ಕಳಿಗೆ ತಿನ್ನಲು ಬೆಣ್ಣೆ ಸಿಗುತ್ತಿತ್ತು!

– ವಿನೋಬಾ

ಜನಪದ ಸೇವಾ ಟ್ರಸ್ಟ್ ಸಮಾಚಾರ

ಜನಪದ ಸೇವಾ ಟ್ರಸ್ಟ್‌ನ ವಾರ್ಷಿಕ ಸರ್ವ ಸದಸ್ಯರ ಸಭೆ ನಡೆಯಿತು. ಸಭೆಯು ಟ್ರಸ್ಟಿನ ೨೦೧೦-೧೧ನೇ ಸಾಲಿನ ಆಡಿಟ್ ಆದ ಲೆಕ್ಕ-ಪತ್ರಗಳನ್ನು ಅಂಗೀಕರಿಸಿತು. ಮುಂದಿನ ಎರಡು ವರ್ಷಗಳ ಅವಧಿಗೆ ಹಾಲಿ ಇರುವ ಸದಸ್ಯರೊಂದಿಗೆ ಇನ್ನೂ ಕೆಲ ಹೊಸ ಸದಸ್ಯರನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಆ ಹೊಸ ಸದಸ್ಯರು ಶ್ರೀ ಹೆಚ್.ಎನ್.ರಮೇಶ್, ಶ್ರೀ ಕೆ.ಶ್ರೀನಿವಾಸ್, ಶ್ರೀ ಅಲೋಕ್, ಶ್ರೀ ಜನಾರ್ಧನ್ ಎಂಬುವವರು. ಕಳೆದ ಐವತ್ತು ವರ್ಷಗಳಿಂದ ಟ್ರಸ್ಟಿನ ಸಂಸ್ಥಾಪಕ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದ ಸುರೇಂದ್ರ ಕೌಲಗಿಯವರು ನಿವೃತ್ತಿ ಹೊಂದಿದರು. ಅಧ್ಯಕ್ಷ ಸ್ಥಾನಕ್ಕೆ ಡಾ॥ಮನೋಹರ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಿಕೊಳ್ಳಲಾಯಿತು. ಕಾರ್ಯದರ್ಶಿಯಾಗಿ ಸಂತೋಷ್ ಕೌಲಗಿ ಮತ್ತು ಖಜಾಂಚಿಯಾಗಿ ಸಂತೋಷ್ ಶೀಲವಂತ ಆಯ್ಕೆಗೊಂಡರು.

ಟ್ರಸ್ಟ್ ನಡೆಸುತ್ತಿರುವ ಖಾದಿ ಕಾರ್ಯಕ್ರಮವನ್ನು ಬಲಪಡಿಸಿ ಅದನ್ನು ವಿಸ್ತರಿಸಬೇಕೆಂದು ತೀರ್ಮಾನಿಸಲಾಯಿತು.

ಮಂಡ್ಯ ಜಿಲ್ಲೆಯ ನಬಾರ್ಡ್ ಸಂಸ್ಥೆಯ ಕೆಲ ಸದಸ್ಯರು ಭೇಟಿಕೊಟ್ಟರು.

ಮೈಸೂರು ವಿಜಯನಗರ ಬಡಾವಣೆಯಲ್ಲಿರುವ ಸರ್ಕಾರಿ ಕಾಲೇಜಿನ ವಿದ್ಯಾರ್ಥಿನಿಯರು ತಮ್ಮ ಅಧ್ಯಾಪಕರೊಂದಿಗೆ ಭೇಟಿಕೊಟ್ಟರು.

ದತ್ತು ವಿಭಾಗದ ಎಲ್ಲ ಮಕ್ಕಳಿಗೆ ಪೋಲಿಯೋ ಹನಿ ಹಾಕಿಸಲಾಯಿತು. ಮಕ್ಕಳೆಲ್ಲ ಆರೋಗ್ಯವಾಗಿದ್ದಾರೆ. ಮಕ್ಕಳ ಆರೈಕೆಗಾಗಿ ಅಗತ್ಯವಿರುವ ಕೆಲವು ಸೌಕರ್ಯಗಳನ್ನು ಅಳವಡಿಸಿಕೊಳ್ಳಲಾಯಿತು. ಮಕ್ಕಳ ಆರೈಕೆಯ ಉಸ್ತುವಾರಿಗಾಗಿ ತರಬೇತಿ ಪಡೆದ ಓರ್ವ ಕಾರ್ಯಕರ್ತೆಯನ್ನು ಗೊತ್ತು ಮಾಡಲಾಯಿತು.

೨೦೧೨ ಫೆಬ್ರವರಿ ಮಾಹೆಯ ದಾನಿಗಳು

ಶ್ರೀ ಹರ್ಷವರ್ಧನ್, ಶ್ರೀಮತಿ ಚೊಕ್ಕೂಬಾಯಿ,
ಶ್ರೀಮತಿ ಗೌರಮ್ಮ ವಿದ್ಯಾಶಂಕರ - ಬೆಂಗಳೂರು,
ಅಭಿನವ ಭಾರತಿ ಆಂಗ್ಲ ಮಾಧ್ಯಮ ಪ್ರೌಢಶಾಲೆ - ಮಂಡ್ಯ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ.. ೧೦೦

- ಸುರೇಂದ್ರ ಕೌಲಗಿ



ಟ್ರಸ್ಟ್ ಸ್ಥಾಪನೆಯ ಐವತ್ತನೇ ವರ್ಷದ ಸಂದರ್ಭದಲ್ಲಿ ಮತ್ತು ಜನಪದ ನಿಲಯದ ಅಂತರಂಗದಲ್ಲಿಯ ೧೦೦ನೇ ಕಂತಿನ ಸಂದರ್ಭದಲ್ಲಿ ನೆನಪಾಗುತ್ತಿರುವ ವ್ಯಕ್ತಿ ಆ ಸಮಯದ ಟ್ರಸ್ಟಿನ ಆಡೀಟರ್ ಆಗಿದ್ದ ಎಂ.ಎಸ್.ನಾರಾಯಣಸ್ವಾಮಿ. ಯಾವುದೇ ಒಂದು ಸಂಸ್ಥೆಗೆ ಲೆಕ್ಕಪತ್ರಗಳ ವ್ಯವಸ್ಥಿತ ರಕ್ಷಣೆ ಬಹು ಮುಖ್ಯವಾದುದು. ಆಧುನಿಕ ತಂತ್ರಜ್ಞಾನ ಇಲ್ಲದ ಕಾಲದಲ್ಲಿ ತಂತ್ರಜ್ಞಾನದ ಉಪಕರಣದಷ್ಟೆ ದಕ್ಷತೆಯಿಂದ ಟ್ರಸ್ಟಿನ ಲೆಕ್ಕಪತ್ರಗಳನ್ನು ಆಡಿಟ್ ಮಾಡಿ ಮಾರ್ಗದರ್ಶನ ಮಾಡಿದ ವ್ಯಕ್ತಿ ಎಂ.ಎಸ್.ನಾರಾಯಣಸ್ವಾಮಿರಾವ್.ಅವರು ಚಾರ್ಟೆಡ್ ಅಕೌಂಟೆಂಟ್. ಟ್ರಸ್ಟಿನ ಲೆಕ್ಕಪತ್ರಗಳನ್ನು ನಲವತ್ತು ವರ್ಷಗಳಷ್ಟು ದೀರ್ಘಕಾಲ ಆಡಿಟ್‌ಮಾಡಿ ಟ್ರಸ್ಟ್ ಉಳಿದು ಮತ್ತು ಬೆಳೆದು ಬರಲು ಕಾರಣರಾದ ವ್ಯಕ್ತಿ ನಾರಾಯಣಸ್ವಾಮಿರಾವ್. ಅವರು ವಾಸಿಸುತ್ತಿದ್ದದ್ದು ಮೈಸೂರಿನ ಸಿದ್ಧಾರ್ಥ ನಗರದಲ್ಲಿ. ತಮ್ಮ ಮನೆಗೆ ಟ್ರಸ್ಟಿನ ಲೆಕ್ಕಪತ್ರಗಳನ್ನು ತರಿಸಿಕೊಳ್ಳುತ್ತಿದ್ದರು. ಅಲ್ಲಿ ಲೆಕ್ಕಪತ್ರ ಪರಿಶೀಲಿಸಿದ ನಂತರ ಮೇಲುಕೋಟೆಗೆ ಬಂದು ಟ್ರಸ್ಟಿನ ಎಲ್ಲ ಕಾರ್ಯಕ್ರಮಗಳನ್ನು ಸ್ವತಃ ವೀಕ್ಷಿಸುತ್ತಿದ್ದರು. ಹಾಗೆ ಮಾಡುವುದರ ಮೂಲಕ ಆಡಿಟ್‌ಗೆ ಒಳಪಡಿಸಿದ ಲೆಕ್ಕಪತ್ರಗಳಿಗೂ, ಪ್ರತ್ಯಕ್ಷವಾಗಿ ನಡೆಯುತ್ತಿರುವ ಚಟುವಟಿಕೆಗಳಿಗೂ ಯತಾರ್ಥ ಸಂಬಂಧವಿದೆಯೇ ಅಥವಾ ಇಲ್ಲವೇ ಎಂದು ನೋಡುವುದೇ ಆಗಿರುತ್ತಿತ್ತು. ಹಾಗೆ ನೋಡಿಯಾದ ಮೇಲೆ ಟ್ರಸ್ಟಿನ ಕಾರ್ಯದರ್ಶಿಯವರೊಂದಿಗೆ ವಿವರಣೆಗಳನ್ನು ಪಡೆಯುತ್ತಿದ್ದರು. ತಮಗೆಲ್ಲ ಸಮಾಧಾನವಾದ ಮೇಲೆ ಅಂತಿಮವಾಗಿ ಆಡಿಟ್ ಲೆಕ್ಕಕ್ಕೂ ಮತ್ತು ತಮ್ಮ ವರದಿಗೂ ಸಹಿ ಹಾಕಿ, ಸಹಿ ಮತ್ತು ಸೀಲುಗಳೊಂದಿಗೆ ಕೊಡುತ್ತಿದ್ದರು. ವರದಿ ಮತ್ತು ಆಡಿಟ್ ಲೆಕ್ಕ ಬರೆಯಲು ಅಡ್ಡ ಗೆರೆಯಿರುವ ಹಾಳೆಗಳನ್ನು ಉಪಯೋಗಿಸುತ್ತಿದ್ದರು. ತಮಗೆ ಅಗತ್ಯವಾದ ರೀತಿ ಅಂಕಣಗಳನ್ನು ಮಾಡಿ ಹಸಿರು ಬಣ್ಣದ ಶಾಹಿಯಲ್ಲಿ ಬರೆಯುತ್ತಿದ್ದರು. ಅಷ್ಟೊಂದು ಪುಟಗಳ ಕೈಬರಹದಲ್ಲಿ ಕ್ವಚಿತ್ತಾಗಿ ತಪ್ಪುಗಳ ತಿದ್ದುಪಡಿ ಇರುತ್ತಿತ್ತು. ಯಾವುದೇ ತಾಂತ್ರಿಕ ಉಪಕರಣಗಳ ಸಹಾಯವಿಲ್ಲದೆ ಸ್ವತಃ ಪರಿಶ್ರಮದಿಂದ ತಯಾರಿಸಿದ ಆಡಿಟ್ ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದ ಶುಲ್ಕವು ಹೆಚ್ಚಾಗಿರುತ್ತಿರಲಿಲ್ಲ. ೧೯೬೦ರ ದಶಕದಲ್ಲಿ ಇಂದಿರಾ ವಿಕಾಸ ಪತ್ರವೆಂಬ ಯೋಜನೆ ಜಾರಿಯಲ್ಲಿತ್ತು. ಈ ಯೋಜನೆಯಡಿ ಅಂಚೆ ಕಛೇರಿಯಲ್ಲಿ ಖರೀದಿಸಲಾದ ವಿಕಾಸಪತ್ರದ ಮೊತ್ತ ಐದು ವರ್ಷಗಳ ನಂತರ ದ್ವಿಗುಣಗೊಳ್ಳುತ್ತಿತ್ತು. ಆ ಸಮಯದಲ್ಲಿಯೇ ಜನಪ್ರಿಯ ಸುಧಾ ವಾರಪತ್ರಿಕೆಯಲ್ಲಿ ಟ್ರಸ್ಟಿನ ಪ್ರಧಾನ ಚಟುವಟಿಕೆಯಾಗಿದ್ದ ಕರುಣಾಗೃಹದ ಬಗ್ಗೆ ಲೇಖನ ಪ್ರಕಟವಾಗಿತ್ತು.

ಈ ಲೇಖನವನ್ನು ಓದಿ ಪ್ರಭಾವಿತರಾದ ಓದುಗರು ಟ್ರಸ್ಟಿನ ಕಾರ್ಯಕ್ಕೆ ಹಣ ಕಳುಹಿಸಲಾರಂಭಿಸಿದರು. ಪ್ರತಿದಿನ ಹತ್ತಾರು ಮನಿಯಾರ್ಡರುಗಳು ಬರುತ್ತಿದ್ದವು. ನೂರು ರುಪಾಯಿಯಿಂದ ಐದು ನೂರು ರುಪಾಯಿವರೆಗೆ ಮನಿಯಾರ್ಡರ್ ಮೊತ್ತವಿರುತ್ತಿತ್ತು. ಹೀಗೆ ಬಂದ ಮೊತ್ತವನ್ನೆಲ್ಲ ವಿಕಾಸಪತ್ರದಲ್ಲಿ ತೊಡಗಿಸಲಾಗುತ್ತಿತ್ತು. ಒಂದೊಂದು ಮೊತ್ತಕ್ಕೂ ಒಂದೊಂದು ಪ್ರತ್ಯೇಕ ವಿಕಾಸಪತ್ರವನ್ನು ಅಂಚೆ ಇಲಾಖೆಯವರು ಕೊಡುತ್ತಿದ್ದರು. ಹೀಗಾಗಿ ಒಂದು ವರ್ಷ ಕಳೆಯುವುದರೊಳಗಾಗಿ ಸುಮಾರು ನೂರು ಇನ್ನೂರು ವಿಕಾಸಪತ್ರಗಳ ಸಂಗ್ರಹವಾಗಿದ್ದಿತು. ಈ ಎಲ್ಲ ವಿಕಾಸಪತ್ರಗಳ ಮೌಲ್ಯ ದ್ವಿಗುಣಗೊಳ್ಳುವ ವರ್ಷ ಒಂದೇ ಆಗಿತ್ತು. ಇದನ್ನು ನೋಡಿದ ನಾರಾಯಣಸ್ವಾಮಿ ತುಂಬ ಹರ್ಷಚಿತ್ತರಾಗಿದ್ದರು. ತುಂಬ ಖುಷಿಯಿಂದ ನಗುನಗುತ್ತಾ ಈ ನಿರ್ದಿಷ್ಟ ವರ್ಷದಂದು ಟ್ರಸ್ಟಿನಲ್ಲಿ ಹಣದ ಮಳೆಸುರಿಯುತ್ತದೆ ಎಂದು ಹೇಳುತ್ತಿದ್ದರು. ಅದರಂತೆ ಆಯಿತು. ದ್ವಿಗುಣಗೊಂಡ ಎಲ್ಲ ಮೊತ್ತವನ್ನು ಪುನಃ ವಿಕಾಸಪತ್ರದಲ್ಲಿಯೇ ತೊಡಗಿಸಲಾಯಿತು. ಕ್ರಮೇಣ ಅವೆಲ್ಲವುಗಳನ್ನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಠೇವಣಿಗಳನ್ನಾಗಿ ಪರಿವರ್ತಿಸಲಾಯಿತು. ನಾರಾಯಣಸ್ವಾಮಿಯವರು ಟ್ರಸ್ಟಿನ ಬಗ್ಗೆ ಮತ್ತು ಟ್ರಸ್ಟಿನ ಪದಾಧಿಕಾರಿಗಳ ಬಗ್ಗೆ ತುಂಬ ಪ್ರೀತಿ ಮತ್ತು ವಿಶ್ವಾಸವನ್ನು ಇಟ್ಟಿದ್ದರು. ಕೆಲಸದ ಸಂದರ್ಭದಲ್ಲಿ ಅವರ ಮನೆಗೆ ಹೋದಾಗ ನಾರಾಯಣಸ್ವಾಮಿ ದಂಪತಿಗಳು ಬಹು ಪ್ರೀತಿಯಿಂದ ಆತಿಥ್ಯ ಮಾಡುತ್ತಿದ್ದರು. ಇಷ್ಟೆಲ್ಲ ಆತ್ಮೀಯತೆ ಇದ್ದರೂ ಲೆಕ್ಕಪತ್ರಗಳ ಆಡಿಟ್ ವಿಷಯ ಬಂದಾಗ ನಿರ್ದಾಕ್ಷಿಣ್ಯವಾಗಿರುತ್ತಿದ್ದರು. ನಾರಾಯಣಸ್ವಾಮಿಯವರ ಪತ್ನಿಯವರ ಆರೋಗ್ಯ ಸರಿಯಿರಲಿಲ್ಲ. ಕಾಲಕ್ರಮೇಣ ತೀರಿಕೊಂಡರು. ಹೆಂಡತಿಯ ಸಾವಿನಿಂದ ಆಘಾತಗೊಂಡ ನಾರಾಯಣಸ್ವಾಮಿಯವರು ಹಾಸಿಗೆ ಹಿಡಿದರು. ವಿಷಾದದ ಸಂಗತಿಯೇನೆಂದರೆ ಅವರ ಅಸ್ವಸ್ಥತೆಯ ಕಾಲದಲ್ಲಿ ಅವರನ್ನು ಭೇಟಿ ಮಾಡಲು ಸಾಧ್ಯವಾಗಲೇ ಇಲ್ಲ. ಆಗ ಅವರು ಟ್ರಸ್ಟಿನವರು ಯಾರಾದರೂ ತಮ್ಮನ್ನು ಭೇಟಿಮಾಡಲು ಬರುತ್ತಾರೆಂಬ ನಿರೀಕ್ಷಣೆಯಲ್ಲಿ ಸದಾ ಇರುತ್ತಿದ್ದರು ಎಂಬುದಾಗಿ ನಂತರ ಅವರ ಮಗನಿಂದ ಗೊತ್ತಾಯಿತು. ಕೊನೆಗೊಂದು ದಿನ ನಾರಾಯಣಸ್ವಾಮಿಯವರು ತೀರಿಕೊಂಡರು. ಅವರು ತೀರಿಕೊಂಡ ಸಮಾಚಾರ ಕೇಳಿ ದೊಡ್ಡ ಆಘಾತವೆನಿಸಿತು; ದುಃಖವೂ ಆಯಿತು. ಅವರನ್ನು ಭೇಟಿಮಾಡಲಿಲ್ಲವೆಂದು ಅತೀವ ಪಶ್ಚಾತ್ತಾಪವಾಯಿತು. ಆದರೆ ಕಾಲ ಮಿಂಚಿತ್ತು. ಅವರು ತೀರಿಹೋಗಿ ಸುಮಾರು ಇಪ್ಪತ್ತು ವರ್ಷಗಳಾಗಿರಬಹುದು. ಆದರೂ ಕೂಡ ಅವರ ವ್ಯಕ್ತಿತ್ವ ಅಚ್ಚ ಹಸಿರಾಗಿಯೇ ಮನಸ್ಸಿನಲ್ಲಿದೆ. ಟ್ರಸ್ಟಿನ ಬೆಳವಣಿಗೆಗೆ ಧನಸಹಾಯದ ಮೂಲಕ ಸಹಾಯ ಮಾಡದೇ ಇದ್ದರೂ ಟ್ರಸ್ಟಿನ ಬಗೆಗಿದ್ದ ನಿಷ್ಕಲ್ಮಶ ಪ್ರೀತಿಯಿಂದ ಟ್ರಸ್ಟ್ ಬೆಳೆಯಲು ಸಹಾಯವಾದುದ್ದನ್ನು ಮರೆಯಲು ಸಾಧ್ಯವಿಲ್ಲ. ನಾರಾಯಣಸ್ವಾಮಿಯವರು ಟ್ರಸ್ಟಿನ ಮೇಲೆ ಹಣಕಾಸಿನ ವಿಷಯದ ಬಗ್ಗೆ ಇಟ್ಟಿದ್ದ ವಿಶ್ವಾಸವನ್ನು ಟ್ರಸ್ಟ್ ಉಳಿಸಿಕೊಂಡು ಬಂದಿದೆ. ನಾರಾಯಣಸ್ವಾಮಿ ಆಡಿಟ್ ಮಾಡುತ್ತಿದ್ದ ಕಾಲದಲ್ಲಿ ಇದ್ದ ನಿಗದಿತ ಠೇವಣಿಗಳು ಸುಭದ್ರವಾಗಿವೆ. ಒಂದೇ ಒಂದು ಠೇವಣಿಯನ್ನೂ ಟ್ರಸ್ಟಿನ ಕೆಲಸಕ್ಕೆ ನಗದೀಕರಣಗೊಳಿಸಿಕೊಂಡಿಲ್ಲ. ಎಲ್ಲವನ್ನೂ ನವೀಕರಣಗಳಿಸಿಕೊಂಡು ಬರಲಾಗಿದೆ. ಸ್ವಾಮಿಯವರ ಟ್ರಸ್ಟಿನ ವಿಶ್ವಾಸಕ್ಕೆ ಪ್ರತಿಯಾಗಿ ಟ್ರಸ್ಟಿನ ಈ ವಿಶ್ವಾಸದ ಕಾಣಿಕೆ.

ಸರ್ವೋದಯ ಆಂದೋಲನದ ಮುನ್ನಡೆ

ಶ್ರೀರಂಗಪಟ್ಟಣದ ಬಳಿ ಇರುವ ಕಾವೇರಿ ತೀರದ ಪಶ್ಚಿಮವಾಹಿನಿಯಲ್ಲಿ ಪ್ರತಿವರ್ಷದಂತೆ ಫೆಬ್ರವರಿ ೧೦,೧೧,೧೨ ದಿನಾಂಕಗಳಲ್ಲಿ ಸರ್ವೋದಯ ಮೇಳ ಯಶಸ್ವಿಯಾಗಿ ನಡೆಯಿತು. ಮೂರು ದಿನಗಳ ಅವಧಿಯಲ್ಲಿ ನಡೆದ ವಿವಿಧ ವಿಷಯಗಳ ಗೋಷ್ಠಿಯಲ್ಲಿ ಸುಮಾರು ಐನೂರು ಜನ ಸರ್ವೋದಯ ವಿಚಾರ ಪ್ರೇಮಿಗಳು ಭಾಗವಹಿಸಿದ್ದರು. ವಿವೇಕಾನಂದ ಯುತ್ ಮೂವ್‌ಮೆಂಟ್‌ನ ಸಂಚಾಲಕರಾದ ಡಾ॥ಬಾಲಸುಬ್ರಮಣ್ಯಂರವರು 'ಪ್ರಜಾಪ್ರಭುತ್ವದಲ್ಲಿ ನಿರಂತರ ವಿಚಕ್ಷಣೆ' ಎಂಬ ವಿಷಯವಾಗಿ; 'ಗಾಂಧೀ ಬೇಕೆ? ಬೇಡವೇ? ಏಕೆ?' ಎಂಬ ವಿಷಯವಾಗಿ ಡಾ॥ಹೆಚ್.ಆರ್.ಗೋವಿಂದಯ್ಯ; 'ಮಹಿಳಾ ಸಬಲೀಕರಣ' ಎಂಬ ವಿಷಯವಾಗಿ ಡಾ॥ಆರ್.ಇಂದಿರಾ ಮಾತನಾಡಿದರು. ಈ ಎಲ್ಲಾ ಗೋಷ್ಠಿಗಳಲ್ಲಿ ಹೆಚ್ಚು ಜನ ಭಾಗವಹಿಸಿ ತೀವ್ರವಾದ ಪ್ರಶ್ನೋತ್ತರಗಳಾದವು. ಫೆಬ್ರವರಿ ೧೦ರಂದು ನಡೆದ ಮುಕ್ತ ಚರ್ಚೆಯಲ್ಲಿ ನಲವತ್ತಕ್ಕೂ ಹೆಚ್ಚು ಯುವಕರು ಭಾಗವಹಿಸಿದ್ದರು. ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಸರ್ವೋದಯ ವಿಚಾರದ ಪ್ರಚಾರವನ್ನು ಬಿರುಸಾಗಿ ಕೈಗೊಳ್ಳುವುದಕ್ಕಾಗಿ ಸಮಿತಿಯೊಂದನ್ನು ರಚಿಸಲಾಯಿತು. ಮೇಳದ ಕೊನೆಯ ದಿನ ಕರ್ನಾಟಕ ಸರ್ವೋದಯ ಮಂಡಲದ ಅಧ್ಯಕ್ಷರಾದ ಸುರೇಂದ್ರ ಕೌಲಗಿಯವರು ಅಧ್ಯಕ್ಷತೆ ವಹಿಸಿ ಸಮಾರೋಪ ಭಾಷಣ ಮಾಡಿದರು. ತಮ್ಮ ಭಾಷಣದಲ್ಲಿ ಸರ್ವೋದಯ ವಿಚಾರದ ಪ್ರಸ್ತುತತೆ ಮತ್ತು ಆಂದೋಲನವನ್ನು ತೀವ್ರಗೊಳಿಸುವ ಅಗತ್ಯದ ಬಗ್ಗೆ ವಿಚಾರಗಳನ್ನು ಮಂಡಿಸಿದರು. ಮೂರು ದಿನಗಳ ಮೇಳದ ವ್ಯವಸ್ಥೆಯನ್ನು ಕುಂಬಾರಕೊಪ್ಪಲು, ಬೆಳಗೊಳ, ಸಿದ್ಧಲಿಂಗಪುರ, ಪಾಲಹಳ್ಳಿ ಮತ್ತು ಶ್ರೀರಂಗಪಟ್ಟಣ ಗ್ರಾಮಗಳ ಸರ್ವೋದಯ ವಿಚಾರ ಪ್ರೇಮಿಗಳು ಮಾಡಿದರು. ಭಾರತ ಸೇವಾ ದಳದ ಸ್ವಯಂ ಸೇವಕರು ಸೇವೆ ಸಲ್ಲಿಸಿದರು. ಮೇಳದ ಸಂಯೋಜಕರಾಗಿ ಡಾ॥ಎಂ.ಜಿ.ಬಸವರಾಜ್ ಮತ್ತು ಡಾ॥ಬಿ.ಸುಜಯ್‌ಕುಮಾರ್ ಕಾರ್ಯನಿರ್ವಹಿಸಿದರು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಡಾ॥ಸಿ.ಬಂದೀಗೌಡರನ್ನು ಸನ್ಮಾನಿಸಲಾಯಿತು. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಹಿರಿಯ ಸರ್ವೋದಯ ನಾಯಕರಾದ ಡಾ॥ಹೆಚ್.ಎಸ್. ದೊರೆಸ್ವಾಮಿ ಮತ್ತು ನಾಮದೇವ ಶಣ್ಯೆ ಉಪಸ್ಥಿತರಿದ್ದರು. ಚಿತ್ರದುರ್ಗ, ಉಡುಪಿ, ಮಂಗಳೂರು, ಮಂಡ್ಯ, ಹಾಸನ ಮತ್ತು ಮೈಸೂರು ಜಿಲ್ಲೆಗಳ ಸರ್ವೋದಯ ಮಿತ್ರರು ಭಾಗವಹಿಸಿದ್ದರು.

ಮಹಾತ್ಮಾ ಗಾಂಧೀ ಹುತಾತ್ಮರಾದ ಜನವರಿ ೩೦ರಂದು ಮಂಡ್ಯ ನಗರದಲ್ಲಿಯ ಶಂಕರೇಗೌಡ ಬಿ.ಎಡ್.ಕಾಲೇಜಿನಲ್ಲಿ ಮತ್ತು ಮೈಸೂರು ನಗರದ ಸೋಮಾನಿ ಕಾಲೇಜಿನಲ್ಲಿ ಸಭೆಗಳನ್ನು ಏರ್ಪಡಿಸಲಾಗಿತ್ತು. ಸೋಮಾನಿ ಕಾಲೇಜಿನಲ್ಲಿ ಹೊಸಹಳ್ಳಿ ಸುಧಾಕರ್‌ರವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿ ಸಮುದಾಯದ ಸರ್ವೋದಯ ಮಿತ್ರ ಮಂಡಳಿ ರಚಿತವಾಯಿತು.

ಖಾದಿ ವಿಚಾರ

ಇತ್ತೀಚಿಗೆ ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿಯಲ್ಲಿ ೨೦೧೨-೧೩ನೇ ಸಾಲಿನ ಖಾದಿ ಸಂಸ್ಥೆಗಳ ಬಜೆಟ್ ಮೀಟಿಂಗ್ ನಡೆಯಿತು. ಈ ಸಭೆಯಲ್ಲಿ ಸುಮಾರು ನೂರಾಐವತ್ತು ಖಾದಿ ಸಂಸ್ಥೆಗಳು ಭಾಗವಹಿಸಿದ್ದವು. ಇಷ್ಟರಲ್ಲಿಯೇ ಖಾದಿ ಆಯೋಗದಲ್ಲಿ ಇನ್ನೊಂದು ಸಭೆ ನಡೆದು ಬಜೆಟ್‌ಗೆ ಅಂತಿಮ ರೂಪ ಕೊಡಲಾಗುವುದು.

* * *

ಜನಪದ ಸೇವಾ ಟ್ರಸ್ಟ್‌ನಲ್ಲಿ ಖಾದಿ ಮಾರಾಟವನ್ನು ರಿಬೆಟ್ ಇಲ್ಲದೆ ಮಾಡಲಾಗುತ್ತಿದೆ. ಬಟ್ಟೆಯ ಗುಣಮಟ್ಟ ಮತ್ತು ಹೊಲಿಗೆ ಇತ್ಯಾದಿಗಳು ಗ್ರಾಹಕರಿಗೆ ತೃಪ್ತಿಕರವಾಗಿರುವುದರಿಂದ ಅವರು ಬಟ್ಟೆಯ ಮೂಲ ಬೆಲೆಯನ್ನು ಕೊಟ್ಟು ಖರೀದಿಸುತ್ತಾರೆ. ೨೦೧೦-೧೧ನೇ ಸಾಲಿನಲ್ಲಿ ಜನಪದ ಸೇವಾ ಟ್ರಸ್ಟ್‌ನ ಆಶ್ರಯದಲ್ಲಿ ರೂ ೧,೮೬,೪೨೦ರ ಮೌಲ್ಯದ ಖಾದಿ ಉತ್ಪಾದಿತವಾಯಿತು. ಈ ಉತ್ಪಾದನೆಯಲ್ಲಿ ಶರ್ಟಿಂಗ್, ಕರವಸ್ತ್ರ ಮತ್ತು ಟವೆಲ್ ಇತ್ಯಾದಿ ಸೇರಿವೆ. ಇದೇ ಅವಧಿಯಲ್ಲಿ ೪,೩೯,೨೫೪ ರುಪಾಯಿಗಳಷ್ಟು ಮೌಲ್ಯದ ಖಾದಿ ವ್ಯಾಪಾರವಾಯಿತು. ಈ ಸಾಲಿನಲ್ಲಿ ನೇಯ್ಗೆ ವಿಭಾಗದಲ್ಲಿ ೬, ಸಿದ್ಧ ಉಡುಪು ತಯಾರಿಕೆಯಲ್ಲಿ ೫ ಮತ್ತು ಮಾರಾಟ ವಿಭಾಗದಲ್ಲಿ ಒಬ್ಬರು. ಈ ರೀತಿಯಾಗಿ ೧೩ಜನ ಉದ್ಯೋಗ ಪಡೆದರು. ಈ ಸಾಲಿಗೆ ಮೊದಲು ಟ್ರಸ್ಟಿನಲ್ಲಿ ಖಾದಿ ಕೆಲಸ ಕುಂಠಿತವಾಗಿತ್ತು. ಈಗ ಅದು ಚೇತರಿಸಿಕೊಳ್ಳುತ್ತಿದೆ. ಮುಂದಿನ ವರ್ಷಗಳಲ್ಲಿ ಹೆಚ್ಚಿನ ಪ್ರಗತಿ ಸಾಧಿಸುವ ನಿರೀಕ್ಷೆ ಇದೆ. ಇಲ್ಲಿ ವಿಶೇಷ ಸಂಗತಿಯೇನೆಂದರೆ ಮಾರಾಟವಾದ ಎಲ್ಲ ಖಾದಿ ಬಟ್ಟೆ ರಿಬೆಟ್ ಇಲ್ಲದೆ ಆಗಿದೆ ಮತ್ತು ಖಾದಿ ಮಂಡಳಿ ಅಥವಾ ಆಯೋಗದಿಂದ ಧನಸಹಾಯ ಪಡೆಯದೆ ಆಗಿದೆ.

* * *

ಅಸಹಯೋಗ ಆಂದೋಲನದಲ್ಲಿ ಗಾಂಧೀಜಿ ಜನರಿಗೆ ಬೇರೆಯೇ ರೀತಿಯ ದೃಷ್ಟಿಕೋನ ಕೊಟ್ಟರು. ನಮ್ಮ ಗುಲಾಮಿಯ ಬಹುದೊಡ್ಡ ಕಾರಣ ವಿದೇಶಿ ಬಟ್ಟೆ. "ಆದ್ದರಿಂದ ನೀವು ಅದನ್ನು ಬಹಿಷ್ಕರಿಸಿ". ವಿದೇಶಿ ಬಟ್ಟೆಯು ಮಾಂಸ ಮತ್ತು ಹೆಂಡದಂತಿದೆ. ಇವು ಗಲೀಜು, ಗುಲಾಮಿಯ ಪ್ರತೀಕವೆಂದು ಕರೆದರು. ಈ ದುಶ್ಚಟಗಳ ಹೋಲಿ ಮಾಡಲು ಪ್ರೇರಣೆ ಕೊಟ್ಟರು. ವಿದೇಶಿ ಬಟ್ಟೆಯ ಹೋಲಿಯ ಮಾಧ್ಯಮದಿಂದ ಗಾಂಧೀಜಿ ಅಸಹಯೋಗ ಆಂದೋಲನದಲ್ಲಿ ಬಹಿಷ್ಕಾರದ ಜೋಡಣೆ ಮಾಡುತ್ತಾರೆ. "ಖಾದಿಯ ಸ್ವೀಕಾರ ಮತ್ತು ವಿದೇಶಿಯ ಬಹಿಷ್ಕಾರ", ಎಂಬ ಘೋಷಣೆ ಅಸಹಯೋಗದ ಮೂಲ ಉದ್ದೇಶ ಆಗುತ್ತದೆ. ೧೯೨೧ರಲ್ಲಿ ಗಾಂಧೀಜಿ ಈ ಆಂದೋಲನಕ್ಕೆ ಹೊಸ ತಿರುವು ಕೊಟ್ಟರು. ವಿದೇಶಿ ಬಟ್ಟೆ ನಮ್ಮ

ನರನಾಡಿಗಳ ರಕ್ತದಲ್ಲಿ ಅದ್ದಲ್ಪಟ್ಟಿದೆ. ಆದ್ದರಿಂದ ಈ ವಿದೇಶಿ ಬಟ್ಟೆಗಳ ಹೋಲಿ ಮಾಡುವುದರಿಂದಲೇ ನಮ್ಮ ಆತ್ಮಶುದ್ಧಿಯಾಗುತ್ತದೆ. ಮತ್ತು ನಮ್ಮ ಪೂರ್ವಜರ ಆತ್ಮಕ್ಕೆ ಶಾಂತಿದೊರೆಯುತ್ತದೆ ಎಂದು ಹೇಳುತ್ತಾರೆ. ೩೧ ಜುಲೈ ೧೯೨೧ರಂದು ಗಾಂಧೀಜಿ ಸ್ವತಃ ಮುಂಬೈಯ ಬಟ್ಟೆ ಗಿರಣಿಗಳಲ್ಲಿ ವಿದೇಶಿ ಬಟ್ಟೆಗಳ ಹೋಲಿ ಮಾಡಿ "ಮುಂಬೈ ಮಟ್ಟಿಗೆ ಇದು ಪುಣ್ಯದಿನ. ನಮ್ಮ ಗುಲಾಮಿಗೆ ಕಾರಣವಾಗಿರುವ ವಿದೇಶಿ ಬಟ್ಟೆಗಳ ಬಹಿಷ್ಕಾರದ ಮೂಲಕ ನಾವು ನಮ್ಮನ್ನು ಶುದ್ಧೀಕರಿಸಿಕೊಳ್ಳುತ್ತಿದ್ದೇವೆ. ಹೋಲಿಯ ಈ ಜ್ವಾಲೆ ಯಾವರೀತಿ ಮುಂಬೈಯ ಆಕಾಶಕ್ಕೆ ಮುತ್ತಿಡುತ್ತದೆಯೋ ಅದೇ ರೀತಿ ಮಾನವತೆಯ ಸಮುದ್ರ ಶುಭ್ರ ಖಾದಿ ಧರಿಸುತ್ತಿದೆ" ಎಂದು ನುಡಿದರು. ಗಾಂಧೀಜಿಯವರ ಮಟ್ಟಿಗೆ ಈ ಕ್ಷಣ ಆತ್ಮಉದ್ದೀಪಕದಂತೆ ಇತ್ತು. ಆದ್ದರಿಂದ ಅವರು ಇದಕ್ಕೆ ಯಜ್ಞದ ಉಪಮೆ ಕೊಟ್ಟರು. ಯಾವ ರೀತಿ ಎಲ್ಲಾ ಹಿಂದುಗಳಿಗೆ ಅಸ್ಪೃಶ್ಯತೆ ಪಾಪದಂತಿದೆಯೋ ಅದೇ ರೀತಿ ವಿದೇಶಿ ಬಟ್ಟೆಯ ಅಸ್ಪೃಶ್ಯತೆ ಎಲ್ಲಾ ಹಿಂದುಗಳಿಗೆ ಪುಣ್ಯಕರ್ಮವಾಗಿದೆ.

ಗಾಂಧೀಜಿ ಶರೀರ ಮುಚ್ಚಿಕೊಳ್ಳಲು ಅತಿ ಅವಶ್ಯಕ ಬಟ್ಟೆಯನ್ನಷ್ಟೇ ಧರಿಸುತ್ತಿದ್ದರು. ಆದಷ್ಟು ಕಡಿಮೆ ಬಟ್ಟೆ ಧರಿಸುವ ಪ್ರತೀಕವಾಗಿದ್ದರು. "ವಿದೇಶಿ ಬಟ್ಟೆಗಳ ಬಹಿಷ್ಕಾರ ಮತ್ತು ಹೋಲಿ ಹಿಂದೂಸ್ಥಾನದ ಪ್ರತಿಯೊಂದು ಹಳ್ಳಿ, ನಗರ ಮತ್ತು ಗಲ್ಲಿಗಳಲ್ಲಿ ಶುರುವಾಗಬೇಕು. ಎಲ್ಲಿಯವರೆಗೆ ಎಲ್ಲಾ ವಿದೇಶಿ ಬಟ್ಟೆ ಹಿಂದೂಸ್ಥಾನದ ಮನೆಗಳಿಂದ ದೂರವಾಗುವುದಿಲ್ಲವೋ ಅಲ್ಲಿಯವರೆಗೆ ಸತತವಾಗಿ ಉರಿಯುತ್ತಿರಬೇಕು" ಎಂದು ಹೇಳಿದರು. ಭಾರತದ ಇತಿಹಾಸದ ಅತ್ಯಂತ ಮಹತ್ವಪೂರ್ಣ ಘಟನೆ ಇದಾಗಿದೆ. ಆದರೆ ನಿಧಾನವಾಗಿ ಬಹಿಷ್ಕಾರದ ಈ ಆಂದೋಲನ ಯಾವಾಗ ದ್ವೇಷ ಮತ್ತು ಹಿಂಸೆಯ ರೂಪತಾಳಿತೋ ಆಗ ಭಾರತೀಯ ಸಂಸ್ಕೃತಿಯ ವಸುಧೈವ ಕುಟುಂಬಕದ ಭಾವನೆಗೆ ವಿರುದ್ಧ ಈ ಆಂದೋಲನ ಉಗ್ರವಾಗುತ್ತಾಹೋಗಿದೆ ಎಂದು ಗಾಂಧೀಜಿಗೆ ಅನಿಸಿತು. ಆದ್ದರಿಂದ ಅವರು ಅಸಹಯೋಗ ಆಂದೋಲನವನ್ನು ಹಿಂದೆಗೆದುಕೊಳ್ಳಲು ನಿರ್ಣಯಿಸಿದರು.

ತಮ್ಮ ಇಡೀ ಜೀವನ ಕಾಲದಲ್ಲಿ ಗಾಂಧೀಜಿ ಕುಕರ್ಮ ಮತ್ತು ದುಷ್ಟ ಮನುಷ್ಯರ ಮಧ್ಯೆ ಪ್ರತ್ಯೇಕತೆಯನ್ನು ಮಾಡುವ ಕೆಲಸಮಾಡಿದ್ದಾರೆ. ಅವರ ಸಿದ್ಧಾಂತ ಅವರ ರಾಜನೀತಿ ವ್ಯಕ್ತಿಯ ವಿರುದ್ಧವಿರಲಿಲ್ಲ. ಬದಲಿಗೆ ಕೆಟ್ಟ ಮೌಲ್ಯಗಳ ಬಗ್ಗೆ ವಿರೋಧವುಳ್ಳದ್ದಾಗಿತ್ತು. ಅವರು ಗವರ್ನರ್ ವಿರುದ್ಧವಿರಲಿಲ್ಲ. ಬದಲಿಗೆ ಅವನ ಮೂಲಕ ಜಾರಿಗೆ ಬಂದ ಶೋಷಣೆಯುಕ್ತ ವ್ಯವಸ್ಥೆಯ ವಿರುದ್ಧವಿತ್ತು. ಅವರ ರಾಜನೀತಿಯ ಮೂಲದಲ್ಲಿ ದ್ವೇಷವಿರದೆ ನ್ಯಾಯವಿತ್ತು. ನಾವು ವ್ಯಕ್ತಿಯ ವಿರುದ್ಧ ಆಕ್ರಮಣ ಮಾಡುವುದಲ್ಲ, ಬದಲಿಗೆ ಅನ್ಯಾಯಿ ವ್ಯವಸ್ಥೆ ವಿರುದ್ಧ ಆಕ್ರಮಣ ಮಾಡಬೇಕಿದೆ. ಈ ಕಾರಣಕ್ಕಾಗಿ ಅಸಹಯೋಗ ಆಂದೋಲನವನ್ನು ಹಿಂತೆಗೆದುಕೊಳ್ಳಬೇಕಾಯಿತು.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ

ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀಮತಿ ರಂಗಮಣಿ ಜನಾರ್ಧನ್ – ಬೆಂಗಳೂರು;
ಶ್ರೀ ಎಚ್.ಎಲ್.ಕೇಶವಮೂರ್ತಿ – ಮಂಡ್ಯ.

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀ ಎಚ್.ರಾಮಪ್ಪ – ಬೆಂಗಳೂರು;
ಶ್ರೀ ಜನಾರ್ಧನ್ (ಜನ್ನಿ), ಶ್ರೀ ಎನ್.ಚಂದ್ರಶೇಖರ್ – ಮೈಸೂರು;
ಶ್ರೀ ಕೆ.ವೆಂಕಟರಾಮು – ಚಾಮರಾಜನಗರ;
ಡಾ॥ ವಿ.ಕೆ.ಕೃಷ್ಣಪ್ಪ – ಮಂಡ್ಯ;
ಶ್ರೀ ಕೆ.ಎಸ್.ಚಂದ್ರಶೇಖರ್ – ಚಿಕ್ಕನಾಯಕನಹಳ್ಳಿ;

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 DTP Sanketh, Melkote. Printed at Sanketh, Mudrana, Melkote. Phone : 08236 – 299998 e-mail : janapada@yahoo.com web : janapada.net